# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 20 ಗುರುವಾರ 2025

ಸಂಪುಟ: 45 | ಸಂಚಿಕೆ: 303 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4




# ಇದೇ ತಿಂಗಳಿಂದ ಪ್ರತಿ ಫಲಾನುಭವಿಗೆ 10 ಕೆಜಿ ಅಕ್ಕಿ ವಿತರಣೆ

**• ಇದುವರೆಗೆ 5 ಕೆಜಿ ಅಕ್ಕಿ ಜೊತೆಗೆ ಉಳಿದ ಐದು ಕೆಜಿಗೆ 170 ರೂ. ಹಣ ನೀಡಲಾಗುತ್ತಿತ್ತು • ಈಗ ಕೇಂದ್ರದಿಂದ ಪೂರೈಕೆ ಹಿನ್ನೆಲೆಯಲ್ಲಿ ಪೂರ್ಣ ಪ್ರಮಾಣದಲ್ಲಿ ಅಕ್ಕಿ ವಿತರಣೆ • ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಎಚ್.ಮುನಿಯಪ್ಪ ಪ್ರಕಟ**

**ಬೆಂಗಳೂರು, ಫೆ.19(ಕೆಎಂಶಿ)– ಅನ್ನಭಾಗ್ಯ ಯೋಜನೆಯಡಿ ಫಲಾನುಭವಿಗಳಿಗೆ ಹಣಕ್ಕೆ ಬದಲು ಈ ತಿಂಗಳಿನಿಂದಲೇ ಐದು ಕೆ.ಜಿ. ಅಕ್ಕಿ ವಿತರಿಸಲಾಗುವುದು ಎಂದು ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಎಚ್. ಮುನಿಯಪ್ಪ ಇಂದಿಲ್ಲಿ ಪ್ರಕಟಿಸಿದ್ದಾರೆ.**

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಿಂದೆ ನೀಡುತ್ತಿದ್ದ ಐದು ಕೆ.ಜಿ. ಅಕ್ಕಿ ಜೊತೆಗೆ ಅನ್ನಭಾಗ್ಯ ಯೋಜನೆಯಡಿ ಪ್ರತಿ ಫಲಾನುಭವಿಗೆ ಹೆಚ್ಚುವರಿಯಾಗಿ ಐದು ಕೆ.ಜಿ. ಅಕ್ಕಿ ನೀಡಲಾಗುವುದು. ಕೇಂದ್ರ ಸರ್ಕಾರ ರಾಜ್ಯಕ್ಕೆ ಅಗತ್ಯವಾಗಿದ್ದ ಅಕ್ಕಿ ಪೂರೈಸದ ಕಾರಣ ಈ ಯೋಜನೆಯಡಿ ಅಕ್ಕಿ ಬದಲು ಪ್ರತಿ ಫಲಾನುಭವಿಗೆ ಮಾಸಿಕ 170 ರೂ.ಗಳನ್ನು ನೀಡಲಾಗುತ್ತಿತ್ತು. ಕಳೆದ ಜನವರಿವರೆಗೂ ಹಣವನ್ನು ಫಲಾನುಭವಿ ಖಾತೆಗೆ ವರ್ಗಾ ವಣೆ ಮಾಡಲಾಗುವುದು, ಈ ತಿಂಗಳಿಂದ ನಗದು ಬದಲು ಅಕ್ಕಿ ನೀಡಲು ತೀರ್ಮಾ ನಿಸಲಾಗಿದೆ. ಮಾರ್ಚ್ 10ರೊಳಗಾಗಿ ಫಲಾನುಭವಿಗಳಿಗೆ ಎರಡು ತಿಂಗಳ ಅಕ್ಕಿಯೂ ದೊರೆಯಲಿದೆ. ಎಂದಿನಂತೆ ಪಡಿತರ ಅಂಗಡಿಗಳಲ್ಲಿ ಅಕ್ಕಿ ಪಡೆದುಕೊಳ್ಳಬಹುದಾಗಿದೆ. ಸರ್ಕಾರದ ಈ ನಿರ್ಧಾರದಿಂದ ರಾಜ್ಯ ಬೊಕ್ಕಸಕ್ಕೆ ನೂರಾರು ಕೋಟಿ ರೂ. ಉಳಿತಾಯ ಆಗಲಿದೆ, ಕೇಂದ್ರ ಸರ್ಕಾರ ಪ್ರತಿ ಕೆ.ಜಿ.ಗೆ 22.50 ರೂ.ನಂತೆ ಅಕ್ಕಿ ಕೊಡಲು ಮುಂದೆ ಬಂದಿದೆ.


ಕೆ.ಎಚ್.ಮುನಿಯಪ್ಪ



ಫಲಾನುಭವಿಗಳಿಗೆ ಇದುವರೆಗೆ ಅಕ್ಕಿ ಬದಲು ಪ್ರತಿ ಕೆ.ಜಿ.ಗೆ 34 ರೂ.ನಂತೆ ಮಾಸಿಕ 170 ರೂ. ನೀಡುತ್ತಿದ್ದೆವು. ಕೇಂದ್ರ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಪ್ರಹ್ಲಾದ್ ಜೋಷಿ, ರಾಜ್ಯಕ್ಕೆ ಅಗತ್ಯವಿರುವ ಅಕ್ಕಿಯನ್ನು ಕಡಿಮೆ ದರಕ್ಕೆ ನೀಡಲು ತೀರ್ಮಾನಿಸಿರುವುದರಿಂದ, ನಮಗೆ ಪ್ರತಿ ಕೆ.ಜಿ.ಗೆ 11.50 ರೂ. ಉಳಿತಾಯವಾಗಲಿದೆ ಎಂದರು. ರಾಜ್ಯ ಸರ್ಕಾರ ಅನ್ನಭಾಗ್ಯ ಯೋಜನೆ ಜಾರಿಗೊಳಿಸಿದಾಗ ನಮಗೆ ಅಗತ್ಯವಿರುವ ಅಕ್ಕಿಯನ್ನು ನೀಡಲು ಕೇಂದ್ರ ನಿರಾಕರಿಸಿದ್ದರಿಂದ ಪ್ರತಿ ಫಲಾನುಭವಿಗೆ ಬಾಕಿ 5 ಕೆಜಿಯ ದರ ಮಾಸಿಕ 170 ರೂ.ಗಳನ್ನು ಅವರ ಬ್ಯಾಂಕ್ ಖಾತೆಗೆ ವರ್ಗವಣೆ ಮಾಡುತ್ತಿದ್ದೆವು. ಕಳೆದ ನವೆಂಬರ್‌ವರೆಗೆ ಹಣ ಸಂದಾಯವಾಗಿದೆ, ಡಿಸೆಂಬರ್ ಮತ್ತು ಜನವರಿ ತಿಂಗಳ ಹಣ ವರ್ಗಾವಣೆಗೆ ಸಿದ್ಧತೆ ನಡೆದಿದೆ.

ಇನ್ನು ಮುಂದೆ ಹಣದ ಬದಲು ಪ್ರತಿ ಫಲಾನುಭವಿ ಮಾಸಿಕ 10 ಕೆ.ಜಿ. ಅಕ್ಕಿಯನ್ನು ಉಚಿತವಾಗಿ ಪಡೆದುಕೊಳ್ಳಲಿದ್ದು, ಇದರಲ್ಲಿ ಕೇಂದ್ರದ ಐದು ಕೆ.ಜಿ. ಮತ್ತು ರಾಜ್ಯ ಸರ್ಕಾರದ ಐದು ಕೆ.ಜಿ. ಸೇರಿದೆ. ಕಳೆದ ಅಕ್ಟೋಬರ್‌ನಲ್ಲಿ 1,16,39,179 ಪಡಿತರ ಚೀಟಿಗಳ 4,12,16,838 ಫಲಾನುಭವಿಗಳಿಗೆ 676.79 ಕೋಟಿ ರೂ. ವರ್ಗಾವಣೆ ಮಾಡಲಾಗಿದೆ.

ಜುಲೈ 2023ರಿಂದ ಅಕ್ಟೋಬರ್ 2024ರವರೆಗೆ 10,452 ಕೋಟಿ ರೂ. ವರ್ಗಾವಣೆ ಮಾಡಲಾಗಿದ್ದು, ನವೆಂಬರ್, ಡಿಸೆಂಬರ್ ಮತ್ತು ಜನವರಿ ಹಣ ವರ್ಗಾವಣೆ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದರು. ಭಾರತ ಸರ್ಕಾರ 2013ರಲ್ಲಿ ಜಾರಿಗೆ ತಂದ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯನ್ನು ಮೊಟ್ಟ ಮೊದಲು ಜಾರಿಗೆ ತಂದ ರಾಜ್ಯ ಕರ್ನಾಟಕವಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಮೊದಲ ಮತ್ತು ಎರಡನೇ ಆಡಳಿತಾವಧಿಯಲ್ಲಿ ಅನ್ನಭಾಗ್ಯ ಯೋಜನೆಗೆ ಪ್ರಾಮುಖ್ಯತೆ ನೀಡುವ ಮೂಲಕ ಕರ್ನಾಟಕವನ್ನು ■ 6ನೇ ಪುಟಕ್ಕೆ

# ಮುಡಾ ಹಗರಣದಲ್ಲಿ ಸಿಎಂ ಸಿದ್ದರಾಮಯ್ಯರಿಗೆ ಲೋಕಾಯುಕ್ತ ಕ್ಲೀನ್‌ಚಿಟ್

**ಇಂದು ನ್ಯಾಯಾಲಯಕ್ಕೆ 'ಬಿ' ರಿಪೋರ್ಟ್; ಲೋಕಾಯುಕ್ತ ಪೊಲೀಸರಿಂದ ಸ್ನೇಹಮಯಿ ಕೃಷ್ಣಗೆ ನೋಟೀಸ್**







**ಮೈಸೂರು, ಫೆ.19– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ (ಮುಡಾ) ಅಕ್ರಮವಾಗಿ ನಿವೇಶನಗಳನ್ನು ಪಡೆದಿರುವ ಆರೋಪಕ್ಕೆ ಗುರಿಯಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಅವರ ಕುಟುಂಬಕ್ಕೆ ದೊಡ್ಡ ರಿಲೀಫ್ ಸಿಕ್ಕಿದೆ.**

ಪ್ರಕರಣದ ತನಿಖೆ ನಡೆಸುತ್ತಿರುವ ಲೋಕಾಯುಕ್ತ ಪೊಲೀಸರು, ಮುಖ್ಯಮಂತ್ರಿ ಸಿದ್ದರಾಮಯ್ಯ, ಅವರ ಪತ್ನಿ ಪಾರ್ವತಿ, ಪಾರ್ವತಿಯವರ ಸಹೋದರ ಮಲ್ಲಿಕಾರ್ಜುನಸ್ವಾಮಿ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ಕ್ಲೀನ್ ಚಿಟ್ ನೀಡಿದೆ. ಫೆ.20ರಂದು ಈ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲು ಲೋಕಾಯುಕ್ತ ಸಿದ್ಧತೆ ನಡೆಸಿದೆ.

ವರದಿಯಲ್ಲಿ ಸಿದ್ದರಾಮಯ್ಯ ಹಾಗೂ ಅವರ ಕುಟುಂಬಸ್ಥರ ಮೇಲಿರುವ ಆರೋಪಗಳ ಸಾಬೀತುಪಡಿಸಲು ಬೇಕಾದ ಸಾಕ್ಷ್ಯಾಧಾರಗಳು ತಮ್ಮ ತನಿಖೆಯಲ್ಲಿ ಸಿಕ್ಕಿಲ್ಲ ಎಂದು ಹೇಳಿ ಈ ನಾಲ್ವರ ಬಗ್ಗೆ ಬಿ ರಿಪೋರ್ಟ್ ಸಲ್ಲಿಸಲು ■ 6ನೇ ಪುಟಕ್ಕೆ

## ಅವರು ಹೇಳಿದಂತೆ ತನಿಖೆ ಮಾಡಬೇಕಾ?

**ಬೆಂಗಳೂರು:** ಮುಡಾ ನಿವೇಶನ ಅಕ್ರಮ ಹಂಚಿಕೆ ಪ್ರಕರಣದಲ್ಲಿ ಲೋಕಾಯುಕ್ತ ಪೊಲೀಸರು ಸಿಎಂ ಸಿದ್ದರಾಮಯ್ಯ ಅವರಿಗೆ ಕ್ಲೀನ್ ಚಿಟ್ ನೀಡಿದ್ದಾರೆ. ಲೋಕಾಯುಕ್ತ ಪೊಲೀಸರ ಈ ನಡೆಗೆ ಬಿಜೆಪಿ ತೀವ್ರ ವಿರೋಧ ವ್ಯಕ್ತಪಡಿಸಿದ್ದು, ಇತ್ತ ಸಿಎಂ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ ಬಿಜೆಪಿ ವಿರುದ್ಧ ತೀಕ್ಷ್ಣವಾಗಿ ವಾಗ್ದಾಳಿ ನಡೆಸಿದ್ದಾರೆ. ವಿಧಾನಸೌಧದಲ್ಲಿ ಬುಧವಾರ ಮಾತನಾಡಿದ ಅವರು, ಈ ಪ್ರಕರಣದಲ್ಲಿ ಮುಖ್ಯಮಂತ್ರಿಗಳ ಪಾತ್ರ ಇಲ್ಲ ಅಂದ ಮೇಲೆ ಯಾರ ಪಾತ್ರವೂ ಇಲ್ಲ. ಒಬ್ಬರು ಸಿಎಂ, ಇನ್ನೊಬ್ಬರು ಮುಖ್ಯಮಂತ್ರಿಗಳ ಭಾವ, ■ 6ನೇ ಪುಟಕ್ಕೆ


ಪೊನ್ನಣ್ಣ

## ಇದೊಂದು ತನಿಖೆ ಅಂತಾ ಕರೀಬೇಕಾ!

**ಬೆಂಗಳೂರು:** ಮುಡಾ ಅಕ್ರಮ ಕೇಸ್‌ನಲ್ಲಿ ಸಿಎಂ ಅಡಿ ಇರುವ ಲೋಕಾಯುಕ್ತ ಸಂಸ್ಥೆ ಅವರಿಗೆ ಕ್ಲೀನ್‌ಚಿಟ್ ಕೊಡಲಿದೆ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಪರೋಕ್ಷವಾಗಿ ಸುಳಿವು ಕೊಟ್ಟಿದ್ದಾರೆ. ಮುಡಾ ಅಕ್ರಮ ತನಿಖೆ ಲೋಕಾಯುಕ್ತದಿಂದ ವರದಿ ಸಲ್ಲಿಕೆ ಬಗ್ಗೆ ಪ್ರತಿಕ್ರಿಯೆ ನೀಡಿದ ಅವರು, ಲೋಕಾಯುಕ್ತ ತನಿಖೆಯನ್ನು ತನಿಖೆ ಅಂತ ಕರೆಯಬೇಕಾ? ತನಿಖೆ ಮಾಡಿದ ಅಧಿಕಾರಿ ವರದಿ ಕೊಡೋಕೆ ಮೇಲಿನ ಅಧಿಕಾರಿ ಹತ್ರ ಅನುಮತಿ ಪಡೆಯಬೇಕಂತೆ. ವರದಿ ಮೊದಲು ಮೇಲಾಧಿಕಾರಿಗಳಿಗೆ ಕೊಟ್ಟು, ■ 6ನೇ ಪುಟಕ್ಕೆ


ಕುಮಾರಸ್ವಾಮಿ

## ವಾಷಿಂಗ್ ನಿರ್ಮಾ ಪೌಡರ್ ಹಾಕಿ ತೊಳೆದಿದ್ದಾರೆ...

**ಬೆಂಗಳೂರು:** ಮುಡಾ ಹಗರಣದ ಸಂಬಂಧ ಲೋಕಾಯುಕ್ತ ಅಧಿಕಾರಿಗಳು ನಾಳೆ ವರದಿ ಕೊಡುತ್ತಿದ್ದು, ಅವರು ಅಧಿಕಾರಿಗಳ ಮೇಲೆ ಗೂಬೆ ಕೂರಿಸುತ್ತಾರೆ. ಸಿಎಂ ಸಿದ್ದರಾಮಯ್ಯನವರ ಕುಟುಂಬದವರು ಮುಗ್ಧರು. ಕ್ಲೀನ್‌ಚೀಟ್ ಅಲ್ಲ, ನಿರ್ಮಾ ಪೌಡರ್ ಹಾಕಿ ತೊಳೆದಿದ್ದಾರೆ ಎಂದು ಲೋಕಾಯುಕ್ತ ವರದಿಗೆ ವ್ಯಂಗ್ಯವಾಡಿದರು.

ಈ ಬಗ್ಗೆ ಬೆಂಗಳೂರಿನಲ್ಲಿ ಮಾಧ್ಯಮಗಳ ಜೊತೆ ಮಾತನಾಡಿದ ಅಶೋಕ್, ಏನು ಇಲ್ಲ ಅಂದರೆ ದುಬಾರಿ ವಕೀಲರನ್ನ ಏಕೆ ಕರೆತಂದ್ರಿ? ಹಳ್ಳಿಯ ವಕೀಲರಿಂದ ಕೇಸ್ ಎದುರಿಸಬಹುದಿತ್ತು ಅಲ್ವಾ, ಇದು ಕೇಸ್ ಮುಚ್ಚಿ ಹಾಕುವ ಹುನ್ನಾರ. ■ 6ನೇ ಪುಟಕ್ಕೆ


ಅಶೋಕ್

# ರೇಖಾ ಗುಪ್ತಾ ದೆಹಲಿಯ ನೂತನ ಮುಖ್ಯಮಂತ್ರಿ

**ಪರ್ವೇಶ್ ವರ್ಮಾ ಡಿಸಿಎಂ, ರಾಮಲೀಲಾ ಮೈದಾನದಲ್ಲಿ ಇಂದು ಪ್ರಮಾಣ ವಚನ**

ನವದೆಹಲಿ, ಫೆ.19–ದೆಹಲಿ ವಿಧಾನ ಸಭೆ ಚುನಾವಣೆ ಫಲಿತಾಂಶ ಹೊರಬಿದ್ದ ಬರೋಬ್ಬರಿ 11 ದಿನಗಳ ಬಳಿಕ ನೂತನ ಮುಖ್ಯಮಂತ್ರಿ ಹೆಸರನ್ನು ಬಿಜೆಪಿ ಅಂತಿಮಗೊಳಿಸಿದೆ. ರೇಖಾ ಗುಪ್ತ ಅವರು ರಾಷ್ಟ್ರ ರಾಜಧಾನಿಯ ನೂತನ ಸಿಎಂ ಎಂದು ಕಮಲ ಪಕ್ಷ ಘೋಷಣೆ ಮಾಡಿದೆ.

ನೂತನ ಬಿಜೆಪಿ ಸರ್ಕಾರದಲ್ಲಿ ಉಪ ಮುಖ್ಯಮಂತ್ರಿ ಸ್ಥಾನವೂ ಇರಲಿದ್ದು, ಮಾಜಿ ಸಿಎಂ ಪುತ್ರ ಪರ್ವೇಶ್ ವರ್ಮಾ ಅವರನ್ನು ಈ ಸ್ಥಾನಕ್ಕೆ ಭಾರತೀಯ ಜನತಾ ಪಕ್ಷ ಆಯ್ಕೆ ಮಾಡಿದೆ. ರೇಖಾ ಗುಪ್ತಾ ಅವರು ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾಗಿದ್ದಾರೆ. ಇವರು ಈ ಹಿಂದೆ ದೆಹಲಿ ವಿವಿಯ ವಿದ್ಯಾರ್ಥಿ ಸಂಘದ ಅಧ್ಯಕ್ಷೆಯಾಗಿದ್ದರು. ಇದೀಗ ಮುಖ್ಯಮಂತ್ರಿಯಾಗಿ ಆಯ್ಕೆಯಾಗುವ ಮೂಲಕ ಇವರು ರಾಷ್ಟ್ರ ರಾಜಧಾನಿಯ ನಾಲ್ಕನೇ ಮಹಿಳಾ ಮುಖ್ಯಮಂತ್ರಿ ಆಗಲಿದ್ದಾರೆ. ಈ ಹಿಂದೆ ಬಿಜೆಪಿಯಿಂದ ಸುಷ್ಮಾ ಸ್ವರಾಜ್, ಕಾಂಗ್ರೆಸ್‌ನಿಂದ ■ 6ನೇ ಪುಟಕ್ಕೆ


ನೂತನ ಮುಖ್ಯಮಂತ್ರಿ ರೇಖಾ ಗುಪ್ತ, ಉಪ ಮುಖ್ಯಮಂತ್ರಿ ಪರ್ವೇಶ್ ವರ್ಮಾ(ಬಲಬದಿ) ಅವರನ್ನು ಬಿಜೆಪಿ ಮುಖಂಡರು ಅಭಿನಂದಿಸಿದರು.

## ಕಾನೂನಾತ್ಮಕ ಹೋರಾಟ ಮಾಡುವೆ; ಆರೋಪಿಗಳಿಗೆ ಶಿಕ್ಷೆ ಕೊಡಿಸುವೆ

ಮೈಸೂರು, ಫೆ.19(ಬಿಎಲ್‌ಯು)– ಮುಡಾ ನಿವೇಶನ ಹಂಚಿಕೆ ಹಗರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕ್ಲೀನ್‌ಚಿಟ್ ಕೊಡಿಸುತ್ತಿರುವ ಮೈಸೂರು ಲೋಕಾಯುಕ್ತ ಎಸ್ಪಿ ಟಿ.ಜೆ. ಉದೇಶ್ ವರದಿ ಆಕ್ಷೇಪಿಸಿ ಕಾನೂನಾತ್ಮಕ ಹೋರಾಟ ಮಾಡಿ ಆರೋಪಿಗಳಿಗೆ ಶಿಕ್ಷೆ ಕೊಡಿಸುವುದು ಶತಸಿದ್ಧ ಎಂದು ದೂರುದಾರ ಸ್ನೇಹಮಯಿ ಕೃಷ್ಣ ಪ್ರತಿಜ್ಞೆ ಮಾಡಿದ್ದಾರೆ. ಸಿದ್ದರಾಮಯ್ಯ ವಿರುದ್ಧದ ಮುಡಾ ಪ್ರಕರಣ ವಜಾ ಮಾಡುತ್ತಿರುವ ಬಗ್ಗೆ ಮೇಲ್ಮನವಿ ಸಲ್ಲಿಸಲು ಅವಕಾಶ ನೀಡಿ ಲೋಕಾಯುಕ್ತ ಎಸ್ಪಿ ಉದೇಶ್ ತಮಗೆ ನೀಡಿರುವ ನೋಟಿಸ್‌ಗೆ ಸ್ನೇಹಮಯಿ ಕೃಷ್ಣ ಪ್ರತಿಕ್ರಿಯೆ ನೀಡಿದ್ದಾರೆ.


ಕೃಷ್ಣ

ಮುಖ್ಯಮಂತ್ರಿ ಸಿದ್ದರಾಮಯ್ಯ ಪರವಾಗಿ ವರದಿ ನೀಡುತ್ತಾರೆ ಎಂಬ ನಿರೀಕ್ಷೆ ಇತ್ತು. ಆದ ಕಾರಣ ಈ ಪ್ರಕರಣವನ್ನು ಸಿಬಿಐಗೆ ವಹಿಸುವಂತೆ ಹೈಕೋರ್ಟ್‌ನಲ್ಲಿ ಮನವಿ ಮಾಡಿದ್ದೆ. ■ 6ನೇ ಪುಟಕ್ಕೆ








# ವಿದ್ಯುತ್ ದರ ಏರಿಕೆಗೆ ಗ್ರಾಹಕರ ತೀವ್ರ ವಿರೋಧ

**ಮೈಸೂರಲ್ಲಿ ದರ ಹೆಚ್ಚಳ ಸಂಬಂಧ ಸಾರ್ವಜನಿಕರಿಂದ ಕೆಇಆರ್‌ಸಿ ಅಭಿಪ್ರಾಯ ಸಂಗ್ರಹ**

**■ ಚೆಸ್ಕಾಂ ಭ್ರಷ್ಟಾಚಾರದ ಬಗ್ಗೆ ಕಿಡಿ: ಸಣ್ಣ ಕೈಗಾರಿಕೆಗಳ ಹಿತ ಕಾಪಾಡಿ ■ ಮೈಸೂರು ಅರಮನೆ ವಿದ್ಯುದ್ದೀಕರಣ ಕೈಗಾರಿಕಾ ವಲಯಕ್ಕೆ ಸೇರಿಸಬೇಡಿ ■ ನಮ್ಮ ಠೇವಣಿಗೆ ನ್ಯಾಯಯುತ ಬಡ್ಡಿ ನೀಡಿ**



ಮೈಸೂರು, ಫೆ.19(ಬಿಎಲ್‌ಯು)– ವಿದ್ಯುತ್ ದರ ಏರಿಕೆಗೆ ತೀವ್ರ ವಿರೋಧ, ಚೆಸ್ಕಾಂ ಭ್ರಷ್ಟಾಚಾರಕ್ಕೆ ಭಾರಿ ಆಕ್ರೋಶ, ಟೆಲಿಫೋನ್ ಹಾಗೂ ಕೇಬಲ್ ಟಿವಿ ಕಂಪನಿಗಳಿಗೆ ದರ ವಿಧಿಸಿ, ಸಣ್ಣ ಕೈಗಾರಿಕೆಗಳ ಹಿತ ಕಾಪಾಡಿ, ಮೈಸೂರು ಅರಮನೆ ವಿದ್ಯುದ್ದೀಕರಣವನ್ನು ಕೈಗಾರಿಕಾ ವಲಯಕ್ಕೆ ಸೇರಿಸಬೇಡಿ, ವಿದ್ಯುತ್ ಠೇವಣಿಗೆ ನ್ಯಾಯಯುತ ಬಡ್ಡಿ ಕೊಡಿ, ವಿಶೇಷ ಹೂಡಿಕೆ ವಲಯಗಳಿಗೆ ರಿಯಾಯಿತಿ ಮುಂದುವರೆಸಿರಿ.

ವಿದ್ಯುತ್ ದರ ಏರಿಕೆ ಮಾಡುವಂತೆ ಚೆಸ್ಕಾಂ ಸಲ್ಲಿಸಿರುವ ಪ್ರಸ್ತಾವನೆ ಸಂಬಂಧ ಕೆಇಆರ್‌ಸಿ (ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ) ಮೈಸೂರಿನಲ್ಲಿ ಇಂದು ನಡೆಸಿದ ಸಾರ್ವಜನಿಕ ಅಭಿಪ್ರಾಯ ಸಂಗ್ರಹ ಸಭೆಯಲ್ಲಿ ಚೆಸ್ಕಾಂ ವ್ಯಾಪ್ತಿಯ ಮೈಸೂರು, ಕೊಡಗು, ಹಾಸನ, ಮಂಡ್ಯ ಹಾಗೂ ಚಾಮರಾಜನಗರದ ಗ್ರಾಹಕರು, ರೈತರು, ಕೈಗಾರಿಕೋದ್ಯಮಿಗಳು, ವಿದ್ಯುತ್ ಗುತ್ತಿಗೆದಾರರು ಸ್ಪಷ್ಟಪಡಿಸಿದ ವಿಚಾರಗಳಿವು. ಮೈಸೂರಿನ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಕೆಇಆರ್‌ಸಿ ಅಧ್ಯಕ್ಷ ಪಿ. ರವಿಕುಮಾರ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕೆಇಆರ್‌ಸಿ ಸದಸ್ಯರಾದ ಹೆಚ್.ಕೆ.ಜಗದೀಶ್ ಹಾಗೂ ಜಾವೇದ್ ಭಾಗವಹಿಸಿದ್ದರು. ಸಭೆಯಲ್ಲಿ ವಿದ್ಯುತ್ ದರ ಹೆಚ್ಚಳದಿಂದ ■ 6ನೇ ಪುಟಕ್ಕೆ





ಮೈಸೂರಿನ ಜಿಲ್ಲಾ ಪಂಚಾಯತ್‌ನ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಬುಧವಾರ ವಿದ್ಯುತ್ ದರ ಹೆಚ್ಚಳ ಕುರಿತು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ ಸಾರ್ವಜನಿಕರ ಅಭಿಪ್ರಾಯ ಸಂಗ್ರಹಿಸಿತು.

## ಟೆಲಿಕಾಂ, ಕೇಬಲ್ ಟಿವಿಗಳಿಗೆ ದರ ವಿಧಿಸಿದರೆ ಸಾವಿರಾರು ಕೋಟಿ ಆದಾಯ ಬರುತ್ತೆ

ಏರ್‌ಟೆಲ್, ಜಿಯೋ ಸೇರಿದಂತೆ ಹಲವು ಟೆಲಿಕಾಂ ಕಂಪನಿಗಳು ಸಂಪರ್ಕ ನೀಡಲು ತಮ್ಮ ಕೇಬಲ್‌ಗಳನ್ನು ಚೆಸ್ಕಾಂ ಅಳವಡಿಸಿರುವ ಕಂಬಗಳನ್ನು ಬಳಸುತ್ತಿದ್ದಾರೆ. ಅಷ್ಟೇ ಅಲ್ಲದೆ ಕೇಬಲ್ ಟಿವಿ ಕೇಬಲ್‌ಗಳನ್ನು ಕೂಡ ವಿದ್ಯುತ್ ಕಂಬಗಳ ಮೂಲಕ ಸಂಪರ್ಕ ನೀಡುತ್ತಿದ್ದಾರೆ. ಇದರಲ್ಲೇ ಸಾವಿರಾರು ಕೋಟಿ ಆದಾಯ ಸೋರಿಕೆಯಾಗಿದೆ ಎಂದು ಇಂಡಸ್ಟ್ರಿಯಲ್ ಏರಿಯಾ ಮ್ಯಾನುಫ್ಯಾಕ್ಚರ್ಸ್ ಅಸೋಸಿಯೇಷನ್ ಅಧ್ಯಕ್ಷ ರವೀಂದ್ರ ಪ್ರಭು ಆರೋಪಿಸಿದರು.

ರಾಜ್ಯಾದ್ಯಂತ ಎಷ್ಟು ವಿದ್ಯುತ್ ಕಂಬಗಳಿವೆ ಎಂಬ ಬಗ್ಗೆ ಪೋಲ್ ಸರ್ವೆ ಮಾಡಿಸಬೇಕು. ಒಂದು ವಿದ್ಯುತ್ ಕಂಬಕ್ಕೆ ಕನಿಷ್ಠ 100 ರೂ. ಶುಲ್ಕ ವಿಧಿಸಿದರೆ ಸಾವಿರಾರು ಕೋಟಿ ರೂಪಾಯಿ ಆದಾಯ ಬರುತ್ತದೆ. ಇದರಿಂದ ವಿದ್ಯುತ್ ದರ ಹೆಚ್ಚಳ ಮಾಡುವ ಪ್ರಮೇಯವೇ ಬರುವುದಿಲ್ಲ. ಕಾರ್ಪೊರೇಟ್ ಕಂಪನಿಗಳಿಗೆ ಅನುಕೂಲ ಮಾಡಿಕೊಟ್ಟು ಜನ ಸಾಮಾನ್ಯರು ಬಳಸುವ ವಿದ್ಯುತ್‌ಗೆ ದರ ಹೆಚ್ಚಳ ಮಾಡಿದರೆ ಹೇಗೆ ಎಂದು ಪ್ರಶ್ನಿಸಿದರು.

ವಿದ್ಯುತ್ ಕಂಬ ಬಳಕೆ ಮಾಡುತ್ತಿರುವ ಟೆಲಿಕಾಂ ಹಾಗೂ ಕೇಬಲ್ ಟಿವಿ ಕಂಪನಿಗಳಿಗೆ ವಿಧಿಸಿದ ಶುಲ್ಕದಿಂದ 72 ಲಕ್ಷ ಆದಾಯ ಬಂದಿದೆ ಎಂದು ಚೆಸ್ಕಾಂ ಅಧಿಕಾರಿಯೊಬ್ಬರು ಸ್ಪಷ್ಟನೆ ನೀಡಿದರು. ಪ್ರತಿಯೊಂದು ವಿದ್ಯುತ್ ಕಂಬಕ್ಕೂ ದರ ವಿಧಿಸಿದರೆ ಲಕ್ಷ ದಾಟಿ ಕೋಟ್ಯಾಂತರ ರೂಪಾಯಿ ಆದಾಯ ಬರುತ್ತದೆ ಎಂದು ರವೀಂದ್ರ ಪ್ರಭು ತಿಳಿಸಿದರು.

## ವಿದ್ಯುತ್ ಕಂಬ, ಕೇಬಲ್‌ಗಳು ಮಾಯ

ವಿದ್ಯುತ್ ಕಂಬಗಳು ಧರಶಾಯಿಯಾದಾಗ ಹೊಸ ವಿದ್ಯುತ್ ಕಂಬ ಹಾಗೂ ಹೊಸ ಕೇಬಲ್ ಅಳವಡಿಸಲಾಗುತ್ತದೆ. ಆದರೆ ಹಳೆಯ ವಿದ್ಯುತ್ ಕಂಬ ಹಾಗೂ ಕೇಬಲ್‌ಗಳನ್ನು ಉಗ್ರಾಣಕ್ಕೆ ನೀಡದೆ ಮಾರಾಟ ಮಾಡಿಕೊಳ್ಳುತ್ತಿದ್ದಾರೆ ಎಂದು ಸುಬ್ಬೇಗೌಡ ಆಪಾದಿಸಿದರು. ಅಧಿಕಾರಿಗಳು ಹಾಗೂ ನೌಕರರು ಕಚೇರಿಯಲ್ಲಿ ಸಿಗುವುದಿಲ್ಲ. ಇದರಿಂದ ಜನ ಸಾಮಾನ್ಯರಿಗೆ ತೊಂದರೆ ಆಗಿದೆ ಎಂದು ದೂರಿದರು. ಸಣ್ಣ ಕೈಗಾರಿಕೆಗಳಿಂದ ವಿದ್ಯುತ್ ಕಂಪನಿಗಳು 1200 ಕೋಟಿ ಠೇವಣಿ ಇಟ್ಟುಕೊಂಡಿದೆ. ಇದಕ್ಕೆ ಶೇ.6.75 ಬಡ್ಡಿ ನೀಡುತ್ತಿದೆ. ಬ್ಯಾಂಕ್‌ಗಳು ನಮ್ಮಿಂದ ಶೇಕಡ 13 ರಷ್ಟು ಬಡ್ಡಿ ಪಡೆಯುತ್ತವೆ. ಆದರೆ ನಮಗೆ ಶೇ.6.75 ಬಡ್ಡಿ ನೀಡುವುದು ಎಷ್ಟರ ಮಟ್ಟಿಗೆ ಸರಿ ಎಂದು ಸುರೇಶ್‌ಕುಮಾರ್ ಜೈನ್ ಪ್ರಶ್ನಿಸಿದರು.

## ಭಾರತೀಯ ಜೈನ ಸಂಘಟನೆ ಅಧ್ಯಕ್ಷರಾಗಿ ರಾಜನ್ ಬಾಗ್ಮಾರ್, ಮುಖ್ಯ ಕಾರ್ಯದರ್ಶಿ ದೀಪಕ್‌ಕುಮಾರ್ ಜೈನ್




ರಾಜನ್ ಬಾಗ್‌ಮಾರ್ ದೀಪಕ್‌ಕುಮಾರ್

ಮೈಸೂರು,ಫೆ.19–ಭಾರತೀಯ ಜೈನ ಸಂಘಟನೆ, ಮೈಸೂರು ಘಟಕದ ವಾರ್ಷಿಕ ಮಹಾಸಭೆಯು ಫೆ.15ರಂದು ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ನಡೆಯಿತು.

ನವಕಾರ ಮಹಾಮಂತ್ರ ಪಠಣದ ನಂತರ ಸಭೆಯು ಪ್ರಾರಂಭವಾಯಿತು. ಅಧ್ಯಕ್ಷ ಪ್ರವೀಣ್ ಲುಂಕರ್ ಸ್ವಾಗತಿಸಿದರು. ಕಾರ್ಯದರ್ಶಿ ಕುಶಾಲ್ ಪಾಲರೆಚಾ ಅವರು ಹಿಂದಿನ ಅವಧಿಯ ವರದಿಯನ್ನು ಮಂಡಿಸಿದರು. ಕರ್ನಾಟಕ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಗುಲೇಚ, ಮೈಸೂರು ಘಟಕದ ಪೂರ್ವ ಅಧ್ಯಕ್ಷರಾದ ಪ್ರಕಾಶ್ ಶ್ರೀಮಾಲ್, ವಿಮಲ್ ಪಿಟಾಲಿಯಾ, ಮಾಜಿ ಕಾರ್ಯದರ್ಶಿ ಶ್ರೀಮತಿ ನಿಶಾ ರಾಯಸಾನಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

2025–26ರ ಅವಧಿಗೆ ಆಯ್ಕೆಗಳು ನಡೆದವು. ಎಸ್.ರಾಜನ್ ಬಾಗ್ಮಾರ್ ಅಧ್ಯಕ್ಷರಾಗಿ, ಬಿ.ಕೆ.ದೀಪಕ್‌ಕುಮಾರ್ ಜೈನ್ (ಬೊಹರಾ) ಮುಖ್ಯ ಕಾರ್ಯದರ್ಶಿಯಾಗಿ ಮತ್ತು ಮನೋಹರ್ ಸಂಖಾಲಾ ಖಜಾಂಚಿಯಾಗಿ ಆಯ್ಕೆಯಾದರು. ಕುಶಾಲ್ ಪಾಲರೆಚಾ, ಅಮಿತ್ ಚೌಹಾಣ್ ಮತ್ತು ಶಿನೇಮಿಚಂದ್ ಬಡೋಲ ಉಪಾಧ್ಯಕ್ಷರಾಗಿ, ರಾಜೇಂದ್ರ ದೇಸಾರಲಾ, ನವರತನ್ ಮಲ್ ಪಿತಾಲಿಯಾ ಮತ್ತು ನಿಖಿಲ್ ವೋರಾ ಕಾರ್ಯದರ್ಶಿಗಳಾಗಿ ಆಯ್ಕೆಯಾದರು.

ನೂತನ ಅಧ್ಯಕ್ಷ ರಾಜನ್ ಬಾಗ್ಮಾರ್ ಅವರು ಸದಸ್ಯರಿಗೆ ಧನ್ಯವಾದಗಳನ್ನು ಅರ್ಪಿಸಿದರು. ಯಶಸ್ವಿ ಆಡಳಿತಕ್ಕಾಗಿ ಸದಸ್ಯರ ಬೆಂಬಲ ಕೋರಿದರು. ರಾಜನ್ ಅವರು ತಮ್ಮ ಅಧಿಕಾರಾವಧಿಯಲ್ಲಿ ಸಂಸ್ಥೆಯ, ಸಮುದಾಯ ಮತ್ತು ಮೈಸೂರು ನಗರದ ಹೆಸರು ಮತ್ತು ಖ್ಯಾತಿಯನ್ನು ಹೆಚ್ಚಿನ ಎತ್ತರಕ್ಕೆ ಕೊಂಡೊಯ್ಯುವುದಾಗಿ ಭರವಸೆ ನೀಡಿದರು. ಕುಶಾಲ್ ಪಾಲರೆಚಾ ವಂದಿಸಿದರು.

## ಸಚಿವ ಸತೀಶ್ ಜಾರಕಿಹೊಳಿಗೆ ಸನ್ಮಾನ



ಮೈಸೂರಿನ ಆದಿಕರ್ನಾಟಕ ಮಹಾಸಂಸ್ಥೆ ವತಿಯಿಂದ ಲೋಕೋಪಯೋಗಿ ಇಲಾಖೆ ಸಚಿವ ಸತೀಶ್ ಜಾರಕಿಹೊಳಿ ಅವರನ್ನು ಆದಿಕರ್ನಾಟಕ ಮಹಾಸಂಸ್ಥೆ ಅಧ್ಯಕ್ಷ ಪಿ.ಸಿದ್ದರಾಜು (ಸುನಿಲ್) ಸನ್ಮಾನಿಸಿದರು. ಕಾರ್ಯದರ್ಶಿ ರಾಜ್‌ಮೊಗ, ದೊಡ್ಡಗರಡಿ ಸಂಘದ ಅಧ್ಯಕ್ಷ ಆರ್.ಸಿ.ಮಹೇಶ್, ಚಿಕ್ಕಗರಡಿ ಕಾರ್ಯದರ್ಶಿ ಸಿದ್ದೇಶ್, ಪೈಲ್ವಾನ್ ಕೃಷ್ಣ, ಬಿಲ್ಲಯ್ಯ, ಅರ್ಜುನ್ ಮತ್ತಿತರರು ಇದ್ದಾರೆ.

## ಸಿ.ವಿ.ಸೋಮಶೇಖರ್, ಮಹೇಶ್ ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್ ಅಧ್ಯಕ್ಷ, ಉಪಾಧ್ಯಕ್ಷರು




ಸೋಮಶೇಖರ್ ಮಹೇಶ್

ಮೈಸೂರು,ಫೆ.19–ಮೈಸೂರು ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕಿನ ಆಡಳಿತ ಮಂಡಳಿ ಪದಾಧಿಕಾರಿ ಆಯ್ಕೆಗೆ ಸಂಬಂಧಿಸಿದಂತೆ ಇಂದು (ಫೆ.19) ನಡೆದ ಚುನಾವಣೆಯಲ್ಲಿ ನಿರ್ದೇಶಕರಾದ ಸಿ.ವಿ.ಸೋಮಶೇಖರ್ ಅಧ್ಯಕ್ಷರಾಗಿ ಹಾಗೂ ನಿರ್ದೇಶಕರಾದ ಎಂ.ಎನ್.ಮಹೇಶ್ ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಎಸ್.ವಸಂತಕುಮಾರ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## 'ನಿಸರ್ಗ ಡಾಕ್ಟರ್' ಪ್ರಶಸ್ತಿ ಪ್ರದಾನ...



ಬೆಂಗಳೂರಿನ ಕಬ್ಬನ್‌ಪಾರ್ಕ್‌ನಲ್ಲಿರುವ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಸಭಾಂಗಣದಲ್ಲಿ ಯುವಚೇತನ ಯುವಜನ ಕೇಂದ್ರ ಆಯೋಜಿಸಿದ್ದ 43ನೇ ವರ್ಷದ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಕನ್ನಡ ಜಾನಪದ ಪರಿಷತ್ ಮೈಸೂರು ಜಿಲ್ಲೆ ಘಟಕ ಅಧ್ಯಕ್ಷ ಕ್ಯಾತನಹಳ್ಳಿ ಹೆಚ್.ಪ್ರಕಾಶ್ ಅವರಿಗೆ ನಿವೃತ್ತ ಲೋಕಾಯುಕ್ತರಾದ ಸಂತೋಷ್ ಹೆಗ್ಡೆ ಅವರು 'ನಿಸರ್ಗ ಡಾಕ್ಟರ್' ಪ್ರಶಸ್ತಿ ನೀಡಿ ಗೌರವಿಸಿದರು. ಈ ವೇಳೆ ಸಂಘಟನೆ ಮುಖ್ಯಸ್ಥ ಡಾ.ನಂದಿದುರ್ಗ ಬಾಲುಗೌಡ, ಯುವಚೇತನ ಯುವಜನ ಕೇಂದ್ರದ ಮೈಸೂರು ಘಟಕದ ಅಧ್ಯಕ್ಷ ಜಿ.ರವಿಶಂಕರ್ ಅವರನ್ನು ಕಾಣಬಹುದು.

## ನಿಧನ

### ಸಿ.ಎಂ.ನಾರಾಯಣಸ್ವಾಮಿ



ಮೈಸೂರು,ಫೆ.19– ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಉಪ ಕುಲಸಚಿವ ಸಿ.ಎಂ.ನಾರಾಯಣಸ್ವಾಮಿ (73) ಅವರು ಅಲ್ಪಕಾಲದ ಅಸ್ವಸ್ಥತೆ ನಂತರ ಇಂದು ಮಧ್ಯಾಹ್ನ ವಿವೇಕಾನಂದ ನಗರದ ತಮ್ಮ ನಿವಾಸದಲ್ಲಿ ನಿಧನರಾದರು. ಇವರು ಪತ್ನಿ ಬಿ.ಜಿ. ಶಾಂತಕುಮಾರಿ, ಇಬ್ಬರು ಪುತ್ರರು, ಸೊಸೆ, ಮೊಮ್ಮಕ್ಕಳು, ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಇಂದು ಸಂಜೆ ಕುವೆಂಪುನಗರ ಸ್ಮಶಾನದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

### ಶ್ರೀಮತಿ ಜ್ಯೋತಿ ಪ್ರಭುದೇವ್



ಮೈಸೂರಿನ ದೇವರಾಜ ಅರಸು ರಸ್ತೆಯ ಜನರಲ್ ಮರ್ಚೆಂಟ್ ಸಿ.ಪ್ರಭುದೇವ್ ಅವರ ಧರ್ಮಪತ್ನಿ ಶ್ರೀಮತಿ ಜ್ಯೋತಿ ಪ್ರಭುದೇವ್ (58) ಬುಧವಾರ ನಗರದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಇವರು ಪತಿ ಪ್ರಭುದೇವ್, ಪುತ್ರರಾದ ಸ್ಕಂದನ್ ಪಿ.ಯಜಮಾನ್, ಶಿವಶರಣ ಪಿ.ಯಜಮಾನ್, ಇಬ್ಬರು ಸೊಸೆಯಂದಿರು ಸೇರಿದಂತೆ ಅಪಾರ ಬಂಧು–ವರ್ಗ ಅಗಲಿದ್ದಾರೆ. ಗುರುವಾರ (ಫೆ.20) ಮಧ್ಯಾಹ್ನ 1 ಗಂಟೆಗೆ ವೀರನಗೆರೆಯಲ್ಲಿರುವ ವೀರಶೈವ ರುದ್ರಭೂಮಿಯಲ್ಲಿ ಮೃತರ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

### ರೋಹಿಣಿ ಪದ್ಮಕುಮಾರ್



ಮೈಸೂರು ಕುವೆಂಪುನಗರದ ನಿವಾಸಿ ರೋಹಿಣಿ ಪದ್ಮಕುಮಾರ್(77) ಬುಧವಾರ ಬೆಳಗ್ಗೆ ಹೃದಯಾಘಾತದಿಂದ ನಿಧನರಾದರು. ಮೃತರು ಇಬ್ಬರು ಪುತ್ರಿಯರು, ಅಳಿಯಿಂದರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂದು–ಬಳಗವನ್ನು ಅಗಲಿದ್ದಾರೆ. ಇವರ ದ್ವಿತೀಯ ಪುತ್ರಿ ವಿದೇಶದಲ್ಲಿ ನೆಲೆಸಿದ್ದು, ಅಲ್ಲಿಂದ ಆಗಮಿಸುತ್ತಿರುವ ಹಿನ್ನಲೆಯಲ್ಲಿ ರೋಹಿಣಿ ಪದ್ಮ ಕುಮಾರ್ ಅವರ ಅಂತ್ಯಕ್ರಿಯೆ ಶುಕ್ರವಾರ ಬೆಳಗ್ಗೆ(ಫೆ.21) 9ಗಂಟೆ ನಂತರ ಚಾಮುಂಡಿ ಬೆಟ್ಟ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

### ಜಿ.ಶಾಮಣ್ಣ



ಮೈಸೂರಿನ ಇಟ್ಟಿಗೆಗೂಡು ನಿವಾಸಿ, ದಿವಂಗತ ಫಲಾಮೃತ ಗುಂಡಪ್ಪ ಅವರ ದ್ವಿತೀಯ ಪುತ್ರ ಜಿ. ಶಾಮಣ್ಣ(80) ಬುಧವಾರ ನಿಧನರಾದರು. ಮೃತರು ಪತ್ನಿ ಶಶಿಕಲಾ, ಪುತ್ರ ಹರ್ಷ, ಪುತ್ರಿ ವಾಣಿ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ(ಫೆ.20) ಬೆಳಗ್ಗೆ ಚಾಮುಂಡಿಬೆಟ್ಟ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

# ರಾಜ್ಯದಲ್ಲಿ ಜೈವಿಕ ಇಂಧನ ಕ್ಷೇತ್ರದಲ್ಲಿ ಶೀಘ್ರದಲ್ಲೇ ಮಹತ್ತರ ಬದಲಾವಣೆ

## ಅಂತರರಾಷ್ಟ್ರೀಯ ಸಮ್ಮೇಳನಕ್ಕೆ ಚಾಲನೆ ನೀಡಿದ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಸುಧೀಂದ್ರ ಭವಿಷ್ಯ




ಮೈಸೂರಿನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ವತಿಯಿಂದ ಆಯೋಜಿಸಿರುವ ಇಂಟರ್‌ನ್ಯಾಷನಲ್ ಕಾನ್‌ಕ್ಲೇವ್ ಆನ್‌ನಲ್ಲಿ 'ಸುಸ್ಥಿರ ಕ್ಷೇತ್ರದಲ್ಲಿ ನಡೆದಿರುವ ಸಂಶೋಧನೆ' ಯ ಅಂತರರಾಷ್ಟ್ರೀಯ ಸಮ್ಮೇಳನಕ್ಕೆ ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಎಸ್.ಈ.ಸುಧೀಂದ್ರ ಚಾಲನೆ ನೀಡಿದರು.

ಮೈಸೂರು, ಫೆ.19(ಜಿಎ)–ರಾಜ್ಯದಲ್ಲಿ ಜೈವಿಕ ಇಂಧನ ಕ್ಷೇತ್ರದಲ್ಲಿ ಮುಂದಿನ ಕೆಲವೇ ತಿಂಗಳಲ್ಲಿ ಮಹತ್ತರ ಬದಲಾವಣೆಯಾಗಲಿದೆ ಎಂದು ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಸ್.ಈ.ಸುಧೀಂದ್ರ ತಿಳಿಸಿದರು.

ಮೈಸೂರಿನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಪಚೋಸ್ ಶೂಲೆ ಡಾರ್ಟ್ಮೆಂಡ್ ಜರ್ಮನಿ, ಯೂನಿವರ್ಸಿಟಿ ಆಫ್ ಅಪ್ಲೈಡ್ ಸೈನ್ಸ್ ಅಂಡ್ ಆರ್ಟ್ಸ್ ಡಾರ್ಟ್ಮೆಂಟ್ ಸಹಯೋಗದಲ್ಲಿ ಆಯೋಜಿಸಲಾಗಿರುವ ಇಂಟರ್‌ನ್ಯಾಷನಲ್ ಕಾನ್‌ಕ್ಲೇವ್ ಆನ್‌ನಲ್ಲಿ 'ಸುಸ್ಥಿರ ಕ್ಷೇತ್ರದಲ್ಲಿ ನಡೆದಿರುವ ಸಂಶೋಧನೆ'ಯ ಅಂತರ ರಾಷ್ಟ್ರೀಯ ಸಮ್ಮೇಳನಕ್ಕೆ ಚಾಲನೆ ನೀಡಿ, ಅವರು ಮಾತನಾಡಿದರು.

ಕರ್ನಾಟಕ ರಾಜ್ಯವು ಜೈವಿಕ ಇಂಧನ ಕ್ಷೇತ್ರದ ಅಭಿವೃದ್ಧಿಯಲ್ಲಿ ಮುಂಚೂಣಿಯಲ್ಲಿದ್ದು, ರಾಷ್ಟ್ರಕ್ಕೆ ಜೈವಿಕ ಇಂಧನ ನೀತಿ–2009 ರೂಪಿಸಿ ಅನುಷ್ಠಾನಗೊಳಿಸಿದ ಮೊಟ್ಟ ಮೊದಲ ರಾಜ್ಯ ಎಂಬ ಹೆಗ್ಗಳಿಕೆಯನ್ನು ಹೊಂದಿರುವ ಕುರಿತು ಹಾಗೂ ಅನುಷ್ಠಾನ ಪ್ರಕ್ರಿಯೆಯನ್ನು ಹಂತ ಹಂತವಾಗಿ ಕಾರ್ಯಗತಗೊಳಿಸಿರುವುದನ್ನು ಸಮ್ಮೇಳನದಲ್ಲಿ ಪ್ರಸ್ತಾಪಿಸಿ, ರಾಜ್ಯದ ಮುಖ್ಯಮಂತ್ರಿಗಳ ಆಶಯದ ಭಾಗವಾಗಿ ಸುಸ್ಥಿರತೆಯು ಸಮಾಜದ ಎಲ್ಲ ಹಂತದಲ್ಲಿ ಬೆಳೆಯಬೇಕು ಎಂದು ಅಭಿಪ್ರಾಯಪಟ್ಟರು.

ರಾಜ್ಯದಲ್ಲಿ ಜೈವಿಕ ಇಂಧನ ಕ್ಷೇತ್ರದಲ್ಲಿ ಮುಂದಿನ ಕೆಲವೇ ತಿಂಗಳಗಳಲ್ಲಿ ಮಹತ್ತರ ಬದಲಾವಣೆಗಳಾಗಲಿದ್ದು ಮಂಡಳಿ ಪೂರಕ ವಾತಾವರಣ ಸೃಜನಕ್ಕೆ ನಿರಂತರವಾಗಿ ಶ್ರಮಿಸುತ್ತಿರುವುದನ್ನು ಹಾಗೂ ಉನ್ನತ ತಂತ್ರಜ್ಞಾನ, ಬಳಕೆಗೆ ಒತ್ತು ನೀಡಿ ಕಾರ್ಯಕರ್ತರಾಗಿರುವುದನ್ನು ತಿಳಿಸಿ, ಜೈವಿಕ ಇಂಧನ ಕ್ಷೇತ್ರದ ಸುಸ್ಥಿರ ಬೆಳವಣಿಗೆಯು ಅಗಾಧವಾದ ವಿಸ್ತಾರವನ್ನು ಹೊಂದಿದ್ದು ಬಯೋ ಬ್ರಿಕೆಟ್ಸ್, ಪೆಲೆಟ್ಸ್, ಬಯೋ ಡೀಸಲ್, 2ಜಿ ಎಥನಾಲ್, ಕಂಪ್ರೆಸ್ಡ್ ಬಯೋಗ್ಯಾಸ್, ಗ್ರೀನ್ ಹೈಡ್ರೋಜನ್ ಮುಂತಾದ ಜೈವಿಕ ಇಂಧನ ಕ್ಷೇತ್ರದ ವಿಭಾಗಗಳಲ್ಲಿ ಒಂದು ಲಕ್ಷ ಬಿಲಿಯನ್ ಡಾಲರ್ ಬಂಡವಾಳ ಹೂಡಿಕೆಗೆ ಅವಕಾಶಗಳಿರುವ ಕುರಿತು ಅಂಕಿ ಅಂಶಗಳ ಸಮೇತ ಸಮ್ಮೇಳನದಲ್ಲಿ ವಿಶ್ಲೇಷಿಸಿದರು.

ಇತ್ತೀಚಿಗೆ ಬೆಂಗಳೂರಿನಲ್ಲಿ ಕರ್ನಾಟಕ ರಾಜ್ಯ ಸರ್ಕಾರ ಆಯೋಜಿಸಿದ್ದ ಇನ್ವೆಸ್ಟ್ ಕರ್ನಾಟಕ–ಜಾಗತಿಕ ಹೂಡಿಕೆದಾರರ ಶೃಂಗಸಭೆ ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯು ಭಾಗವಹಿಸಿ ಜೈವಿಕ ಇಂಧನ ಕ್ಷೇತ್ರದಲ್ಲಿ ಬಂಡವಾಳ ಹೂಡಿಕೆಗೆ ಲಭ್ಯವಿರುವ ಮುಕ್ತ ಅವಕಾಶಗಳನ್ನು ಹೂಡಿಕೆದಾರರಿಗೆ ಮನವರಿಕೆ ಮಾಡಿಕೊಡಲಾಗಿರುವ ವಿಚಾರವನ್ನು ಉಲ್ಲೇಖಿಸಿ, ರಾಜ್ಯದಲ್ಲಿನ ಜೈವಿಕ ಇಂಧನ ಸಂಪನ್ಮೂಲ ಕ್ರೂಢೀಕರಣ, ಮೂಲಸೌಕರ್ಯಗಳು ಹಾಗೂ ಮಂಡಳಿ ಕೈಗೊಂಡಿರುವ ಸಂಯೋಜನ ಕಾರ್ಯಗಳ ಕುರಿತು ಪೂರ್ಣ ಪರಿಚಯ ಮಾಡಿಕೊಟ್ಟಿರುವುದನ್ನು ಪ್ರಸ್ತಾಪಿಸಿದರು.

ಶೃಂಗಸಭೆಯಲ್ಲಿ ಅಧ್ಯಕ್ಷರು ತಮ್ಮ ಅಧಿಕಾರದ ಅವಧಿಯಲ್ಲಿ ಜೈವಿಕ ಇಂಧನ ಕ್ಷೇತ್ರದ ಉನ್ನತೀಕರಣ ಹಾಗೂ ವಾಣಿಜ್ಯೀಕರಣಕ್ಕೆ ಪೂರಕ ವಾತಾವರಣದ ಸೃಜನೆಗೆ ತಾವು ಕೈಗೊಂಡಿರುವ ರಾಜ್ಯ ಹಾಗೂ ಹೊರದೇಶದ ಜೈವಿಕ ಇಂಧನ ಕ್ಷೇತ್ರದಲ್ಲಿ ಕಾರ್ಯನಿರತರಾಗಿರುವ ವಿಷಯ ಪರಿಣತರು, ಸಂಸ್ಥೆಗಳು, ಯೋಜನಾ ಉಸ್ತುವಾರಿ ಕಂಪನಿಗಳು, ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ವಿಚಾರ ವಿನಿಮಯ, ಸಂಯೋಜನ ಕಾರ್ಯಗಳ ಕುರಿತು ತಿಳಿಸಿದರು.

ಮಂಡಳಿ ಜೈವಿಕ ಇಂಧನ ಕ್ಷೇತ್ರದ ಸುಸ್ಥಿರತೆಗೆ ಅನುಕೂಲವಾಗುವ ಬಂಡವಾಳ ಹೂಡಿಕೆಗೆ ಹೂಡಿಕೆದಾರರನ್ನು ಆಕರ್ಷಿಸಲು ನೂತನ 'ಕರ್ನಾಟಕ ರಾಜ್ಯ ಜೈವಿಕ ಇಂಧನ ನೀತಿ' ನಿರೂಪಿಸಲು ಈಗಾಗಲೇ ಕ್ರಮವಹಿಸಿರುವುದನ್ನು, ಈ ವಾರದಲ್ಲಿಯೇ ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಐಟಿ–ಬಿಟಿ ಸಚಿವರು, ಜೈವಿಕ ಇಂಧನ ಕ್ಷೇತ್ರದಲ್ಲಿ ಕಾರ್ಯನಿರತರಾಗಿರುವ ತಂತ್ರಜ್ಞರು, ನೀತಿ ನಿರೂಪಕರು, ವಿಷಯ ಪರಿಣತರು, ಮಂಡಳಿಯ ಜೈವಿಕ ಇಂಧನ ಕಾರ್ಯ ಯೋಜನೆಗಳ ಭಾಗಿದಾರರೊಂದಿಗೆ ಉನ್ನತ ಮಟ್ಟದ ಸಭೆ ಆಯೋಜಿಸಲಾಗಿರುವುದನ್ನು ಉಲ್ಲೇಖಿಸಿದರು.

ಕಾರ್ಯಕ್ರಮದಲ್ಲಿ ಮಂಡಳಿಯ ವ್ಯವಸ್ಥಾಪಕ ನಿರ್ದೇಶಕ ಎಲ್.ಶಿವಶಂಕರ್, ಉಪ ಅರಣ್ಯ ಸಂರಕ್ಷಣಾಧಿಕಾರಿ ಬಿ.ಆರ್. ಲೋಹಿತ್, ಯೋಜನಾ ಸಲಹೆಗಾರ ಡಾ.ದಯಾನಂದ ಮತ್ತು ಮಂಡಳಿಯ ಅಧಿಕಾರಿಗಳು ಉಪಸ್ಥಿತರಿದ್ದರು.

## ಸರ್ವಜ್ಞನ ತ್ರಿಪದಿಗಳು ನೀತಿ, ಆದರ್ಶ ಬದುಕಿನ ಪ್ರತೀಕ

### ವಿವಿಧ ಕ್ಷೇತ್ರದ ಸಾಧಕರಿಗೆ ಸರ್ವಜ್ಞ ರತ್ನ ಪ್ರಶಸ್ತಿ ಪ್ರದಾನ



ಸರ್ವಜ್ಞ ಜಯಂತಿ ಅಂಗವಾಗಿ ವಿವಿಧ ಕ್ಷೇತ್ರದ ಸಾಧಕರಿಗೆ ಸರ್ವಜ್ಞ ರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು,ಫೆ.19–ಅಗ್ರಹಾರ ವೃತ್ತದಲ್ಲಿ ಮೈಸೂರು ಜಿಲ್ಲಾ ಕುಂಬಾರರ ಜಾಗೃತಿ ವೇದಿಕೆ ವತಿಯಿಂದ ತ್ರಿಪದಿ ಕವಿ ಸರ್ವಜ್ಞ ಜಯಂತಿ ಅಂಗವಾಗಿ ಸರ್ವಜ್ಞ ಭಾವ ಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು.

ಇದೇ ವೇಳೆ ಎಂ.ಮಹದೇವ್ (ರಾಜಕೀಯ), ಕೆ.ರಘುರಾವ್ ವಾಜಪೇಯಿ (ಸಾಮಾಜಿಕ), ಡಾ.ರಮ್ಯಾ (ಸಮಾಜ ಸೇವೆ), ಎಚ್.ಎನ್.ಶ್ರೀಕಾಂತ್, ಕಶ್ಯಪ್ (ಧಾರ್ಮಿಕ), ನಾಗರತ್ನ (ಕುಂಬಾರಿಕೆ), ರಾಜೇಶ್ (ಕಲಾ), ಪ್ರವೀಣ್ (ಕ್ರೀಡೆ) ಹಿರಿಯಣ್ಣ (ಪರಿಸರ) ಅವರಿಗೆ ಸರ್ವಜ್ಞ ರತ್ನ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿ, ಸರ್ವಜ್ಞ ಅವರ ಹೆಸರೇ ಹೇಳುವಂತೆ ಎಲ್ಲವನ್ನೂ ಅರಿತವರು ಎಂದರ್ಥ. ಆಡು ಮುಟ್ಟದ ಸೊಪ್ಪಿಲ್ಲ ಎನ್ನುವ ಹಾಗೆ ತ್ರಿಪದಿ ಬ್ರಹ್ಮ ಸರ್ವಜ್ಞ ಅವರು ತಿಳಿಸದ ವಿಷಯಗಳೇ ಇಲ್ಲ. ಮನುಷ್ಯನಿಗೆ ಬೇಕಾಗುವ ನೀತಿ ಮತ್ತು ಸಾಮಾಜಿಕ ಪ್ರಜ್ಞೆ ಆದರ್ಶದ ಬದುಕಿನ ಮಹತ್ವವನ್ನು ತಮ್ಮ ತ್ರಿಪದಿಗಳ ಮೂಲಕ ಜಗತ್ತಿಗೆ ಸಾರಿದ್ದಾರೆ. ಅವರ ತ್ರಿಪದಿಗಳು ತಮ್ಮ ಸರಳತೆ ಮತ್ತು ಪ್ರಾಸಬದ್ಧತೆಯಿಂದ ಜನಪ್ರಿಯವಾಗಿದ್ದವು. ಬಹು ಮುಖ್ಯವಾಗಿ ನೈತಿಕ ಸಾಮಾಜಿಕ ಮತ್ತು ಧಾರ್ಮಿಕ ವಿಷಯಗಳನ್ನು ಒಳಗೊಂಡಿದ್ದವು. ಅಂತಹ ಮಹಾತ್ಮರ ಹೆಸರಿನಲ್ಲಿ ಸಮಾಜದ ವಿವಿಧ ರಂಗಗಳಲ್ಲಿ ಸೇವೆ ಸಲ್ಲಿಸಿದಂತಹ ಹಲವಾರು ಜನರಿಗೆ ಈ ದಿನ ಸರ್ವಜ್ಞ ರತ್ನ ಪ್ರಶಸ್ತಿ ನೀಡುತ್ತಿರುವುದು ಅತ್ಯಂತ ಸಮಯೋಚಿತ ಮತ್ತು ಅರ್ಥಪೂರ್ಣ ಎಂದರು.

ನಟರಾಜ ಶಿಕ್ಷಣ ಸಂಸ್ಥೆಯ ಚಿದಾನಂದ ಸ್ವಾಮೀಜಿ, ವೆಂಗೀಪುರ ಮಠದ ಇಳೈ ಆಳ್ವಾರ್ ಸ್ವಾಮೀಜಿ, ಪಾರ್ಥ ಸಾರಥಿ, ಸಾಹಿತಿ ಬನ್ನೂರು ಕೆ.ರಾಜು, ಕನ್ನಡಪರ ವೇದಿಕೆ ಬಾಲು, ವಾಲ್ಮೀಕಿ ನಿಗಮ ದೇವರಾಜು ಕಾಟೂರು, ರಮೇಶ್, ಅನಂತ, ಕಾರ್ಯಕ್ರಮದ ಆಯೋಜಕರಾದ ಯದುನಂದನ್, ನಾಗರಾಜು, ಯಶವಂತ ಹಾಗೂ ಸಮಾಜದ ಮುಖಂಡರಾದ ಲಲಿತಮ್ಮ, ಭಾಗ್ಯಲಕ್ಷ್ಮಿ, ಯಮುನಾ, ಸುಮಿತ್ರಾ, ನಿರ್ಮಲ, ನಾಗರತ್ನ, ಸಿದ್ಧಮಲ್ಲೇಶ್ ಮಾತೃ ಭೂಮಿ, ಶಿವರಾಜು, ಕೃಷ್ಣ ಮೂರ್ತಿ, ಮಹದೇವು (ಕೇಬಲ್), ಗುರುಸ್ವಾಮಿ, ಮಂಜುನಾಥ್, ಕೆ.ಪಿ. ವೆಂಕಟೇಶ್, ವಿಶ್ವೇಶ್ವರ, ಮರಶೆಟ್ಟಿ ಮತ್ತಿತರರು ಈ ವೇಳೆ ಉಪಸ್ಥಿತರಿದ್ದರು.

## ಮಾ.9ರಂದು ಉಚಿತ ಸಾಮೂಹಿಕ ವಿವಾಹ

ಮೈಸೂರು, ಫೆ. 19–ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ವೀರಶೈವ ಲಿಂಗಾಯತ ಮಠಾಧಿಪತಿಗಳ ಗೋಷ್ಠಿ ವತಿಯಿಂದ ಸರಗೂರು ತಾಲೂಕು ಬಿಡುಗಲು ಪಡುವಲು ಶ್ರೀ ವಿರಕ್ತ ಮಠದ ಸಹಯೋಗದಲ್ಲಿ ಮಾ.9ರಂದು ವೀರಶೈವ–ಲಿಂಗಾಯತ ವಧು–ವರರ ಉಚಿತ ಸಾಮೂಹಿಕ ವಿವಾಹ ಏರ್ಪಡಿಸಲಾಗಿದೆ.

ವಧು–ವರರಿಗೆ ಸೀರೆ, ಕುಪ್ಪಸ, ಪಂಚೆ, ವಲ್ಲಿ, ಶರ್ಟ್, ಮಾಂಗಲ್ಯ ಹಾಗೂ ಬೆಳ್ಳಿ ಕಾಲುಂಗುರಗಳನ್ನು ಉಚಿತವಾಗಿ ನೀಡಲಾಗುತ್ತದೆ. ಆಸಕ್ತರು ಜಗದ್ಗುರು ಡಾ.ಶಿವರಾತ್ರಿ ರಾಜೇಂದ್ರ ವೃತ್ತದಲ್ಲಿರುವ ಗೋಷ್ಠಿಯ ಕಚೇರಿಯಲ್ಲಿ ಅಥವಾ ಪಡುವಲು ಶ್ರೀ ವಿರಕ್ತ ಮಠದಲ್ಲಿ ನಿಗದಿತ ಅರ್ಜಿ ನಮೂನೆಯಲ್ಲಿ ದಾಖಲಾತಿಗಳೊಂದಿಗೆ ವಿವರಗಳನ್ನು ಸಲ್ಲಿಸಬಹುದು. ವಿವರಗಳಿಗೆ ಕಾರ್ಯದರ್ಶಿ ಹರವೆ ಮಠದ ಸರ್ಪಭೂಷಣ ಸ್ವಾಮಿಗಳು, ಪಡುವಲು ಮಠದ ಮಹದೇವಸ್ವಾಮಿಗಳು, ಸಿ.ಮಹದೇವಪ್ರಸಾದ್ ಅವರನ್ನು ಮೊ.9964151105, 9481528665 ಸಂಪರ್ಕಿಸಲು ಕೋರಲಾಗಿದೆ.

## ರಾಷ್ಟ್ರ ಮಟ್ಟದ ಬ್ಯಾಡ್ಮಿಂಟನ್ ಟೂರ್ನಿಗೆ ಎಚ್.ಎಲ್.ರಾಮಕೃಷ್ಣ ಆಯ್ಕೆ




ಮೈಸೂರು,ಫೆ.19–ಮೈಸೂರಿನ ನಿವೃತ್ತ ಕೆಐಎಡಿಬಿ ಅಧಿಕಾರಿ ಎಚ್.ಎಲ್. ರಾಮಕೃಷ್ಣ ಅವರು ಮಾ.16ರಿಂದ ಗೋವಾದಲ್ಲಿ ನಡೆಯುವ 70 ವರ್ಷ ಮೇಲ್ಪಟ್ಟ ಹಿರಿಯರ ರಾಷ್ಟ್ರ ಮಟ್ಟದ ಬ್ಯಾಡ್ಮಿಂಟನ್ ಟೂರ್ನಮೆಂಟ್‌ಗೆ ಆಯ್ಕೆಯಾಗಿದ್ದಾರೆ. ಇತ್ತೀಚೆಗೆ ಬೆಂಗಳೂರಿನಲ್ಲಿ ಕರ್ನಾಟಕ ಬ್ಯಾಡ್ಮಿಂಟನ್ ಅಸೋಸಿಯೇಷನ್ ಆಶ್ರಯದಲ್ಲಿ ನಡೆದ 70 ವರ್ಷ ಮೇಲ್ಪಟ್ಟ ಹಿರಿಯ ಬ್ಯಾಡ್ಮಿಂಟನ್ ಟೂರ್ನಮೆಂಟ್‌ನ ಡಬಲ್ಸ್ ವಿಭಾಗದಲ್ಲಿ ರನ್ನರ್ ಅಪ್ ಆಗಿದ್ದರು.

## ನಿರ್ದೇಶಕರ ಅವಿರೋಧ ಆಯ್ಕೆ

**ಮೈಸೂರು:** ಮೈಸೂರಿನ ಶ್ರೀ ಬಸವೇಶ್ವರ ಪತ್ತಿನ ಸಹಕಾರ ಸಂಘದ 2025–30ರ ಆಡಳಿತ ಮಂಡಳಿ ನಿರ್ದೇಶಕರ ಸ್ಥಾನಕ್ಕೆ ಟಿ.ಲಿಂಗರಾಜು, ಪಿ.ಚಂದ್ರಶೇಖರ್, ಐ.ಶೇಖರಪ್ಪ, ಷಣ್ಮುಖಾರಾಧ್ಯ, ಕೆ.ಗುರುಸ್ವಾಮಿ, ಎಂ.ಎಸ್.ರುದ್ರಸ್ವಾಮಿ, ಎಸ್.ಬಿ. ಶಿವಪ್ರಕಾಶ್, ಶ್ರೀಮತಿ ಎಸ್.ಚೆನ್ನಾಜಿ, ಎಂ.ಹೆಚ್.ಶಿವಮಣಿ, ಮೆಹಬೂಬ್‌ಖಾನ್, ಕೀರ್ತಿಕುಮಾರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

## ಮೈಸೂರು ಹಾಗೂ ಸುತ್ತಮುತ್ತ ಇಂದು...



### ಇಂದಿನ ಪಂಚಾಂಗ

**20.02.2025 ಗುರುವಾರ, ಮಳೆ ನಕ್ಷತ್ರ: ಶತಭಿಷ, 19.02.2025 ರಿಂದ 03.03.2025**
**ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಕೃಷ್ಣ ಪಕ್ಷ,**
**ತಿಥಿ: ಅಷ್ಟಮಿ, ನಕ್ಷತ್ರ: ವಿಶಾಖ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ**

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ಯೋಗ ಮಾಡಿ ಆರೋಗ್ಯವಾಗಿರಿ, ದೇಹ ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಥೈರಾಯಿಡ್ ಸಮಸ್ಯೆ, ಹಸಿರಂಬುವಿನ ಗಾಯಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

■ **ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು :** ವಾರ್ಷಿಕ ವಿಶೇಷ ಶಿಬಿರ, ಬೆಳಗ್ಗೆ 6.30ಕ್ಕೆ ಧ್ವಜಾರೋಹಣ: ನಾಗವಾಲ ಗ್ರಾಪಂ ಉಪಾಧ್ಯಕ್ಷೆ ಗೌರಮ್ಮ ಮಾಲೇಗೌಡ, ಬೆಳಗ್ಗೆ 9 ರಿಂದ ಮದ್ಯಪಾನ, ಆನ್‌ಲೈನ್ ಜೂಜು ಹಾಗೂ ಐಪಿಎಲ್ ಬೆಟ್ಟಿಂಗ್ ಕುರಿತು ಜಾಗೃತಿ ಜಾಥಾ, ಸಂಜೆ 5ಕ್ಕೆ ವಿಶೇಷ ಉಪನ್ಯಾಸ ಕಾರ್ಯಕ್ರಮ, ಸಂಪನ್ಮೂಲ ವ್ಯಕ್ತಿಗಳು: ರುಡ್‌ಸೆಟ್ ಸಂಸ್ಥೆ ನಿರ್ದೇಶಕರಾದ ಕೆ.ಎಸ್. ಸರಿತಾ, ಸಹಾಯಕ ಪ್ರಾಧ್ಯಾಪಕ ಡಾ.ನಾಗೇಂದ್ರಕುಮಾರ್, ಸ್ಥಳ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹುಯಿಲಾಳು.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಉಚಿತ ಮೂಳೆ ಖನಿಜ ಸಾಂದ್ರತಾ ಪರೀಕ್ಷಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9.30ರಿಂದ

■ **ವೇದಾಂತ ಆಯುರ್ವೇದಿಕ್ ಸೆಂಟರ್:** ಮೂತ್ರಪಿಂಡದ ಕಲ್ಲು ಮತ್ತು ಇತರೆ ಸಮಸ್ಯೆಗಳಿಗೆ ಉಚಿತ ವೈದ್ಯಕೀಯ ತಪಾಸಣಾ, ಚಿಕಿತ್ಸಾ ಶಿಬಿರ, ಸ್ಥಳ: ವೇದಾಂತ ಆಯುರ್ವೇದಿಕ್ ಸೆಂಟರ್, ಬೆಳಗ್ಗೆ 9.30 ರಿಂದ.

■ **ಪ್ರೀತಿ ಕ್ಯಾನ್ಸರ್ ಸೆಂಟರ್ :** ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಲಕ್ಷ್ಮೀಪುರಂ, ಬೆಳಗ್ಗೆ 10 ರಿಂದ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ.

■ **ಅಭಿವೃದ್ಧಿ ಆಯುಕ್ತರು (ಕರಕುಶಲ), ಜವಳಿ ಮಂತ್ರಾಲಯ :** ಗಾಂಧಿ ಶಿಲ್ಪ ಬಜಾರ್, ಕರಕುಶಲ, ಕೈಮಗ್ಗ ಉತ್ಪನ್ನಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ವಲಯ, ರಿಂಗ್ ರಸ್ತೆ, ಬೆಳಗ್ಗೆ 10 ರಿಂದ.

■ **ಸಮದೃಷ್ಟಿ ಕ್ಷಮತಾ ವಿಕಾಸ ಮತ್ತು ಅನುಸಂಧಾನ ಮಂಡಲ (ಸಕ್ಷಮ) :** ಪ್ರತಿಭೆ ನಿಮ್ಮದು ವೇದಿಕೆ ನಮ್ಮದು ಕಾರ್ಯಕ್ರಮ, ವಿಶೇಷಚೇತನ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮ, ಸ್ಥಳ: ಪುರಭವನ, ಬೆಳಗ್ಗೆ 10ಕ್ಕೆ.

■ **ಟೆರೇಷಿಯನ್ ಕಾಲೇಜು:** ಸಮಕಾಲೀನ ಯುಗದಲ್ಲಿ ಬಹುಶಿಸ್ತೀಯ ಸಂಶೋಧನೆ: ನವೀನ ಪ್ರವೃತ್ತಿಗಳನ್ನು ಅನ್ವೇಷಿಸುವುದು ಕುರಿತು ವಿಚಾರ ಸಂಕಿರಣ, ಮುಖ್ಯ ಅತಿಥಿಗಳು: ಮೈಸೂರು ವಿವಿ ಕುಲಸಚಿವ ಪ್ರೊ. ಎನ್.ನಾಗರಾಜ, ಉದ್ಘಾಟನೆ: ಟೆರೇಷಿಯನ್ ಕಾಲೇಜು ನಿರ್ದೇಶಕ ಡಾ.ಜುನಿತಾ, ಪ್ರಾಸ್ತಾವಿಕ ನುಡಿ: ಪ್ರೊ.ಅಜ್ಜೈಲಿಯ ನ್ಯೂಮೈ, ಅಧ್ಯಕ್ಷತೆ: ಪ್ರಿನ್ಸಿಪಾಲ್ ಡಾ.ರೋಹಿಣಿ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10ಕ್ಕೆ.

■ **ಅಭಿವೃದ್ಧಿ :** ಸಿಲ್ಕ್ ಇಂಡಿಯಾ–2025, ಸಿಲ್ಕ್, ಕಾಟನ್ ಮತ್ತು ಇತರೆ ಸೀರೆಗಳ ಮಾರಾಟ ಮತ್ತು ಪ್ರದರ್ಶನ, ಸ್ಥಳ: ಹೋಟೆಲ್ ಸದರನ್ ಸ್ಟಾರ್, ವಿನೋಬಾ ರಸ್ತೆ, ಬೆಳಗ್ಗೆ 10 ರಿಂದ.

■ **ವಿಶ್ವಮಾನವ ಮೈಸೂರು ವಿಶ್ವವಿದ್ಯಾನಿಲಯ ನೌಕರರ ವೇದಿಕೆ, ನವ ವಿಶ್ವಮಾನವ ಟ್ರಸ್ಟ್ :** ದಿವಂಗತ ರಾಜಶೇಖರ ಕೋಟಿಯವರ ಸ್ಮರಣಾರ್ಥ 6ನೇ ವರ್ಷದ ಕ್ಯಾಲೆಂಡರ್ ಬಿಡುಗಡೆ ಮತ್ತು ಅಭಿನಂದನಾ ಸಮಾರಂಭ, ಅಧ್ಯಕ್ಷತೆ: ಶಾಸಕ ಕೆ.ಹರೀಶ್‌ಗೌಡ, ಭಾವಚಿತ್ರಕ್ಕೆ ಪುಷ್ಪಾರ್ಚನೆ: ಶಾಸಕ ಟಿ.ಎಸ್.ಶ್ರೀವತ್ಸ, ಕ್ಯಾಲೆಂಡರ್ ಬಿಡುಗಡೆ: ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಮುಖ್ಯ ಅತಿಥಿಗಳು: ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಕೆ.ಎಸ್.ರೇಖಾ, ಡಾ.ಬಿ.ಜೆ.ವಿಜಯಕುಮಾರ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಬೀರಿಹುಂಡಿ ಬಸವಣ್ಣ, ಪತ್ರಕರ್ತೆ ರಶ್ಮಿ ಕೋಟಿ, ಪ್ರೊ.ಶಿವರಾಜಪ್ಪ, ಡಾ.ಇ.ಸಿ. ನಿಂಗರಾಜೇಗೌಡ, ಡಾ.ಹೆಚ್.ಪಿ.ಜ್ಯೋತಿ, ಡಾ.ಎಂ.ಎಸ್.ಸ್ವಪ್ನಾ, ಚೇತನ್, ಡಾ.ಎಂ.ಎಸ್.ಹೇಮಂತ್ ಕುಮಾರ್, ಶ್ರೀನಿವಾಸ್, ಸ್ಥಳ:ಇಎಂಎಂಆರ್‌ಸಿ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ

■ **ಶ್ರೀ ಛಾಯಾದೇವಿ ಬಿ.ಎಡ್. ಕಾಲೇಜು:** ರಾಷ್ಟ್ರೀಯ ವಿಜ್ಞಾನ ಕಾರ್ಯಕ್ರಮ, ಉದ್ಘಾಟನೆ: ಮೈಸೂರು ವಿವಿ ಕುಲಸಚಿವ ಡಾ.ಎನ್.ನಾಗರಾಜ, ಮುಖ್ಯ ಅತಿಥಿಗಳು: ಶ್ರೀ ಛಾಯಾದೇವಿ ವಿದ್ಯಾನಿಕೇತನ ಟ್ರಸ್ಟ್‌ನ ಡಾ.ಭಾನು ಪ್ರಕಾಶ್, ಅಧ್ಯಕ್ಷತೆ: ಪ್ರಿನ್ಸಿಪಾಲ್ ಡಾ.ಅಂತೋಣಿ ಪಾಲ್‌ರಾಜ್, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ರುತು ಹಿಯರಿಂಗ್ ಕೇರ್ ಕ್ಲಿನಿಕ್ :** 4ನೇ ವಾರ್ಷಿಕೋತ್ಸವದ ಅಂಗವಾಗಿ ಉಚಿತ ಮಾತು ಮತ್ತು ಶ್ರವಣ ಸ್ಕ್ರೀನಿಂಗ್ ಶಿಬಿರ, ಸ್ಥಳ: ರುತು ಹಿಯರಿಂಗ್ ಕೇರ್ ಸ್ಪೀಚ್ ಥೆರಪಿ ಸೆಂಟರ್, ಕುವೆಂಪುನಗರ, ಬೆಳಗ್ಗೆ 11 ರಿಂದ.

■ **ಹಳೇ ಬೇರು ಹೊಸ ಚಿಗುರು ಕಲ್ಚರಲ್ ಟ್ರಸ್ಟ್ :** ವಸಂತ ಋತುಗಾನ, ಉದ್ಘಾಟನೆ : ಯೋಗ ನರಸಿಂಹ ಸ್ವಾಮಿ ದೇವಸ್ಥಾನದ ಸಂಸ್ಥಾಪಕ ಡಾ. ಭಾಷ್ಯಂ ಸ್ವಾಮೀಜಿ, ಅಧ್ಯಕ್ಷತೆ : ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಮುಖ್ಯ ಅತಿಥಿಗಳು : ಮುಡಾ ಮಾಜಿ ಅಧ್ಯಕ್ಷ ಕೆ.ಆರ್.ಮೋಹನ್‌ಕುಮಾರ್, ಉದ್ಯಮಿ ಡಾ.ಜಿ.ರವಿ (ಗುರುರಾಜ್), ಯು.ಎಸ್.ಶೇಖರ್, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಉದ್ಯಮಿ ಸಿ.ವೈ.ಶಿವೇಗೌಡ, ಸಮಾಜ ಸೇವಕ ಡಾ. ರಘುರಾಂ ವಾಜಪೇಯಿ, ವಕೀಲ ಎಸ್.ಜೆ.ಮಧ್ವರಾಜ್, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಸಂಜೆ 5ಕ್ಕೆ.

■ **ಹರಿದಾಸ ಸಂಗೀತ ಸಾಹಿತ್ಯೋತ್ಸವ ಸಮಿತಿ (ಮೈಸೂರು):** ಗಾನ ಸಿರಿ–ವೇದಾಂತ ಲಹರಿ ಭಾಗ–12, ಶ್ರೀ ವಾದಿರಾಜ ಗುರುಸಾರ್ವಭೌಮ ವಿರಚಿತ ರುಗ್ಮಿಣೀಶ ವಿಜಯ ಸಪ್ತಾಹ, ವಿದುಷಿ ಶ್ರೀಮತಿ ದಿವ್ಯಾ ಗಿರಿಧರ್ ಅವರಿಂದ ಗಾಯನ, ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಸಂಜೆ 5ರಿಂದ ರಾತ್ರಿ 8.30ರವರೆಗೆ

### ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸೀರೆಯ ಸೊಬಗು–ವೈವಿಧ್ಯಮಯ ಸೀರೆಗಳ ಪರಿಚಯ, ಪ್ರಸ್ತುತಿ: ಜಯಶ್ರೀ ಹೆಗಡೆ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಎಂ.ಡಿ. ಸುಮತಿ ಮುರಾರಿ, ವ್ಯಾಖ್ಯಾನ–ಡಾ. ಬಿ.ವಿ.ವಸಂತ ಕುಮಾರ್, 6.50–ರೈತರಿಗೆ ಸಲಹೆ, 7.15 ಹಸಿರುಹೊನ್ನು–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ಅರಣ್ಯ ಇಲಾಖೆ, ಕರ್ನಾಟಕ ಸರ್ಕಾರ, 8.30 ಕನ್ನಡ ಚಿತ್ರಗೀತೆಗಳು, 9.05 ಸಾಮಾನ್ಯ ಕ್ಯಾನ್ಸರ್ ಕುರಿತ ಜಾಗೃತಿ ಕಾರ್ಯಕ್ರಮ:, ಪ್ರಾಯೋಜಕರು -Indian Cancer Society, Karnataka Chapter, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ :ಎಸ್.ಸೌಮ್ಯ–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಾಡಿನಲ್ಲಿನ ಕಥೆಗಳು, ಪ್ರಸ್ತುತಿ: ಜಿ.ಶಾಂತಕುಮಾರ್, **ಮಧ್ಯಾಹ್ನ:** 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಸಾಮಾನ್ಯ ಕ್ಯಾನ್ಸರ್ ಕುರಿತ ಜಾಗೃತಿ ಕಾರ್ಯಕ್ರಮ, ಪ್ರಾಯೋಜಕರು–Indian Cancer Society, Karnataka Chapter, 1.20 ಭಾವಗೀತೆಗಳು, 2.40 ಕನ್ನಡ ಚಿತ್ರಗೀತೆಗಳು, 4.00 ಜನಪದ ಸಂಗೀತ, 4.30 ವಿಜ್ಞಾನ ಭಾರತಿ–ಕ್ವಾಂಟಂ ಭೌತ ವಿಜ್ಞಾನದಲ್ಲಿನ ಇತ್ತೀಚಿನ ಬೆಳವಣಿಗೆಗಳು ಕುರಿತು ಮಾತನಾಡುತ್ತಾರೆ ಕೆ.ಎಸ್.ಮಲ್ಲೇಶ್, ಬಾಹ್ಯಾಕಾಶ ದಲ್ಲಿ ವಾಯೇಜರ್ ನೌಕೆಯ ಅಪ್ರತಿಮಯಾನ ಈ ಬಗ್ಗೆ ಎಸ್.ಶಂಕರ್ ಅವರಿಂದ ಮಾಹಿತಿ, ಪ್ರಸ್ತುತಿ : ಜಿ.ಶಾಂತಕುಮಾರ್, 5.00 ರೈನ್ ಬೋ ಮಕ್ಕಳ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, ವಕ್ರಪಾದ ಅಥವಾ ಕ್ಲಬ್ ಫುಟ್–ಲಕ್ಷಣಗಳು ಮತ್ತು ಚಿಕಿತ್ಸೆ ಕುರಿತು ತಿಳಿಸಿಕೊಡಲಿದ್ದಾರೆ ಮಕ್ಕಳ ಮೂಳೆ ಶಸ್ತ್ರಚಿಕಿತ್ಸಾ ತಜ್ಞರಾದ ಡಾ.ಗಿರೀಶ್‌ಕುಮಾರ್ ಎ.ಎಂ., ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್ ಈ ಕಾರ್ಯಕ್ರಮದ ಪ್ರಾಯೋಜಕರು: ರೈನ್ ಬೋ ಮಕ್ಕಳ ಆಸ್ಪತ್ರೆ, ಮಾರತ್‌ಹಳ್ಳಿ, ಬೆಂಗಳೂರು, 5.35 ಸಂದೇಶ ಆಧಾರಿತ ಶ್ರೋತ್ರಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಕಿಸಾನ್‌ವಾಣಿ, ಪ್ರಾಯೋಜಕರು: ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ 'ನಂ ಕಂಪನಿ' ರೈತ ಉತ್ಪಾದಕ ಸಂಸ್ಥೆಗಳ ಸಬಲೀಕರಣ ಕುರಿತ ಬಾನುಲಿ ಸರಣಿ ರೈತ ಉತ್ಪಾದಕ ಕಂಪನಿಗಳಲ್ಲಿ ಹಣ ಕಾಸು ನಿರ್ವಹಣೆ ಕುರಿತು ಸಂವಾದ. ಭಾಗವಹಿಸುತ್ತಾರೆ ಮೈಸೂರಿನ ಚಾರ್ಟೆಡ್ ಅಕೌಂಟೆಂಟ್‌ಗಳಾದ ಬಿ.ವಿ.ಮಹೇಶ್ ಹಾಗೂ ಕೆ.ಮಂಜು, ಪ್ರಸ್ತುತಿ: ಎನ್.ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಯುವವಾಣಿ–ರಸಪ್ರಶ್ನೆ, 9.30 ಕನ್ನಡ ಭಾರತಿ, 10.00 ನಾಟಕ–ಸ್ವಂತಕ್ಕೊಂದು ಸುಂದರ ಗೋರಿ, ರಚನೆ ಹಾಗೂ ನಿರ್ಮಾಣ–ಡಾ.ಎನ್.ರಘು, 10.30 ಸವಿನೆನಪು

# ಮಾ. 6ರಂದು ಶಿವಶ್ರೀ ಜೊತೆ ಸಂಸದ ತೇಜಸ್ವಿ ಸೂರ್ಯ ವಿವಾಹ




ಬೆಂಗಳೂರು, ಫೆ.19– ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಮಾ.6ರಂದು ಗಾಯಕಿ ಶಿವಶ್ರೀ ಸ್ಕಂದಪ್ರಸಾದ್ ಅವರ ಜೊತೆ ಹಸೆಮಣೆ ಏರಲಿದ್ದಾರೆ. ಅಂದು ಬೆಂಗಳೂರಿನ ಅರಮನೆ ಮೈದಾನದ ಗಾಯತ್ರಿ ವಿಹಾರದಲ್ಲಿ ಸಾಂಪ್ರದಾಯಿಕವಾಗಿ ವಿವಾಹ ಕಾರ್ಯಕ್ರಮ ನಡೆಯಲಿದೆ. ತಮಿಳುನಾಡು ಮೂಲದ ಶಿವಶ್ರೀ ಅವರು ಈಗಾಗಲೇ ಗಾಯನದಿಂದ ಖ್ಯಾತರಾಗಿದ್ದಾರೆ.

ಮಾರ್ಚ್ 5 ಮತ್ತು 6ರಂದು ಬೆಂಗಳೂರಿನಲ್ಲಿ ಇವರ ವಿವಾಹ ಸಮಾರಂಭ ನೆರವೇರಲಿದೆ. ಮದುವೆ ಸಮಾರಂಭ ಮುಗಿದ ಬಳಿಕ ಮಾರ್ಚ್ 9ರಂದು (ಭಾನುವಾರ) ಬೆಂಗಳೂರಿನ ಅರಮನೆ ಮೈದಾನದ ಗಾಯತ್ರಿ ವಿಹಾರದಲ್ಲಿ ಅದ್ದೂರಿ ಆರತಕ್ಷತೆ ಸಮಾರಂಭ ಕೂಡ ನಡೆಯಲಿದೆ. ಅಂದು ಬೆಳಗ್ಗೆ 10.30 ರಿಂದ ಆರತಕ್ಷತೆ ಕಾರ್ಯಕ್ರಮ ನಡೆಯಲಿದ್ದು, ರಾಜಕೀಯ ಗಣ್ಯರು ಆಗಮಿಸಲಿದ್ದಾರೆ. ಕಳೆದ ಹಲವು ದಿನಗಳಿಂದ ಎರಡೂ ಕುಟುಂಬಗಳ ನಡುವೆ ಮಾತುಕತೆ ನಡೆದು ವಿವಾಹ ತೀರ್ಮಾನಿಸಲಾಗಿತ್ತು. ಇತ್ತೀಚೆಗೆ ಆರ್ಟ್ ಆಫ್ ಲಿವಿಂಗ್‌ನಲ್ಲಿ ನಡೆದ ಕಾರ್ಯಕ್ರಮದ ವೇಳೆ ಇಬ್ಬರೂ ಒಟ್ಟಿಗೆ ಕಾಣಿಸಿಕೊಂಡಿದ್ದರು. ಶಿವಶ್ರೀ ಅವರು ಗಾಯನವಲ್ಲದೆ ಭರತನಾಟ್ಯ ಕಲಾವಿದೆಯಾಗಿದ್ದಾರೆ. ಮದ್ರಾಸ್ ವಿಶ್ವವಿದ್ಯಾಲಯದಿಂದ ಭರತನಾಟ್ಯದಲ್ಲಿ ಪದವಿಯನ್ನೂ ಗಳಿಸಿದ್ದಾರೆ.

# ಮತ್ತೊಮ್ಮೆ ನಾನೇ ಅಧ್ಯಕ್ಷ



**ಬೆಂಗಳೂರು:** ನಾನೇ ಮತ್ತೊಮ್ಮೆ ಅಧ್ಯಕ್ಷನಾಗಿ ಆಯ್ಕೆಯಾಗುವ ವಿಶ್ವಾಸವಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಪಕ್ಷದ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮರು ನೇಮಕದ ಬಗ್ಗೆ ಯಾವುದೇ ಅನುಮಾನವಿಲ್ಲ ಎಂದರು. ರಾಜ್ಯದ ಹಲವು ಜಿಲ್ಲೆಗಳ ಬಿಜೆಪಿ ಅಧ್ಯಕ್ಷರ ಆಯ್ಕೆ ಬಾಕಿ ಇದ್ದು, ಎರಡು–ಮೂರು ದಿನಗಳಲ್ಲಿ ನಡೆಯಲಿದೆ ಆದಷ್ಟು ಬೇಗನೆ ಜಿಲ್ಲಾಧ್ಯಕ್ಷರ ಪಟ್ಟಿಯನ್ನು ವರಿಷ್ಠರಿಗೆ ಕಳುಹಿಸಲಾಗುವುದು ಎಂದು ಹೇಳಿದರು. ಪಕ್ಷದ ಆಂತರಿಕ ಸಮಸ್ಯೆಗಳು ವರಿಷ್ಠರ ಗಮನಕ್ಕೆ ಬಂದಿದೆ. ಯಾರಿಗೆ ನೋಟಿಸ್ ಕೊಡಬೇಕಿತ್ತೋ ಅವರಿಗೆ ಕೊಟ್ಟಾಗಿದೆ. ನೋಟಿಸ್ ಪಡೆದವರು ಉತ್ತರವನ್ನೂ ಕೊಟ್ಟಿದ್ದಾರೆ. ಪಕ್ಷ ಮತ್ತು ಕಾರ್ಯಕರ್ತರ ಹಿತದೃಷ್ಟಿಯಿಂದ ವರಿಷ್ಠರು ಸಮಸ್ಯೆಗಳನ್ನು ಬಗೆಹರಿಸುತ್ತಾರೆ ಎಂದು ವಿಜಯೇಂದ್ರ ಹೇಳಿದರು.

**ರೆಬೆಲ್ ಎನ್ನಬೇಡಿ:** ಯತ್ನಾಳ್ ಮತ್ತು ತಂಡದವರಿಗೆ ರೆಬೆಲ್‌ಗಳು ಎನ್ನಬೇಡಿ ಎಂದು ಸುದ್ದಿಗಾರರಿಗೆ ಸಲಹೆ ನೀಡಿದ ಅವರು, ನಾವು–ಅವರು ಎಲ್ಲ ಸೇರಿ ಪಕ್ಷವನ್ನು ಬಲಪಡಿಸಿ, ಭ್ರಷ್ಟ ಕಾಂಗ್ರೆಸ್ ವಿರುದ್ಧ ಪ್ರಬಲ ಹೋರಾಟ ರೂಪಿಸಬೇಕಾಗಿದೆ. ಮತ್ತೊಮ್ಮೆ ಬಿಜೆಪಿಯನ್ನು ಅಧಿಕಾರಕ್ಕೆ ತರಲು ನಾವೆಲ್ಲರೂ ಒಟ್ಟಾಗಿ ಹೋರಾಟ ನಡೆಸಲು ಸಿದ್ಧರಿದ್ದೇವೆ ಎಂದು ಅವರು ತಿಳಿಸಿದರು.

# ರಾಜ್ಯದ ಹಣಕಾಸು ಸ್ಥಿತಿ ಕುರಿತು ಶ್ವೇತಪತ್ರ ಹೊರಡಿಸಿ

## ಸಿಎಂ ಸಿದ್ದರಾಮಯ್ಯಗೆ ಬಿಜೆಪಿ ಒತ್ತಾಯ




ಬೆಂಗಳೂರು, ಫೆ.19– ಮಾರ್ಚ್ 7ರಂದು ರಾಜ್ಯ ಬಜೆಟ್ ಮಂಡನೆಗೂ ಮುನ್ನಾ, ರಾಜ್ಯದಲ್ಲಿನ ಹಣಕಾಸು ಪರಿಸ್ಥಿತಿ ಕುರಿತು ಶ್ವೇತ ಪತ್ರ ಹೊರಡಿಸಬೇಕು ಎಂದು ಬಿಜೆಪಿ ಬುಧವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿದೆ. ಸುದ್ದಿಗೋಷ್ಠಿಯಲ್ಲಿಂದು ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಕಾಂಗ್ರೆಸ್ ಸರ್ಕಾರದ ಐದು ಗ್ಯಾರಂಟಿ ಯೋಜನೆಗಳಿಂದಾಗಿ ಹಣಕಾಸು ಬರಿದಾಗಿದ್ದು, ರಾಜ್ಯ ಆರ್ಥಿಕ ದಿವಾಳಿಯತ್ತ ಸಾಗುತ್ತಿದೆ ಎಂದು ಆರೋಪಿಸಿದರು.


ಅಸಮರ್ಪಕ ಹಣಕಾಸು ನಿರ್ವಹಣೆಯಿಂದಾಗಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ನಿಗಮ ಮುಚ್ಚುವ ಹಂತ ತಲುಪಿದೆ. ಕಾಂಗ್ರೆಸ್ ಸರ್ಕಾರ ಭರವಸೆ ನೀಡಿದ್ದ ಉಚಿತ ಯೋಜನೆಗಳಿಂದ ಕಳೆದ ಎರಡು ವರ್ಷಗಳಲ್ಲಿ ರಾಜ್ಯದ ಜನರು ದೊಡ್ಡ ಬೆಲೆ ತೆತ್ತಿದ್ದಾರೆ ಎಂದರು. ಆಸ್ತಿ ಮಾರ್ಗಸೂಚಿ ಮೌಲ್ಯ ಶೇ.30 ರಷ್ಟು, ಆಸ್ತಿ ನೋಂದಣಿ ಶುಲ್ಕ ಶೇ. 600ರಷ್ಟು, ಮೆಟ್ರೋ ಪ್ರಯಾಣ ದರ ಶೇ.50 ಹಾಗೂ ಹಾಲಿನ ಬೆಲೆ ಶೇ. 15 ರಷ್ಟು ಏರಿಕೆಯಾಗಿದೆ ಎಂದು ಟೀಕಿಸಿದರು.

ಶಕ್ತಿ ಯೋಜನೆಯಿಂದಾಗಿ ಕೆಎಸ್‌ಆರ್‌ಟಿಸಿಗೆ ರೂ. 7,000 ಕೋಟಿ ಬಾಕಿಯನ್ನು ರಾಜ್ಯ ಸರ್ಕಾರ ಇನ್ನೂ ಪಾವತಿಸಿಲ್ಲ. ಇದರಿಂದಾಗಿ ಕೆಎಸ್‌ಆರ್‌ಟಿಸಿ ಮುಚ್ಚುವ ಹಂತ ತಲುಪಿದೆ. ಇದು ಕಟು ವಾಸ್ತವವಾಗಿದೆ. ಕಳೆದ ಎರಡು ವರ್ಷಗಳಲ್ಲಿ ರಾಜ್ಯ ಸರ್ಕಾರ ರೂ. 1. 19 ಲಕ್ಷ ಕೋಟಿ ಸಾಲ ಪಡೆದಿದ್ದರೂ ರಾಜ್ಯದ ಆರ್ಥಿಕ ಪರಿಸ್ಥಿತಿ ತೀವ್ರವಾಗಿ ಹದಗೆಟ್ಟಿದೆ ಎಂದು ಆರೋಪಿಸಿದರು.

ಲೋಕೋಪಯೋಗಿ ಇಲಾಖೆ, ನೀರಾವರಿ ಇಲಾಖೆ ಮತ್ತಿತರ ಇಲಾಖೆಗಳಿಂದ ಬಾಕಿ ಇರುವ ರೂ. 6,000 ಕೋಟಿಯನ್ನು ಪಾವತಿಸಬೇಕಾಗಿದೆ ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ಅವರೇ ಹೇಳಿದ್ದಾರೆ. ಇವು ರಾಜ್ಯ ಸರ್ಕಾರದ ನಿರ್ಧಾರಗಳಾಗಿರುವುದರಿಂದ ರಾಜ್ಯ ಸ್ಪಷ್ಟವಾಗಿ ಆರ್ಥಿಕ ದಿವಾಳಿಯತ್ತ ಸಾಗುತ್ತಿದೆ. ರಾಜ್ಯ ಹಿಂದೆಂದೂ ಕಂಡರಿಯದ ರೀತಿಯಲ್ಲಿ ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿದೆ ಎಂದು ವಾಗ್ದಾಳಿ ನಡೆಸಿದರು. ಮಾ.7 ರಂದು ತಮ್ಮ 16ನೇ ಬಜೆಟ್ ಮಂಡಿಸಲಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ರಾಜ್ಯದ ನೈಜ ಆರ್ಥಿಕ ಪರಿಸ್ಥಿತಿ ಕುರಿತು ಜನತೆಗೆ ವಿವರಿಸಬೇಕು. ಹಣಕಾಸು ಪರಿಸ್ಥಿತಿ ಕುರಿತು ಶ್ವೇತ ಪತ್ರ ಹೊರಡಿಸಬೇಕು ಎಂದು ಆಗ್ರಹಿಸಿದರು.

# ಸ್ಥಳೀಯ ಸಂಸ್ಥೆಗಳ ಚುನಾವಣೆಗೂ ಮುನ್ನವೇ ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಮಾಡಿ...

## ಹೈಕಮಾಂಡ್‌ಗೆ ಪರಮೇಶ್ವರ್ ಒತ್ತಾಯ



ಬೆಂಗಳೂರು, ಫೆ.19– ಆಡಳಿತಾರೂಢ ಕಾಂಗ್ರೆಸ್ ಪಕ್ಷದೊಳಗಿನ ಅಧಿಕಾರ ಹಂಚಿಕೆ ಜಗಳ ದಿನದಿಂದ ದಿನಕ್ಕೆ ಉಲ್ಬಣಗೊಳ್ಳುತ್ತಿರುವಂತೆ ಕಾಣುತ್ತಿದೆ. ಹೀಗಾಗಿ ರಾಜಕೀಯ ವಿದ್ಯಮಾನಗಳು ಬಿರುಸುಗೊಳ್ಳುತ್ತಿದೆ. ಈ ಮಧ್ಯೆ ಗೃಹ ಸಚಿವ ಡಾ.ಜಿ ಪರಮೇಶ್ವರ್ ದೆಹಲಿಗೆ ಪ್ರಯಾಣ ಬೆಳೆಸಿದ್ದಾರೆ.

ಗೃಹ ಸಚಿವ ಜಿ.ಪರಮೇಶ್ವರ ಮಂಗಳವಾರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್ ಅವರನ್ನು ಭೇಟಿ ಮಾಡಿದ್ದಾರೆ, ಈ ವೇಳೆ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಮುನ್ನವೇ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಬದಲಿಸಿ ಹೊಸ ರಾಜ್ಯ ಘಟಕದ ಅಧ್ಯಕ್ಷರನ್ನು ನೇಮಿಸಬೇಕೆಂದು ಒತ್ತಾಯಿಸಿದ್ದಾರೆ ಎಂದು ತಿಳಿದುಬಂದಿದೆ. ಶಿವಕುಮಾರ್ ಅವರನ್ನು ಬದಲಿಸಿ ಹಿಂದುಳಿದ ವರ್ಗಕ್ಕೆ ಸೇರಿದ ನಾಯಕರನ್ನು ನೇಮಕ ಮಾಡುವುದರಿಂದ ಮುಂಬರುವ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತ್ ಚುನಾವಣೆಯಲ್ಲಿ ಪಕ್ಷಕ್ಕೆ ಪ್ರಯೋಜನಕಾರಿಯಾಗಲಿದೆ ಎಂದು ಅವರು ಸಲಹೆ ನೀಡಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ. ಇನ್ನೂ ಇದೇ ವೇಳೆ ಅಧಿಕಾರ ಹಂಚಿಕೆ ಒಪ್ಪಂದದ ಬಗ್ಗೆಯೂ ಚರ್ಚಿಸಿದ್ದಾರೆ ಎನ್ನಲಾಗಿದೆ. ಸಿಎಂ ಸಿದ್ದರಾಮಯ್ಯ ಅವರ ಪಾಳಯದೊಂದಿಗೆ ಗುರುತಿಸಿಕೊಂಡಿರುವ ಪರಮೇಶ್ವರ್, ಅಧಿಕಾರ ಹಂಚಿಕೆ' ಒಪ್ಪಂದದ' ಪ್ರಕಾರ ಪಕ್ಷವು ನಾಯಕತ್ವವನ್ನು ಬದಲಾಯಿಸಲು ಬಯಸಿದರೆ, ಸಿಎಂ ಹುದ್ದೆಗೆ ಹಿಂದುಳಿದ ವರ್ಗಗಳ ನಾಯಕರನ್ನು ಆಯ್ಕೆ ಮಾಡುವಂತೆ ಹೈಕಮಾಂಡ್ ಮೇಲೆ ಒತ್ತಡ ಹೇರಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಆರ್‌ಟಿಐ ಕಾರ್ಯಕರ್ತನೆಂಬ ಸೈಡ್ ಆಕ್ಟರ್ ಸೃಷ್ಟಿಸಿ ಬಿಜೆಪಿ–ಜೆಡಿಎಸ್‌ನಿಂದ ಸಿಎಂ ಸಿದ್ದರಾಮಯ್ಯರ ಹೆಸರು ಕೆಡಿಸುವ ಯತ್ನ

# ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ಸತ್ಯಕ್ಕೆ ಜಯವಾಗಿದೆ

## ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಅಭಿಮತ

ಮೈಸೂರು,ಫೆ.19(ಪಿಎಂ)– ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಅವರ ಕುಟುಂಬವು ಯಾವುದೇ ಹಗರಣ ನಡೆಸಿಲ್ಲ, ಅದಾಗ್ಯೂ ಬಿಜೆಪಿ ಮತ್ತು ಜೆಡಿಎಸ್‌ನವರು ಆರ್‌ಟಿಐ ಕಾರ್ಯಕರ್ತನೆಂಬ ಸೈಡ್ ಆಕ್ಟರ್ ಸೃಷ್ಟಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯರ ಹೆಸರು ಕೆಡಿಸಲು ನಿರಂತರ ಪ್ರಯತ್ನ ನಡೆಸಿದರು. ಆದರೆ ಇಂದು ಸತ್ಯಕ್ಕೆ ಜಯವಾಗಿದೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಹೇಳಿದರು.

ಮೈಸೂರಿನ ಲೋಕಾಯುಕ್ತ ಕಚೇರಿ ಎದುರು ಬುಧವಾರ 'ಸತ್ಯಮೇವ ಜಯತೆ' ಘೋಷವಾಕ್ಯದ ಪೋಸ್ಟರ್ ಹಿಡಿದು ಮುಡಾ ನಿವೇಶನ ಹಂಚಿಕೆ ಪ್ರಕರಣ ಸಂಬಂಧ ದೂರುದಾರ ಸ್ನೇಹಮಯಿ ಕೃಷ್ಣರಿಗೆ ಲೋಕಾಯುಕ್ತ ಕಚೇರಿಯಿಂದ ನೋಟಿಸ್ ನೀಡಿರುವ ಬಗ್ಗೆ ಮಾಧ್ಯಮದವರೊಂದಿಗೆ ಅವರು ಮಾತನಾಡಿದರು.

ಲೋಕಾಯುಕ್ತ ಸ್ವಾಯತ್ತ ಸಂಸ್ಥೆ. ಆದರೆ ಸ್ನೇಹಮಯಿ ಕೃಷ್ಣ ನಿರಂತರವಾಗಿ ಲೋಕಾಯುಕ್ತ ವಿರುದ್ಧವೇ ಆಪಾದನೆ ಮಾಡಿದರು. ಇದೀಗ ಲೋಕಾಯುಕ್ತ ಕಚೇರಿಯಿಂದ ಸ್ನೇಹಮಯಿ ಕೃಷ್ಣರಿಗೆ ನೋಟಿಸ್ ನೀಡಲಾಗಿದೆ. 'ಸಿವಿಲ್ ಸ್ವರೂಪದ್ದೆಂದು', 'ತನಿಖೆ ನಡೆಸಲು ತಕ್ಕುದ್ದಲ್ಲವೆಂದು', 'ಸಂಗತ ಅಥವಾ ಕಾನೂನಿನ ತಪ್ಪು ತಿಳುವಳಿಕೆಯಿಂದು', 'ಶ್ರಮ ಜರುಗಿಸತಕ್ಕುದ್ದಲ್ಲವೆಂದು' ನೋಟಿಸ್‌ನಲ್ಲಿ 4 ಅಂಶಗಳನ್ನು ಉಲ್ಲೇಖಿಸಲಾಗಿದೆ. 'ಸಾಕ್ಷ್ಯಾಧಾರಗಳ ಕೊರತೆ' ಎಂದೂ ಉಲ್ಲೇಖಿಸಲಾಗಿದೆ. ಜೊತೆಗೆ ಈ ವರದಿಯನ್ನು (ಲೋಕಾಯುಕ್ತ ವರದಿ) ವಿರೋಧಿಸುವುದಿದ್ದರೆ, ತಾವು (ಸ್ನೇಹಮಯಿ ಕೃಷ್ಣ) ಈ ನೋಟಿಸು ತಲುಪಿದ ವಾರದೊಳಗೆ ಮ್ಯಾಜಿಸ್ಟ್ರೇಟರ್ ಎದುರು ವಿರೋಧಿಸಬಹುದಾಗಿದೆ ಎಂದು ಸ್ಪಷ್ಟವಾಗಿ ಹೇಳಲಾಗಿದೆ ಎಂದು ವಿವರಿಸಿದರು.

ಸಿದ್ದರಾಮಯ್ಯನವರ ಜನಪರ ಆಡಳಿತ ಸಹಿಸದೇ ಬಿಜೆಪಿ ಮತ್ತು ಜೆಡಿಎಸ್‌ನವರು ಒಬ್ಬ ಆರ್‌ಟಿಐ ಕಾರ್ಯಕರ್ತನೆಂಬ ಸೈಡ್ ಆಕ್ಟರ್ ಅನ್ನು ಸೃಷ್ಟಿಸಿ ಅವನ ಮೂಲಕ ಮುಖ್ಯಮಂತ್ರಿಗಳ ತೇಜೋವಧೆ ಮಾಡಿ, ಅವರ ಹೆಸರಿಗೆ ಮಸಿ ಬಳಿಯಬೇಕೆಂಬ ಯತ್ನಕ್ಕೆ ಮುಂದಾದರು. ಕಳೆದ ಐದಾರು ತಿಂಗಳಿಂದ ನಡೆಯುತ್ತಿರುವ ಇಂತಹ ಪ್ರಯತ್ನಗಳ ನಡುವೆಯೂ ನಮಗೆ ಕೋರ್ಟ್ ಮೇಲೆ ನಂಬಿಕೆ ಇತ್ತು. ಸತ್ಯಕ್ಕೆ ಜಯವಾಗುತ್ತದೆ ಎಂದು 100ಕ್ಕೆ 100ರಷ್ಟು ವಿಶ್ವಾಸ ಹೊಂದಿದ್ದೆವು. ಅಂತೆಯೇ ಇಂದು ಸತ್ಯಕ್ಕೆ ಜಯವಾಗಿದೆ ಎಂದು ತಿಳಿಸಿದರು.




ಮೈಸೂರಿನ ಲೋಕಾಯುಕ್ತ ಕಚೇರಿ ಎದುರು ಬುಧವಾರ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಮಾಧ್ಯಮದವರೊಂದಿಗೆ ಮಾತನಾಡುವ ಮುನ್ನ ಪೋಸ್ಟರ್ ಪ್ರದರ್ಶಿಸಿದರು. ಕಾಂಗ್ರೆಸ್ ಮುಖಂಡ ಕೆ.ಮಹೇಶ್ ಜೊತೆಯಲ್ಲಿದ್ದಾರೆ.

ಸ್ನೇಹಮಯಿ ಕೃಷ್ಣರ ಮಾಧ್ಯಮ ಪ್ರತಿಕ್ರಿಯೆ ನೋಡಿದ್ದು, ಲೋಕಾಯುಕ್ತ ಎಸ್‌ಪಿಯವರ ಬಗ್ಗೆ ಕೇವಲವಾಗಿ ಮಾತನಾಡಿದ್ದಾರೆ. ಈ ಸಂಬಂಧ ದೂರು ದಾಖಲಿಸಿಕೊಳ್ಳಬೇಕು. ಸ್ನೇಹಮಯಿ ಕೃಷ್ಣ ತಾವು ದಾಖಲೆಗಳನ್ನು ಕೊಟ್ಟಿದ್ದೇನೆ ಎನ್ನುತ್ತಾರೆ. ಆದರೆ ಇವರು ಕೊಟ್ಟಿರುವ ದಾಖಲೆಗಳಲ್ಲಿ ಸಹಿ ಸರಿಯಿಲ್ಲ ಎಂಬಿತ್ಯಾದಿ ಕ್ಷುಲ್ಲಕ ವಿಚಾರಗಳನ್ನೇ ಉಲ್ಲೇಖ ಮಾಡಿದ್ದಾರೆ. ಚೆಲ್ಲಿಸ್ ರೀತಿಯಲ್ಲಿ ದೂರು ಕೊಡುತ್ತಾರೆ ಎಂದು ಟೀಕಿಸಿದರು. ಸಿದ್ದರಾಮಯ್ಯರ ಪತ್ನಿ ಪಾರ್ವತಿಯವರ 3 ಎಕರೆ 16 ಗುಂಟೆ ಜಾಗವನ್ನು ಬಿಜೆಪಿ ಸರ್ಕಾರ ಇದ್ದಾಗ ಅಕ್ರಮವಾಗಿ ಮುಡಾದವರು ವಶಪಡಿಸಿಕೊಂಡಿದ್ದರು. ಇದಕ್ಕೆ ಪರಿಹಾರವಾಗಿ 34,820 ಚದರ ಅಡಿ ಜಾಗವನ್ನು ಮುಡಾದವರು ಕೊಟ್ಟಿದ್ದರು. ಇದನ್ನೇ ಬಿಜೆಪಿ ಮತ್ತು ಜೆಡಿಎಸ್‌ನವರು ಸಿದ್ದರಾಮಯ್ಯನವರು ಅಧಿಕಾರ ದುರ್ಬಳಕೆ ಮಾಡಿಕೊಂಡಿದ್ದಾರೆಂದು ಪಾದಯಾತ್ರೆ ಮಾಡಿದ್ದರು. ಅಲ್ಲದೆ, ಮಾಧ್ಯಮಗಳ ಮೂಲಕ ಅವರ ಹೆಸರಿಗೆ ಮಸಿ ಬಳಿಯುವ ಪ್ರಯತ್ನ ಮಾಡಿದರು. ಈಗ ಏನು ಹೇಳುತ್ತಾರೆ ಎಂದು ಅವರು ಹೇಳಲಿ ಎಂದು ಕೇಳಿದರು. ಸ್ನೇಹಮಯಿ ಕೃಷ್ಣ ಅವರೇ ನಿಮಗೆ ಪ್ರೇರಣೆ ಮತ್ತು ಹಣ ಪೂರೈಸಿದ್ದು ಯಾರೆಂದು ಹೇಳಿ. ನಿಮಗೆ ವಕೀಲರನ್ನು ಒದಗಿಸಿಕೊಟ್ಟವರು ಯಾರು. ಮಾಧ್ಯಮಗಳ ಮುಂದೆ ಹೇಳಿ. ಸಿದ್ದರಾಮಯ್ಯನವರು ಏನೆಂಬುದು ಜನರಿಗೆ ಗೊತ್ತಾಗಲಿ. ಇಲ್ಲವಾದರೆ ನಾವು ಹೋರಾಟ ಮಾಡುತ್ತೇವೆ. ಅವರಿಗೆ ಮಸಿ ಬಳಿಯುವ ಕೆಲಸ ಮಾಡಿ ಸುಮ್ಮನೆ ಕುಳಿತುಕೊಳ್ಳುವ ಕೆಲಸ ಮಾಡಬಾರದು ಎಂದು ಎಚ್ಚರಿಸಿದರು.

ಆರ್.ಅಶೋಕ್ ಮತ್ತು ಛಲವಾದಿ ನಾರಾಯಣಸ್ವಾಮಿ ಇಬ್ಬರು ಜೋಕರ್‌ಗಳು. ಇದ್ದು, ಅವರು ಈಗ ಮಾತನಾಡಲಿ. ಈ ಪ್ರಕರಣವನ್ನು ನೀವು ಇಂಟರ್‌ನ್ಯಾಷನಲ್ ಏಜೆನ್ಸಿಗೆ ಕೊಟ್ಟರೂ ಇಷ್ಟೇನೇ. ಸಿಬಿಐಗೆ ಕೊಟ್ಟರೂ ಇಷ್ಟೇನೇ. ಇನ್ನೊಂದು ತನಿಖೆಗೆ ಕೊಟ್ಟರೂ ಇಷ್ಟೇನೇ. ಸಿದ್ದರಾಮಯ್ಯ ಜನಸಾಮಾನ್ಯರ ಭೂಮಿ ಕಬಳಿಸುವ ಕೆಲಸ ಮಾಡಿಲ್ಲ. ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿಯವರ ವಿರುದ್ಧ 14 ಎಕರೆ ಭೂಮಿ ಕಬಳಿಸಿರುವ ಆರೋಪದ ಸಂಬಂಧ ತನಿಖೆ ನಡೆಯುತ್ತಿದ್ದು, ಈ ಬಗ್ಗೆ ಬಿಜೆಪಿಯವರು ಮಾತನಾಡಬೇಕು ಎಂದು ಕಿಚಾಯಿಸಿದರು. ಜಿಲ್ಲೆ ಗ್ರಾಮಾಂತರ ಕಾಂಗ್ರೆಸ್ ವಕ್ತಾರ ಕೆ.ಮಹೇಶ್ ಹಾಜರಿದ್ದರು.

# ಸಂಗೀತ ಪ್ರಿಯರ ಮನಗೆದ್ದ 'ಭಾವ ತರಂಗ'




ನಾದಬ್ರಹ್ಮ ಸಂಗೀತ ಸಭಾದಲ್ಲಿ ಬುಧವಾರ ಪ್ರಸಿದ್ಧ ಭಾವಗೀತೆಗಳ 'ಭಾವ ತರಂಗ' ಗಾಯನ ಕಾರ್ಯಕ್ರಮ ನಡೆಯಿತು.

ಮೈಸೂರು, ಫೆ.19(ಎಂಕೆ)– ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ನಾದಬ್ರಹ್ಮ ಸಂಗೀತಸಭಾದಲ್ಲಿ ಪ್ರಸಿದ್ಧ ಕವಿಗಳು ರಚಿತ ಭಾವಗೀತೆಗಳ 'ಭಾವ ತರಂಗ' ಗಾಯನ ಕಾರ್ಯಕ್ರಮ ಬುಧವಾರ ನಡೆಯಿತು.

ಕರ್ನಾಟಕ ಸುಗಮ ಸಂಗೀತ ಪರಿಷತ್ತು ಮೈಸೂರು ಘಟಕ, ಜನ ಚೈತನ್ಯ ಫೌಂಡೇಷನ್ ವತಿಯಿಂದ ಆಯೋಜಿಸಿದ್ದ ಭಾವಗೀತೆಗಳ ಗಾಯನ ಕಾರ್ಯಕ್ರಮದಲ್ಲಿ ನಾಡಿನ ಹೆಸರಾಂತ ಕವಿಗಳಾದ ರಾಷ್ಟ್ರಕವಿ ಕುವೆಂಪು, ಜಿ.ಎಸ್.ಶಿವರುದ್ರಪ್ಪ, ದ.ರಾ.ಬೇಂದ್ರೆ, ಕೆ.ಎಸ್. ನರಸಿಂಹಸ್ವಾಮಿ, ಕೆ.ಎಸ್.ನಿಸಾರ್ ಅಹಮದ್, ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಎಂ. ಗೋಪಾಲ ಕೃಷ್ಣ ಅಡಿಗ, ಡಿವಿಜಿ, ಬಿ.ಆರ್.ಲಕ್ಷ್ಮಣ ರಾವ್, ಸಂತ ಶಿಶುನಾಳ ಷರೀಫ, ಟಿ.ಪಿ. ಕೈಲಾಸಂ, ಸಿದ್ದಲಿಂಗಯ್ಯ, ದೊಡ್ಡರಂಗೇಗೌಡ, ಚಿ.ಉದಯಶಂಕರ್, ಋಷಿ, ಜಯ ಸುದರ್ಶನ, ಸೋಸಲೆ ಗಂಗಾಧರ್ ಹಾಗೂ ಗೋವಿಂದಸ್ವಾಮಿ ಗುಂಡಾಪುರ ಅವರು ರಚಿಸಿದ 30ಕ್ಕೂ ಹೆಚ್ಚು ಭಾವಗೀತಗೆಳು ಕೇಳುಗರ ಮನಸ್ಸಗೆ ಉಲ್ಲಾಸ ನೀಡಿದವು. ಜನ ಚೈತನ್ಯ ಫೌಂಡೇಷನ್ ಅಧ್ಯಕ್ಷ ಹಾಗೂ ಗಾಯಕ ಆರ್.ಲಕ್ಷ್ಮಣ್ ನೇತೃತ್ವದಲ್ಲಿ ಗಾಯಕರಾದ ಎ.ಡಿ. ಶ್ರೀನಿವಾಸ್, ರಾಜೇಶ್ ಪಡಿಯಾರ್, ಎಸ್.ಅಮರ್, ಅಶ್ವಿನ್ ಅತ್ರಿ, ಎನ್. ಬೆಟ್ಟೇಗೌಡ, ಶ್ರೀಧರ್, ಜಾಯ್ಸ್ ವೈಶಾಕ್, ಡಾ.ಪೂರ್ಣಿಮಾ, ಡಾ. ಸುಮಾ, ಪುಷ್ಪಲತಾ ಶಿವಕುಮಾರ್, ಶುಭಾ ಪಲ್ಲವಿ ಹಾಗೂ ವೇದಶ್ರೀ ಸುಶ್ರಾವ್ಯವಾಗಿ ಹಾಡುವ ಮೂಲಕ ಅಪಾರ ಮೆಚ್ಚುಗೆ ಪಡೆದರೆ, ಕೀ ಬೋರ್ಡ್ ವಾದನದಲ್ಲಿ ಪುರುಷೋತ್ತಮ್, ರಿದಂ ಪ್ಯಾಡ್‌ನಲ್ಲಿ ರಾಘವೇಂದ್ರ ಪ್ರಸಾದ್, ತಬಲದಲ್ಲಿ ಇಂದುಶೇಖರ್, ಮ್ಯಾಂಡೋಲಿನ್‌ನಲ್ಲಿ ವಿಶ್ವನಾಥ್, ಕೊಳಲಿನಲ್ಲಿ ಪುನೀತ್ ಉತ್ತಮ ಸಹಕಾರ ನೀಡಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ ಮಾತನಾಡಿ, ಕಾಪಿರೈಟ್ ಹೆಸರಿನಲ್ಲಿ ಕೆಲವರು ಸುಗಮ ಸಂಗೀತ ಕಾರ್ಯಕ್ರಮಗಳಿಗೆ ಅಡ್ಡಿ ಉಂಟು ಮಾಡದಂತೆ ನಾವು ನಿಮ್ಮೊಂದಿಗೆ ಇರುತ್ತೇವೆ. ಕ್ರಿಮಿನಲ್‌ಗಳು ಮಾತ್ರ ಈ ರೀತಿ ಮಾಡಲು ಸಾಧ್ಯ ಇದಕ್ಕೆ ಜಗ್ಗದೇ ಕಾರ್ಯಕ್ರಮಗಳನ್ನು ನಡೆಸಿ ಎಂದು ಅಭಯ ನೀಡಿದರು.

**ರಾಜ್ಯಮಟ್ಟದ ಸಂಗೀತ ಸಮ್ಮೇಳನ:** ಕರ್ನಾಟಕ ಸುಗಮ ಸಂಗೀತ ಪರಿಷತ್ ಜಿಲ್ಲಾಧ್ಯಕ್ಷ ನಾಗರಾಜು ವಿ.ಬೈರಿ ಮಾತನಾಡಿ, ಮೇ.10 ಮತ್ತು 11ರಂದು ಮೈಸೂರಿನ ಕಲಾಮಂದಿರದಲ್ಲಿ ರಾಜ್ಯ ಮಟ್ಟದ ಸುಗಮ ಸಂಗೀತ ಸಮ್ಮೇಳನ ನಡೆಯಲಿದೆ. ಈಗಾಗಲೇ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಒಪ್ಪಿಗೆ ಪಡೆಯಲಾಗಿದ್ದು, ದೊಡ್ಡ ದೊಡ್ಡ ಕಲಾವಿದರನ್ನು ಕರೆಸಿ ಎರಡು ದಿನಗಳ ಕಾರ್ಯಕ್ರಮ ನಡೆಸಲಾಗುವುದು ಎಂದರು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಸಮಾಜ ಸೇವಕ ಕೆ. ರಘುರಾಂ ವಾಜಪೇಯಿ ಮತ್ತಿತರರು ಉಪಸ್ಥಿತರಿದ್ದರು.

# ಅತ್ತೆಯನ್ನು ಕೊಲ್ಲಲು ವೈದ್ಯರ ಬಳಿ ಮಾತ್ರೆ ಕೇಳಿದ ಸೊಸೆ!

ಬೆಂಗಳೂರು, ಫೆ.19– ಅತ್ತೆಯನ್ನು ತಾಯಿ ಸ್ಥಾನದಲ್ಲಿ ನೋಡುತ್ತಾರೆ. ಆದರೆ ನಗರದಲ್ಲಿ ಅತ್ತೆಯನ್ನು ಕೊಲ್ಲಲು ಸೊಸೆ ವೈದ್ಯರ ಬಳಿಯೇ ಮಾತ್ರೆ ಕೇಳಿದ ಘಟನೆಯೊಂದು ನಡೆದಿದೆ. ಡಾಕ್ಟರ್ ಒಬ್ಬರಿಗೆ ನನ್ನ ಅತ್ತೆಯನ್ನು ಸಾಯಿಸಲು ಮಾತ್ರೆ ಬರೆದುಕೊಡಿ ಎಂದು ಕೇಳಿದ್ದು, ಡಾಕ್ಟರ್ ಒಂದು ಕ್ಷಣ ಶಾಕ್ ಆಗಿದ್ದಾರೆ. ಅತ್ತೆ ಜೊತೆಗಿನ ಜಗಳಕ್ಕೆ ರೋಸಿ ಹೋದ ಸೊಸೆಯೊಬ್ಬರು ಅವರನ್ನು ಕೊಲ್ಲುವ ಪ್ಲ್ಯಾನ್ ಮಾಡಿದ್ದಾರೆ. ಬಳಿಕ ಡಾಕ್ಟರ್ ಸುನೀಲ್ ಕುಮಾರ್ ಎನ್ನುವವರನ್ನು ವಾಟ್ಸಾಪ್‌ನಲ್ಲಿ ಸಂಪರ್ಕಿಸಿದ್ದಾರೆ. ನಮ್ಮ ಅತ್ತೆ ತುಂಬಾ ಹಿಂಸೆ ಕೊಡುತ್ತಿದ್ದಾರೆ. ಅವರಿಗೆ ವಯಸ್ಸಾಗಿದೆ. ಅವರನ್ನು ಹೇಗೆ ಸಾಯಿಸೋದು. ಒಂದೆರಡು ಮಾತ್ರೆ ತೆಗೆದುಕೊಂಡರೆ ಸಾಯುತ್ತಾರಲ್ಲ, ಅದನ್ನು ಹೇಳಿ ಎಂದು ಮೆಸೇಜ್ ಮೂಲಕ ಕೇಳಿದ್ದಾರೆ. ಮಹಿಳೆ ಮಾತ್ರೆ ಕೇಳುವಾಗ ಈ ತರ ಮಾತ್ರೆ ಕೇಳುವುದು ತಪ್ಪು ಎಂದು ವೈದ್ಯರು ಬುದ್ಧಿಮಾತು ಹೇಳಿದ್ದಾರೆ. ವೈದ್ಯರು ಬುದ್ಧಿ ಹೇಳುತ್ತಿದ್ದಂತೆ, ವಾಟ್ಸಾಪ್ ಚಾಟ್ ಡಿಲೀಟ್ ಮಾಡಿದ ಮಹಿಳೆ ಡಾಕ್ಟರ್ ನಂಬರ್‌ನ ಬ್ಲಾಕ್ ಮಾಡಿದ್ದಾರೆ. ಇದಕ್ಕಿಂತ ಮುಂಚೆಯೇ ಸ್ಕ್ರೀನ್‌ಶಾಟ್ ಪಡೆದಿದ್ದ ವೈದ್ಯ ಸುನೀಲ್ ಕುಮಾರ್ ಸಂಜಯ್ ನಗರ ಪೊಲೀಸರಿಗೆ ಮಾಹಿತಿ ನೀಡಿ, ತನಿಖೆ ಮಾಡಿ ಎಂದು ಮನವಿ ಮಾಡಿದ್ದಾರೆ.

# ಬಜೆಟ್‌ನಲ್ಲಿ ಎನ್.ಆರ್.ಕ್ಷೇತ್ರದ ಅಭಿವೃದ್ಧಿಗೆ ವಿಶೇಷ ಅನುದಾನಕ್ಕೆ ಸಿಎಂಗೆ ಮನವಿ



ಸಂದೇಶ್ ಸ್ವಾಮಿ

ಮೈಸೂರು, ಫೆ.19(ಎಂಕೆ)– ಮೈಸೂರಿನ ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಅಭಿವೃದ್ಧಿಗೆ ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ವಿಶೇಷ ಅನುದಾನ ಘೋಷಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮಾಜಿ ಮೇಯರ್ ಸಂದೇಶ್‌ಸ್ವಾಮಿ ಮನವಿ ಮಾಡಿದ್ದಾರೆ.

ಮಾ.7 ರಂದು ದಾಖಲೆಯ 16ನೇ ಬಜೆಟ್ ಮಂಡಿಸುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರಿಕಾ ಪ್ರಕಟಣೆ ಮೂಲಕ ಅಭಿನಂದನೆ ತಿಳಿಸಿರುವ ಅವರು, ಮೈಸೂರಿನ ಸಮಗ್ರ ಅಭಿವೃದ್ಧಿ ನಿಮ್ಮ ಆಶಯಗಳಲ್ಲೊಂದಾಗಿದೆ. ಈ ನಿಟ್ಟಿನಲ್ಲಿ ಸಾಕಷ್ಟು ಪ್ರಯತ್ನಗಳನ್ನು ಮಾಡಿರುವ ತಾವುಗಳು, ಅತ್ಯಂತ ಹಿಂದುಳಿದ ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಅಭಿವೃದ್ಧಿ ಬಗ್ಗೆ ವಿಶೇಷ ಗಮನ ಹರಿಸಬೇಕೆಂಬುದು ಕೋರಿದ್ದಾರೆ. ನರಸಿಂಹರಾಜ ವಿಧಾನಸಭಾ ಕ್ಷೇತ್ರದಲ್ಲಿ ಜನಸಾಂದ್ರತೆ ಹೆಚ್ಚಿದ್ದು, ಅಲ್ಪಸಂಖ್ಯಾತರು ಅಧಿಕವಾಗಿದ್ದಾರೆ. ಎಲ್ಲಾ ಧರ್ಮದವರು ನೆಲೆಸಿರುವ ವಿಶೇಷ ಕ್ಷೇತ್ರ ಇದಾಗಿದ್ದು, ಇಲ್ಲಿನ ಜನ ಕನಿಷ್ಠ ಮೂಲ ಸೌಕರ್ಯಗಳೂ ಇಲ್ಲದೆ ಜೀವನ ನಡೆಸುತ್ತಿದ್ದಾರೆ. ಯುಜಿಡಿ, ಕುಡಿಯುವ ನೀರು, ಬೀದಿ ದೀಪ, ಉತ್ತಮ ರಸ್ತೆ, ವಸತಿ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಅತೀ ಚಿಕ್ಕದಾದ ಮನೆಯಲ್ಲಿಯೇ ಮೂರ್ನಾಲ್ಕು ಕುಟುಂಬಗಳು ಬದುಕುವ ಹೀನಾಯ ಸ್ಥಿತಿ ಇದೆ. ಶಾಂತಿನಗರ, ಗೌಸಿಯಾನಗರ, ಕೆ.ಎನ್.ಪುರ, ಉದಯಗಿರಿ, ಅಜೀಜ್ ಸೇಠ್ ನಗರ, ಬಡೇ ಮಕಾನ್, ಕುರಿ ಮಂಡಿ ಸೇರಿದಂತೆ ಹಲವು ಬಡಾವಣೆಗಳ ಜನ ರೋಸಿ ಹೋಗಿದ್ದಾರೆ. ಸುಮಾರು 30 ರೆವಿನ್ಯೂ ಬಡಾವಣೆಗಳು ನಿರ್ಮಾಣವಾಗಿದ್ದು, ಅಲ್ಲಿನ ನಿವಾಸಿಗಳ ಗೋಳು ಕೇಳುವವರಿಲ್ಲ. ಹಾಗಾಗಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಕ್ಷೇತ್ರದ ಪರಿಶೀಲನೆ ಮಾಡಿಸಿ ವರದಿ ಪಡೆದು, ವರದಿ ಆಧಾರದಲ್ಲಿ ಈ ಕ್ಷೇತ್ರದ ಮೂಲ ಸೌಕರ್ಯಕ್ಕೆ ಯೋಜನೆ ರೂಪಿಸಿ, ಬಜೆಟ್‌ನಲ್ಲಿ ವಿಶೇಷ ಅನುದಾನ ಮೀಸಲಿಡಬೇಕು ಎಂದು ಒತ್ತಾಯಿಸಿದ್ದಾರೆ.

ಕೆಲ ದಿನಗಳ ಹಿಂದೆ ಉದಯಗಿರಿ ಪೊಲೀಸ್ ಠಾಣೆ ಮೇಲೆ ಕಲ್ಲು ತೂರಾಟ ಮಾಡಿದರು. ಇಂತಹ ಘಟನೆಗಳು ಹಿಂದೆಯೂ ನಡೆದಿವೆ. ಇದಕ್ಕೆ ಇಲ್ಲಿನ ವಾತಾವರಣವೂ ಪ್ರಮುಖ ಕಾರಣವಾಗಿದೆ. ಅದೆಷ್ಟೋ ಮಂದಿ ಕೊಳಗೇರಿಗಳಲ್ಲೇ ಹುಟ್ಟಿ, ದುಸ್ಥಿಯಲ್ಲೇ ಜೀವನ ಮುಗಿಸಿದ್ದಾರೆ. ಅನಿವಾರ್ಯವಾಗಿ ಮಕ್ಕಳು ಶಿಕ್ಷಣದಿಂದ ವಂಚಿತರಾಗಿ ದಾರಿ ತಪ್ಪುತ್ತಿದ್ದಾರೆ. ಇಂತಹ ಸೂಕ್ಷ್ಮ ಕ್ಷೇತ್ರದಲ್ಲಿ ಕಾನೂನು–ಸುವ್ಯವಸ್ಥೆ ಬಗ್ಗೆಯೂ ಹೆಚ್ಚು ಗಮನಹರಿಸಬೇಕು ಎಂದು ಮನವಿ ಮಾಡಿದ್ದಾರೆ.

# ಹೆಚ್.ಡಿ.ಕುಮಾರಸ್ವಾಮಿ ಆರೋಗ್ಯದಲ್ಲಿ ಮತ್ತೆ ಏರುಪೇರು: ಚೆನ್ನೈ ಅಪೋಲೋ ಆಸ್ಪತ್ರೆಯಲ್ಲಿ ಚಿಕಿತ್ಸೆ



ಬೆಂಗಳೂರು, ಫೆ.19– ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರ ಆರೋಗ್ಯದಲ್ಲಿ ಮತ್ತೆ ಏರುಪೇರಾಗಿದ್ದು, ಹೆಚ್ಚಿನ ತಪಾಸಣೆಗಾಗಿ ಚೆನ್ನೈನ ಅಪೋಲೋ ಆಸ್ಪತ್ರೆಗೆ ತೆರಳಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ. ಕಳೆದ ಮೂರ್ನಾಲ್ಕು ದಿನಗಳಿಂದ ಕುಮಾರಸ್ವಾಮಿಯವರ ಆರೋಗ್ಯದಲ್ಲಿ ಏರುಪೇರು ಉಂಟಾಗಿತ್ತು. ಆಸ್ಪತ್ರೆಯಲ್ಲಿ ವೈದ್ಯರು ತಪಾಸಣೆ ನಡೆಸಿದ ನಂತರ ಅಗತ್ಯಬಿದ್ದರೆ ದಾಖಲಾಗಬಹುದು ಎಂದು ಮೂಲಗಳಿಂದ ತಿಳಿದುಬಂದಿದೆ. ಕೆಲಸದ ಒತ್ತಡ, ನಿರಂತರ ಪ್ರವಾಸಗಳಿಂದಾಗಿ ಅನಾರೋಗ್ಯಕ್ಕೆ ತುತ್ತಾಗಿರಬಹುದು ಎಂದು ಹೇಳಲಾಗುತ್ತಿದೆ. ಕಳೆದ ವರ್ಷ ಲೋಕಸಭೆ ಚುನಾವಣೆಗೆ ಮುನ್ನ ಕುಮಾರಸ್ವಾಮಿಯವರು ಚೆನ್ನೈ ಅಪೋಲೋ ಆಸ್ಪತ್ರೆಯಲ್ಲಿ ಹೃದಯಕ್ಕೆ ಸಂಬಂಧಿಸಿ ಚಿಕಿತ್ಸೆ ಪಡೆದುಕೊಂಡು ಸ್ವಲ್ಪ ದಿನ ವಿಶ್ರಾಂತಿ ಪಡೆದು ನಂತರ ರಾಜಕೀಯ ಚಟುವಟಿಕೆಗಳಿಗೆ ಮರಳಿದ್ದರು. ಚೆನ್ನೈಗೆ ತೆರಳಿ ಸೂಕ್ತ ಚಿಕಿತ್ಸೆ ಪಡೆದು ಬೆಂಗಳೂರಿಗೆ ವಾಪಸ್ ಆಗಲಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ.

# ರೇಷ್ಮೆ ಕೃಷಿಯಲ್ಲಿ ವಿದೇಶಗಳಿಗೆ ಭಾರತ ಮಾರ್ಗದರ್ಶನ ನೀಡುತ್ತಿದೆ

## ವಿದೇಶಾಂಗ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ವಿರಾಜ್‌ಸಿಂಗ್




ಮೈಸೂರಿನಲ್ಲಿರುವ ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆಯಲ್ಲಿ 21 ವಿದೇಶಿ ಅಭ್ಯರ್ಥಿಗಳಿಗೆ ರೇಷ್ಮೆ ಕೃಷಿ ತರಬೇತಿಯ ಸಮಾರೋಪ ನಡೆಯಿತು. ಮತ್ತೊಂದು ಚಿತ್ರದಲ್ಲಿ ತರಬೇತಿ ಸಂಚಾಲಕಿ ಡಾ.ಆರ್.ಮೀನಾಲ್, ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ವಿರಾಜ್‌ಸಿಂಗ್, ಸಿಎಸ್‌ಬಿ ಸದಸ್ಯ ಕಾರ್ಯದರ್ಶಿ ಪಿ.ಶಿವಕುಮಾರ್, ಸಿಎಸ್‌ಆರ್‌ಟಿಐ ಮೈಸೂರು ನಿರ್ದೇಶಕ ಡಾ.ಗಾಂಧಿದಾಸ್ ಅವರನ್ನು ಕಾಣಬಹುದು.

ಮೈಸೂರು, ಫೆ.19(ಎಂಕೆ)– ದೇಶ–ವಿದೇಶಗಳ ನಡುವೆ ಜ್ಞಾನದ ವಿನಿಮಯದಿಂದ ಭಾರತ ರೇಷ್ಮೆ ಉದ್ಯಮದಲ್ಲಿ ಪ್ರಗತಿ ಸಾಧಿಸಿದ್ದು, 23 ದೇಶಗಳನ್ನೊಳಗೊಂಡ ಅಂತರರಾಷ್ಟ್ರೀಯ ರೇಷ್ಮೆ ಆಯೋಗದಲ್ಲಿ ಪ್ರಮುಖ ಸ್ಥಾನ ಪಡೆದಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ವಿರಾಜ್‌ಸಿಂಗ್ ಹೇಳಿದರು. ಮೈಸೂರಿನ ಮಾನಂದವಾಡಿ ರಸ್ತೆ ಮಾರ್ಗದಲ್ಲಿರುವ ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆಯಲ್ಲಿ 7 ದೇಶಗಳ 21 ಅಭ್ಯರ್ಥಿಗಳಿಗೆ ನಡೆದ 3 ವಾರಗಳ ರೇಷ್ಮೆ ಕೃಷಿ ತರಬೇತಿ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ರೇಷ್ಮೆ ಕೃಷಿಗೆ ಸಂಬಂಧಿಸಿದಂತೆ ಭಾರತ ಇತರೆ ದೇಶಗಳಿಗೆ ಮಾರ್ಗದರ್ಶನ ನೀಡುತ್ತಿದೆ ಎಂದರು.

ಭಾರತ ಸಂಪನ್ಮೂಲ ಹಾಗೂ ಪ್ರತಿಭೆಗಳಿಂದ ಕೂಡಿರುವ ದೇಶವಾಗಿದ್ದು, ಭಾರತದಲ್ಲಿ ಬಂಡವಾಳ ಹೂಡಿಕೆ ಮಾಡುವುದರಿಂದ ಯಶಸ್ಸು ಕಾಣಬಹುದಾಗಿದೆ. ಕೇಂದ್ರ ಸರ್ಕಾರವೂ ಕೂಡ ಸಂಪೂರ್ಣ ಸಹಕಾರ ನೀಡುತ್ತಿದೆ. ಈ ನಿಟ್ಟಿನಲ್ಲಿ ವಿದೇಶ ವ್ಯವಹಾರಗಳ ಸಚಿವಾಲಯ ಹಲವು ಕಾರ್ಯಕ್ರಮಗಳನ್ನು ರೂಪಿಸುತ್ತಿದೆ ಎಂದು ತಿಳಿಸಿದರು. ಮೂರು ವಾರಗಳ ಕಾಲ ತರಬೇತಿ ಪಡೆದ 7 ದೇಶಗಳ 21 ಅಭ್ಯರ್ಥಿಗಳು, ನಿಮ್ಮ ನಿಮ್ಮ ದೇಶಗಳಿಗೆ ವಾಪಸ್ ತೆರಳಿದ ಬಳಿಕ ಪಡೆದಿರುವ ತರಬೇತಿಯನ್ನು ಸದ್ಬಳಕೆ ಮಾಡಿಕೊಳ್ಳಿ. ರೇಷ್ಮೆ ಕೃಷಿಯಲ್ಲಿ ಯಾವುದೇ ಗೊಂದಲಗಳಿದ್ದರೂ ಸಂಸ್ಥೆಯೊಂದಿಗೆ ಸಂಪರ್ಕ ಸಾಧಿಸಿ, ಸಲಹೆಗಳನ್ನು ಪಡೆದುಕೊಳ್ಳಬಹುದು. ಸಂಸ್ಥೆಯೊಂದಿಗೆ ಉತ್ತಮ ಬಾಂಧವ್ಯ ಮುಂದುವರೆಸಬಹುದು ಎಂದು ತಿಳಿಸಿದರು. ಕೇಂದ್ರ ರೇಷ್ಮೆ ಕೃಷಿ ಮಂಡಳಿ ಸದಸ್ಯ ಕಾರ್ಯದರ್ಶಿ ಪಿ.ಶಿವಕುಮಾರ್ ಮಾತನಾಡಿ, ಕಡಿಮೆ ಅವಧಿಯಲ್ಲಿ 2ನೇ ಐಟೆಕ್ ತರಬೇತಿ ಕಾರ್ಯಕ್ರಮ ಯಶಸ್ವಿಯಾಗಿದೆ. ಹಾಗೆಯೇ ಇನ್ನಿತರೆ ನಿರಂತರ ತರಬೇತಿಯೊಂದಿಗೆ ಡಿಪ್ಲೋಮಾ ಕೋರ್ಸ್‌ಗಳನ್ನು ಕೇಂದ್ರ ರೇಷ್ಮೆ ಕೃಷಿ ಮಂಡಳಿ ನಡೆಸಲಾಗುತ್ತಿದೆ. ಐಟೆಕ್ ತರಬೇತಿ ಕಾರ್ಯಕ್ರಮ ವಿಶೇಷ ಅನುಭವ ನೀಡಲಿದ್ದು, ಬೇರೆ ದೇಶಗಳಲ್ಲಿನ ರೇಷ್ಮೆ ಕೃಷಿಯ ಬಗ್ಗೆಯೂ ತಿಳಿದುಕೊಳ್ಳುವುದಕ್ಕೆ ಅನುಕೂಲವಾಗಲಿದೆ ಎಂದರು.

ಭಾರತ ಅಂತರರಾಷ್ಟ್ರೀಯ ರೇಷ್ಮೆ ಆಯೋಗದ ಸದಸ್ಯ ರಾಷ್ಟ್ರವಾಗಿದೆ. ತರಬೇತಿ ಪಡೆದಿರುವ ಅಭ್ಯರ್ಥಿಗಳು, ನಿಮ್ಮದೇ ವೈಯಕ್ತಿಕ ಯೋಜನೆಯಲ್ಲಿ ರೇಷ್ಮೆ ಕೃಷಿ ಆರಂಭಿಸಿ, ನಿಮಗೆ ಮಾರ್ಗದರ್ಶನ ನೀಡಲು ಅಂತರರಾಷ್ಟ್ರೀಯ ರೇಷ್ಮೆ ಆಯೋಗ ಸದಾ ಮುಂದಿರಲಿದೆ ಎಂದು ಭರವಸೆ ನೀಡಿದರು. ನಂತರ ತರಬೇತಿ ಪಡೆದ ವಿದೇಶಿ ಅಭ್ಯರ್ಥಿಗಳಿಗೆ ಪ್ರಮಾಣ ಪತ್ರ ನೀಡಿ ಅಭಿನಂದಿಸಲಾಯಿತು. ಸಿಎಸ್‌ಆರ್‌ಟಿಐ ಮೈಸೂರು ನಿರ್ದೇಶಕ ಡಾ.ಗಾಂಧಿದಾಸ್, ತರಬೇತಿ ಸಂಚಾಲಕಿ ಡಾ.ಆರ್.ಮೀನಾಲ್ ಮತ್ತಿತರರಿದ್ದರು.

## ನಕ್ಕರೆ ಅದೇ ಸ್ವರ್ಗ

ಮಗ : ಅಪ್ಪ ಒಂದು ಮಾತು ಹೇಳಲಾ.
ತಂದೆ : ಹೇಳು ಕಂದ
ಮಗ : ಫೇಸ್‌ಬುಕ್‌ನಲ್ಲಿ ನಂದು ಐದು ಅಕೌಂಟ್ ಫೇಕ್ ಅಪ್ಪ
ತಂದೆ : ಇದನ್ನೆಲ್ಲಾ ನನಗ್ಯಾಕೆ ಹೇಳ್ತಾ ಇದ್ದೀಯಾ?
ಮಗ : ಫೇಸ್‌ಬುಕ್‌ನಲ್ಲಿ ಮೂರು ತಿಂಗಳಿಂದ ಚಾಟ್ ಮಾಡಿ ಮೀಟ್ ಆಗೋಣ ಶ್ವೇತಾ ಅಂತ ಕರೀತಾ ಇದ್ದೀರಲ್ಲ ನೀವು. ಅದು ಬೇರೆ ಯಾರು ಅಲ್ಲ ಅಪ್ಪ, ಅದು ನಾನೇ

ಮೈಸೂರು ಮಿತ್ರ

ಗುರುವಾರ, 20 ಫೆಬ್ರವರಿ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

### ಅಮೃತ ವಾಹಿನಿ..........

ನಿಂದಿಸುವವರಿಗೆಲ್ಲ ಉತ್ತರಿಸುತ್ತ ಕುಳಿತರೆ ನೀವು ಅದೇ ಕೆಲಸ ಮಾಡುತ್ತಿರಬೇಕು. ನಿಂದಕರನ್ನು ಹಿಂದೆ ಬಿಡಿ. ನೀವು ಮುಂದೆ ನಡೆಯಿರಿ. – ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಲಾಭ ನೋಡಿ ಬಾಳೆ ಹಣ್ಣು ತಿಂದಂತೆ.

## ನಿಮ್ಮ ಪತ್ರಗಳು

### ■ ಪಂಚಾಯಿತಿಗಳಿಗೂ ಹಬ್ಬುತ್ತಿರುವ ಲಂಚದ ರೋಗ

ಮಾನ್ಯರೆ,

ಈಗಾಗಲೇ ರಿಂಗ್ ರೋಡ್‌ನ ಆಸುಪಾಸಿನಲ್ಲಿರುವ ಬಡಾವಣೆಗಳನ್ನು ಅಲ್ಲಿನ ಹತ್ತಿರವಿರುವ ಪಟ್ಟಣ ಪಂಚಾಯಿತಿ ವ್ಯಾಪ್ತಿಗಳಿಗೆ ಸೇರಿಸಿರುವುದು ತಮಗೆಲ್ಲಾ ತಿಳಿದ ವಿಷಯ. ನಾನಿರುವ ಮನೆ ರಮ್ಮನಹಳ್ಳಿ ಪಟ್ಟಣ ಪಂಚಾಯಿತಿಯ ವ್ಯಾಪ್ತಿಗೆ ಬರುವುದರಿಂದ ಅಲ್ಲಿ ಇ-ಖಾತೆ ಮಾಡಿಸಲು ನನ್ನ ಸಂಪೂರ್ಣ ಎಲ್ಲಾ ದಾಖಲೆಗಳನ್ನು ಕೊಟ್ಟಿರುತ್ತೇನೆ. ಅದನ್ನು ತೆಗೆದುಕೊಂಡು ಎಲ್ಲಾ ಸರಿಯಾಗಿದೆ ಎಂದು ಅಕ್ನಾಲೆಡ್ಜ್‌ಮೆಂಟ್ ಕೊಟ್ಟ ವ್ಯಕ್ತಿಯು ಪಂಚಾಯಿತಿ ಆಫೀಸಿನ ಮುಖ್ಯಸ್ಥರನ್ನು ನೋಡಿ ಎಂದು ತಿಳಿಸಿದರು. ಅಕ್ಕಪಕ್ಕ ಇದರ ಬಗ್ಗೆ ವಿಷಯವೇನೆಂದು ಕೇಳಿದಾಗ ಇನ್ನೇನು ಸ್ವಾಮಿ ಅವರಿಗೆ ಏನಾದರೂ ಕೊಡಬೇಕಲ್ಲ ಎಂಬ ಉತ್ತರ ಬಂತು. ಈಗಷ್ಟೇ ಮುಡಾದ ಕರ್ಮಕಾಂಡಗಳಿಂದ ಜನರು ನಿಟ್ಟುಸಿರು ಬಿಡುತ್ತಿದ್ದಾರೆ. ಈಗ ಈ ರೋಗ ಪಂಚಾಯಿತಿಗಳಿಗೂ ಹಬ್ಬುತ್ತಿರುವುದು ವಿಪರ್ಯಾಸ. ಆದ್ದರಿಂದ ಸಂಬಂಧಪಟ್ಟ ಇಲಾಖೆಯವರು ದಯವಿಟ್ಟು ಮೊಳಕೆಯಲ್ಲಿಯೇ ಈ ಅನಿಷ್ಟವನ್ನು ಕಿತ್ತು ಹಾಕಿದರೆ ಸಾರ್ವಜನಿಕರಿಗೆ ಒಳ್ಳೆಯ ಸೇವೆಯನ್ನು ಕೊಟ್ಟಂತಾಗುತ್ತದೆ

–ಎಂ.ಎಸ್. ರಾಘವೇಂದ್ರ, ಮೈಸೂರು

### ■ ಶ್ಲಾಘನೀಯ ನಿರ್ಧಾರ

ಮಾನ್ಯರೆ,

ಹಿಂದಿನ ಸರ್ಕಾರದ ಅವಧಿಯಲ್ಲಿ ಅಸ್ತಿತ್ವಕ್ಕೆ ತರಲಾಗಿದ್ದ 10 ಹೊಸ ವಿಶ್ವವಿದ್ಯಾನಿಲಯಗಳ ಪೈಕಿ, 09 ವಿವಿಗಳನ್ನು ಮುಚ್ಚಲು ರಾಜ್ಯಸರ್ಕಾರ ತೀರ್ಮಾನಿಸಿದೆ ಎಂಬ ವರದಿ ಸ್ವಾಗತಾರ್ಹವಾಗಿದೆ. ಆರ್ಥಿಕ ಸಂಪನ್ಮೂಲಗಳ ಕೊರತೆಯಿಂದ ಬಳಲುತ್ತಿರುವ ಈ ವಿವಿಗಳಿಗೆ ತನ್ನ ನೌಕರರಿಗೆ ಸಂಬಳ ನೀಡಲು ಸಹ ಸಾಧ್ಯವಾಗದಂತಹ ಪರಿಸ್ಥಿತಿ ತಲೆದೋರಿದೆ ಎಂದು ಹೇಳಲಾಗಿದೆ. ಹಿಂದಿನ ಬಿಜೆಪಿ ಸರ್ಕಾರ ವಿವೇಚನೆ ಇಲ್ಲದೇ ಜಿಲ್ಲೆಗೊಂದು ವಿವಿಯನ್ನು ರಚಿಸುವ ನಿರ್ಧಾರ ಪ್ರಕಟಿಸಿದ್ದಾಗ ಸಾಕಷ್ಟು ವಿರೋಧ ವ್ಯಕ್ತವಾಗಿತ್ತು. ಇರುವ ವಿವಿಗಳನ್ನು ಸರಿಯಾದ ದಿಕ್ಕಿನಲ್ಲಿ ಕೊಂಡೊಯ್ಯುವ ಬದಲು ಅಂದಿನ ಬಿಜೆಪಿ ಸರ್ಕಾರ ಇಂತಹ ದುಡುಕಿನ ಕ್ರಮ ಕೈಗೊಂಡಿತ್ತು. ಈ ಎಲ್ಲಾ ವಿವಿಗಳ ನೌಕರರ ಪಾಡಂತೂ ಹೇಳತೀರದು. ಕಡೆಗೂ ಈಗಿನ ಸರ್ಕಾರ ಇಂತಹ ಒಂದು ದಿಟ್ಟ ಕ್ರಮ ಕೈಗೊಳ್ಳ ಹೊರಟಿರುವುದು ಶ್ಲಾಘನೀಯ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ವಿವೇಕಾನಂದ ನಗರ.

### ■ ಶಾಲೆಗಳಲ್ಲಿ ಮಕ್ಕಳಿಗೆ ನೀತಿಪಾಠ ಅತ್ಯಂತ ಅಗತ್ಯ

ಮಾನ್ಯರೆ,

ಮಕ್ಕಳಿಗೆ ಶಾಲೆಯಲ್ಲಿ ಮೌಲ್ಯಯುತ ಶಿಕ್ಷಣ ದೊರಕದೇ ಹೋದರೆ ಸತ್ಪ್ರಜೆಯಾಗಲು ಸಾಧ್ಯವೇ? ಪ್ರಸ್ತುತ ನಾವು ಕೃತಕ ಬುದ್ಧಿಮತ್ತೆ, ತಾಂತ್ರಿಕ, ವಿಜ್ಞಾನ, ಗಣಿತ ಹೀಗೆ ಹಲವಾರು ರೀತಿಯ ಶಿಕ್ಷಣ ನೀಡುತ್ತಿರುವುದು ಸರಿಯಷ್ಟೆ, ಆದರೆ ಮೌಲ್ಯಯುತ ಶಿಕ್ಷಣ ನೀಡುವಲ್ಲಿ ವಿಫಲರಾಗಿದ್ದೇವೆ ಎಂದು ರಾಜ್ಯಸಭೆಯಲ್ಲಿ ಸುಧಾಮೂರ್ತಿ ಅವರು ಪ್ರತಿಪಾದಿಸಿರುವುದು ಅತ್ಯಂತ ಶ್ಲಾಘನೀಯ. ಮಕ್ಕಳಿಗೆ ಶಿಕ್ಷಣದ ಜೊತೆಗೆ ನೀತಿ ಕಥೆಗಳನ್ನು ಹೇಳುವುದರಿಂದ ಬದುಕಿನ ಏಳು – ಬೀಳು, ಪ್ರಾಮಾಣಿಕತೆ, ಉತ್ತಮ ನಡತೆ, ಸತ್ಯಸಂಧತೆ ಮೊದಲಾದ ಮೌಲ್ಯಗಳನ್ನು ಮಕ್ಕಳು ಕಲಿಯುವುದರಲ್ಲಿ ಸಂದೇಹವೇ ಇಲ್ಲ. ಕರ್ನಾಟಕದ ಒಂದು ಶಾಲೆಯಲ್ಲಿ ನಾವು ಇದನ್ನು ಪ್ರಾಯೋಗಿಕವಾಗಿ ಜಾರಿಗೊಳಿಸಿದ್ದು ಯಶಸ್ವಿಯಾಗಿದ್ದೇವೆ ಎಂದು ಸುಧಾಮೂರ್ತಿ ಅವರು ರಾಜ್ಯಸಭೆಯಲ್ಲಿ ಹೇಳಿರುವುದು ಸ್ವಾಗತಾರ್ಹ. ಯಾವುದೇ ರಾಜಕೀಯ ಪಕ್ಷಗಳು ಇನ್ನು ಮುಂದಾದರೂ ನಮ್ಮ ದೇಶದಲ್ಲಿ ರಾಜ್ಯಸಭೆಗೆ ಮತ್ತು ವಿಧಾನಪರಿಷತ್‌ಗೆ ನಾಮ ನಿರ್ದೇಶನ ಮಾಡುವಾಗ ಸುಧಾಮೂರ್ತಿ ಅವರಂತಹ ಸುಶಿಕ್ಷಿತರನ್ನು ಸಾಮಾಜಿಕ ನ್ಯಾಯದ ಅಡಿಯಲ್ಲಿ ಆಯ್ಕೆ ಮಾಡಿ ಕಳುಹಿಸಿದರೆ ಇಂತಹ ಜನೋಪಯೋಗಿ ವಿಷಯಗಳು, ಎರಡು ಮೇಲ್ಮನೆಯಲ್ಲಿ ಚರ್ಚಿಸಲು ಅನುಕೂಲವಾಗಿ ಉತ್ತಮ ಸಮಾಜ ನಿರ್ಮಾಣಕ್ಕೆ ನಾಂದಿ ಹಾಡಲು ಸಹಕಾರಿಯಾಗುತ್ತದೆ.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

### ■ ನಾಗರಿಕರು ದೂರು ನೀಡುವಂತಾಗಲಿ

ಮಾನ್ಯರೆ,

ಪಾಲಿಕೆಯಲ್ಲಿ ಕುರ್ಚಿ ವ್ಯವಸ್ಥೆ ಮಾಡಿ ಅಜಯ್ ಶಾಸ್ತ್ರಿಯವರ ಪತ್ರ. 'ಮೈ.ಮಿತ್ರ' ದಿ.17.2.25 ಸಂಬಂಧ ಈ ಪತ್ರ. ಸಂಖ್ಯೆ :ಸಿಆಸು ಇ, 38 ಕತವ 2021. ದಿ. 21.6.21ರ ಕರ್ನಾಟಕ ಸರ್ಕಾರದ ಸಚಿವಾಲಯದ ಸುತ್ತೋಲೆ ಪ್ರಕಾರ ರಾಜ್ಯ ಸರ್ಕಾರದ ಎಲ್ಲಾ ಸರ್ಕಾರಿ ಕಚೇರಿಗಳಿಗೆ ಹಿರಿಯ ನಾಗರಿಕರು ಭೇಟಿ ನೀಡಿದಾಗ ಅವರಿಗೆ ಆಸನದ ವ್ಯವಸ್ಥೆ ಮಾಡಿ ಅವರ ಕೋರಿಕೆಯನ್ನು ಆದ್ಯತೆಯ ಮೇಲೆ ಪರಿಗಣಿಸಬೇಕು ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಕಾರ್ಯದರ್ಶಿಯವರು ಸುತ್ತೋಲೆ ಹೊರಡಿಸಿದ್ದಾರೆ. ಆದರೆ ಜಿಡ್ಡು ಗಟ್ಟಿದ ವ್ಯವಸ್ಥೆಯ, ದಪ್ಪ ಚರ್ಮದ ಅಧಿಕಾರಿಗಳು ಇದನ್ನು ಪಾಲಿಸುತ್ತಿಲ್ಲವಷ್ಟೇ. (ಇಂತಹ ಸುತ್ತೋಲೆ ಇರುವುದು ನನಗೆ ತಿಳಿದಿತ್ತು. ಸುತ್ತೋಲೆ ನನ್ನ ಫೋನ್‌ನಲ್ಲಿ ಡಿಲೀಟ್ ಆಗಿತ್ತು)

'ಮೈ.ಮಿತ್ರ'ದಲ್ಲಿ ಪ್ರಕಟವಾದ ಶಾಸ್ತ್ರೀಯವರ ಪತ್ರದ ಫೋಟೋವನ್ನು ನಾನು ನಗರ ಪಾಲಿಕೆ ಮಾಜಿ ಸದಸ್ಯರಿಗೆ ಕಳುಹಿಸಿದ್ದೆ. ಅದನ್ನು ಓದಿದ ಅವರು ತಮ್ಮ ಬಳಿ ಇದ್ದ ಈ ಸರ್ಕಾರಿ ಆದೇಶದ ಸುತ್ತೋಲೆಯ ಪ್ರತಿಯನ್ನು ನನಗೆ ವಾಟ್ಸಾಪ್‌ನಲ್ಲಿ ಕಳುಹಿಸಿದ್ದರು. (ಅದರ ಪ್ರತಿ ಲಗತ್ತಿಸಿದ್ದೇನೆ.)

ಆದರೆ ಬಹುತೇಕ ಯಾವುದೇ ಸರ್ಕಾರಿ ಕಚೇರಿಯಲ್ಲಿ ಇದನ್ನು ಪಾಲನೆ ಮಾಡುತ್ತಿಲ್ಲ. ಇದೇನು ಹೊಸ ಸುತ್ತೋಲೆಯಲ್ಲ. ಸರ್ಕಾರ ಇಂತಹ ದೂರುಗಳು ಬಂದಾಗ ಆಗಾಗ ಇಂತಹ ಸುತ್ತೋಲೆ ಹೊರಡಿಸಿ ಕೈ ತೊಳೆದುಕೊಳ್ಳುತ್ತದೆ. ಆದರೆ ಇದನ್ನು ಪಾಲನೆ ಮಾಡದ ಕಚೇರಿ, ಅಧಿಕಾರಿಗಳು, ಸಿಬ್ಬಂದಿಗಳ ಮೇಲೆ ಕ್ರಮ ಜರುಗಿಸುವ ವ್ಯವಸ್ಥೆ ಜಾರಿಯಾಗಬೇಕು. ಆಗ ಮಾತ್ರ ಇಂತಹ ಆದೇಶಗಳಿಗೆ ಬೆಲೆ ಬರುತ್ತದೆ. ಕಚೇರಿಗೆ ಭೇಟಿ ನೀಡುವ ನಾಗರಿಕರು, ಹಿರಿಯ ನಾಗರಿಕರು ಕೂಡ ಇಂತಹ ವ್ಯವಸ್ಥೆಯನ್ನು ಪ್ರಶ್ನೆ ಮಾಡಿ ದೂರು ನೀಡುವ ಕ್ರಮವಾಗಬೇಕು.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

### ■ ರಸ್ತೆ ದುರಸ್ತಿಗೊಳಿಸಿ

ಮಾನ್ಯರೆ,

ಮೈಸೂರಿನ ದಕ್ಷಿಣ ಭಾಗದಲ್ಲಿರುವ ಗಂಧದ ಎಣ್ಣೆಯ ಕಾರ್ಖಾನೆಯ ಮುಂಭಾಗದಿಂದ ಅಶೋಕಪುರಂ ಬಡಾವಣೆಗೆ ಸಂಪರ್ಕ ಕಲ್ಪಿಸಿರುವ ಪ್ರಿನ್ಸ್ ಆಫ್ ವೇಲ್ಸ್ ರಸ್ತೆ ಮ್ಯಾನ್‌ಹೋಲ್‌ಗಳು ತೆರೆದಿರುತ್ತವೆ. ಅದರಲ್ಲಿಯೂ ಎನ್‌ಐಇ ಸಂಸ್ಥೆಯ ಹೈಡ್ರಾಲಿಕ್ಸ್ ವಿಭಾಗದ ಹಿಂದೆ ಇರುವ ಮ್ಯಾನ್‌ಹೋಲ್ ಸುತ್ತಮುತ್ತಲೂ ಗುಂಡಿಗಳಿರುತ್ತವೆ. ರಸ್ತೆಯ ಜಲ್ಲಿ ಕಲ್ಲು ಎದ್ದು ಸಂಚಾರಕ್ಕೆ ಬಹಳ ತೊಂದರೆಯಾಗಿದೆ. ರಾತ್ರಿಯ ಸಮಯದಲ್ಲಂತೂ ಈ ಗುಂಡಿಗಳು ಸರಿಯಾಗಿ ಕಾಣಿಸುವುದಿಲ್ಲ. ರಸ್ತೆ ದೀಪ ಸಹ ಸರಿಯಾಗಿ ಬೆಳಕು ಬೀರುವುದಿಲ್ಲ. ಇದರಿಂದಾಗಿ ಅಪಘಾತಕ್ಕೆ ಆಸ್ಪದ ನೀಡಿದಂತಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನಹರಿಸಿ ರಸ್ತೆಯನ್ನು ದುರಸ್ತಿಗೊಳಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಈ ಮೂಲಕ ಮನವಿ.

– ಎಂ.ಆರ್. ರಮೇಶ್, ಜೆ.ಪಿ.ನಗರ, ಮೈಸೂರು.



ನಿವೇದಿತ ಹೆಚ್.
ಇಂಗ್ಲಿಷ್ ಉಪನ್ಯಾಸಕಿ
ಯುವರಾಜ ಕಾಲೇಜು
ಮೈಸೂರು.

ಮಂಥನ

# ಕನಸ ಹಂಚಿದವರೊಂದಿಗೆ ಮನಸ್ಸು ಹಗುರಾಯ್ತು...!

ಮೈಸೂರಿನಲ್ಲಿ ನೆಲೆಸಿರುವ ಕನ್ನಡದ ಖ್ಯಾತ ಲೇಖಕಿ ಸಿ.ಎನ್.ಮುಕ್ತಾ ಅವರ ಮನೆಯಲ್ಲಿ 17.02.2025ರಂದು ಒಂದು ಹೃದಯಸ್ಪರ್ಶಿ ಕಾರ್ಯಕ್ರಮ ಆಯೋಜನೆಯಾಗಿತ್ತು. ಕನ್ನಡ ಮನಸುಗಳನ್ನು ಒಂದು ಕಾಲದಲ್ಲಿ ತಮ್ಮ ತೆಕ್ಕೆಗೆ ಸಂಪೂರ್ಣವಾಗಿ ತೆಗೆದುಕೊಂಡಿದ್ದ ಕನ್ನಡದ ಒಂದಷ್ಟು ಖ್ಯಾತ ಲೇಖಕಿಯರು ಮತ್ತು ಅವರ ಮಕ್ಕಳ ಜೊತೆಗೆ ಒಂದು ಆಪ್ತ ಸಂವಾದವನ್ನು ಮುಕ್ತಾ ಅವರು ಏರ್ಪಡಿಸಿದ್ದರು. ವಯೋ ಸಹಜವಾದ ಕೆಲವು ತೊಂದರೆಗಳು ಅವರನ್ನು ಬಾಧಿಸಿ ಮನೆಯಲ್ಲಿಯೇ ಕಟ್ಟಿಹಾಕಿವೆಯಾದರೂ ಅವರ ಸಾಹಿತ್ಯಕ ಚಟುವಟಿಕೆಗಳಂತೂ ಅವ್ಯಾಹತವಾಗಿ ನಡೆಯುತ್ತಿರುವುದನ್ನು ನೋಡಿದಾಗ ಅಚ್ಚರಿಯಾಗುತ್ತದೆ. ಸ್ನೇಹ ಬಳಗ ಎಂಬ ಒಂದು ಕನ್ನಡ ಸಾಹಿತ್ಯಾಸಕ್ತರ ಕೂಟವನ್ನು ಹಲವಾರು ವರ್ಷಗಳಿಂದ ನಡೆಸಿಕೊಂಡು ಬರುತ್ತಿದ್ದಾರೆ. ಆ ಬಳಗದ ಮೂಲಕ ಸಾಹಿತ್ಯ ಕೃತಿಗಳ ಕುರಿತಾದ ಚರ್ಚೆ, ಸಾಹಿತಿಗಳೊಂದಿಗೆ ಮುಖಾಮುಖಿಯಂತಹ ಕಾರ್ಯಕ್ರಮಗಳನ್ನು ತಿಂಗಳಿಗೊಮ್ಮೆ ನಡೆಸುತ್ತಿದ್ದಾರೆ.



ಸಿ.ಎನ್.ಮುಕ್ತಾ ಮತ್ತು ಚಿತ್ರಲೇಖ.



(ಎಡದಿಂದ) ಮೀರಾ ಶಂಕರ್, ಆರತಿ ವೆಂಕಟೇಶ್, ವಸುಮತಿ ಉಡುಪ, ಶ್ರೀಲಕ್ಷ್ಮೀ.

> “ ಅಡುಗೆ ಮನೆಯನ್ನೇ ಲೋಕವಾಗಿಸಿಕೊಂಡ, ಮನೆ ಮಕ್ಕಳು ಸಂಸಾರ ಎಂದು ಶಿಕ್ಷಣ ವಂಚಿತರಾಗಿ ಒದ್ದಾಡುತ್ತಿದ್ದ ಹೆಂಗಸರಿಗೆ ಶಿಕ್ಷಣ ದೊರೆಯಲು ಪ್ರಾರಂಭವಾದರೂ, ಅಡುಗೆ ಮನೆ ಅವರ ಪ್ರಮುಖ ರಂಗವಾಗಿತ್ತು. ಸಂಸಾರದ ನಿರ್ವಹಣೆ ಅವರ ಧ್ಯೇಯವಾಗಿತ್ತು. ಉತ್ತಮ ಗೃಹಿಣಿ ಎನಿಸಿಕೊಳ್ಳುವುದು ಅವರ ಮುಖ್ಯ ಗುರಿಯಾಗಿತ್ತು. ಅಥವಾ ಸಮಾಜ ಹೀಗೆ ಅವರನ್ನು ರೂಪಿಸಿತ್ತು. ಹೊರ ಪ್ರಪಂಚಕ್ಕೆ ನಿಧಾನಕ್ಕೆ ತೆರೆದುಕೊಳ್ಳುತ್ತಿದ್ದ ಅವರು ತಮಗೆ ಕಂಡದ್ದನ್ನು ಬರೆಯಲು ತೊಡಗಿದರು ಎಂಬ ಸಣ್ಣ ಪ್ರಜ್ಞೆಯೂ ಇಲ್ಲದೇ ಅವರನ್ನು ಹೀಯಾಳಿಸ ತೊಡಗಿದ್ದ ವಿಮರ್ಶಕರ ಕ್ರೌರ್ಯ ಕ್ಷಮೆಗೆ ಅರ್ಹವಲ್ಲ. ಈಗಲೂ ಪರಿಸ್ಥಿತಿ ಅಷ್ಟೇನೂ ಬದಲಾಗಿಲ್ಲದಿದ್ದರೂ ಸಹನೀಯವಾಗಿದೆ ಎಂಬುದು ಸಮಾಧಾನಕರ.

ಸೋಮವಾರ ನಡೆದ ಕಾರ್ಯಕ್ರಮದಲ್ಲಿ, ಹಿರಿಯ ಲೇಖಕಿ ಚಿತ್ರಲೇಖ, ವಸುಮತಿ ಉಡುಪ ಅವರೊಂದಿಗೆ, ತ್ರಿವೇಣಿ ಅವರ ಮಗಳು ಮೀರಾ ಶಂಕರ್, ಎಚ್.ಜಿ.ರಾಧಾದೇವಿ ಅವರ ಮಗಳು ಶ್ರೀಲಕ್ಷ್ಮೀ ಮತ್ತು ಸ್ವತಃ ಕಾದಂಬರಿಕಾರ್ತಿಯಾಗಿರುವ ಉಷಾ ನವರತ್ನರಾಮ್ ಅವರ ಪುತ್ರಿ ಆರತಿ ವೆಂಕಟೇಶ್ ಭಾಗಿಯಾಗಿದ್ದರು.

ಈ ಕಾರ್ಯಕ್ರಮ ಅತ್ಯಂತ ಮಧುರ ಕ್ಷಣಗಳನ್ನು ಅಲ್ಲಿ ಉಪಸ್ಥಿತರಿದ್ದ ಪ್ರತಿಯೊಬ್ಬರಿಗೂ ಕಟ್ಟಿಕೊಟ್ಟಿತು. ಬೃಹತ್ ವೇದಿಕೆಯಲ್ಲಿ ಬಹುಶಃ ಕಾಣಲಾಗದ ಆಪ್ತ ಸಂಭ್ರಮದ ವಾತಾವರಣ ಅಲ್ಲಿತ್ತು.

ಆರಂಭದಲ್ಲಿ ಅತಿಥಿಗಳ ಪರಿಚಯಕ್ಕೂ ಮುನ್ನ ಸಭಿಕರು ತಮ್ಮನ್ನು ತಾವು ಪರಿಚಯ ಮಾಡಿಕೊಳ್ಳುವ ಅಪರೂಪದ ಸಂಪ್ರದಾಯ ಕಾರ್ಯಕ್ರಮವನ್ನು ಆಪ್ತವಾಗಿಸುವ ಮೊದಲ ಹೆಜ್ಜೆ. ತಮ್ಮ ಹದಿಹರೆಯದ ಕನಸುಗಣ್ಣಿನ ದಿನಗಳನ್ನು ಹಸನು ಮಾಡಿದ ಲೇಖಕಿಯರು ಮತ್ತು ಅವರ ಮಕ್ಕಳ ಮುಂದೆ ತಮ್ಮನ್ನು ತಾವು ಪರಿಚಯ ಮಾಡಿಕೊಳ್ಳುವ ಅವಕಾಶ ಸಿಕ್ಕಿದ್ದಕ್ಕೆ ಎಲ್ಲರೂ ಭಾವುಕರಾಗಿದ್ದಷ್ಟೇ ಅಲ್ಲ, ಆನಂದತುಂದಿಲರಾದದ್ದು ಅವರುಗಳ ಮುಖದ ಮೇಲೆ ರಾರಾಜಿಸುತ್ತಿದ್ದ ನಗುವಿನಿಂದ ಪ್ರಖರವಾಗಿ ಕಂಡುಬರುತ್ತಿತ್ತು.

ಪ್ರತಿಯೊಬ್ಬರೂ ತಮ್ಮ ಆ ದಿನಗಳನ್ನು ನೆನಪಿಸಿಕೊಂಡಾಗ ಮಿನುಗಿದ ಅವರ ಕಣ್ಣುಗಳ ಹೊಳಪು ಅವರನ್ನು 30–40 ವರ್ಷಗಳಷ್ಟು ಹಿಂದೆ ಒಯ್ದಿದ್ದು ಸ್ಪಷ್ಟವಾಗಿತ್ತು. ಎಲ್ಲರೂ ತಾವು ಸರ್ಕ್ಯುಲೇಟಿಂಗ್ ಲೈಬ್ರರಿಗಳಲ್ಲಿ ದಿನಕ್ಕೆರಡು ಪುಸ್ತಕಗಳನ್ನು ತಮ್ಮ ಅಮ್ಮ ಅಕ್ಕಂದಿರಿಗೆ ತಂದುಕೊಡುವಾಗ ದಾರಿಯಲ್ಲಿಯೇ ಪುಟ ತೆರೆದು ಓದಿದ್ದು, ಬೈಗುಳ ಕೇಳಬಾರದು ಎಂಬುದು ಒಂದು ಕಾರಣವಾದರೆ, ಅತಿಯಾದ ಕುತೂಹಲ ಆಸಕ್ತಿಗಳಿಂದ ಪಠ್ಯಪುಸ್ತಕಗಳ ಮಧ್ಯೆ ಕಾದಂಬರಿಗಳನ್ನು ಇಟ್ಟುಕೊಂಡು ಓದಿದ್ದನ್ನು ಮನದುಂಬಿ ನೆನೆದರು. ಕಾದಂಬರಿಗಳು ಕಟ್ಟಿಕೊಡುತ್ತಿದ್ದ ಆದರ್ಶಮಯ ಹೆಂಡತಿ ಅಕ್ಕ-ತಂಗಿ ಅಜ್ಜಿಯರಂತೆ ತಾವೂ ಆಗಬೇಕು ಎಂದು ನಿರ್ಧರಿಸಿದ್ದು, ಕಾದಂಬರಿಯ ನಾಯಕಿಯಂತೆ ಸಿಂಗರಿಸಿಕೊಂಡಿದ್ದು, ಅಲ್ಲಿಯ ವರ್ಣನೆ ಓದಿ ಅವುಗಳಂತಹ ಸೀರೆ ಬಳೆ ಕೊಂಡಿದ್ದು, ಕಾದಂಬರಿ ನಾಯಕನಂತಿರುವ ಭಾವೀ ಪತಿಯನ್ನು ಹೊಂದುವ ಕಲ್ಪನಾ ವಿಲಾಸದಲ್ಲಿ ತೇಲಿದ್ದು, ಅಲ್ಲಿನ ನವಿರು ಪ್ರೇಮದ ದೃಶ್ಯಗಳನ್ನು ಓದಿ ಭಾವಜೀವಿಗಳಾದದ್ದು... ಹೀಗೆ ಇವೆಲ್ಲವನ್ನು ಹೇಳಿಕೊಂಡಾಗ ಅವರೆಲ್ಲರೂ ಕಾಲದಲ್ಲಿ ಬಹಳ ಹಿಂದೆ ಹೋಗಿ ಬಿಟ್ಟಿದ್ದರು ಮತ್ತು ಸಂತಸದಿಂದ ಕೆಂಪಾಗಿದ್ದರು!

ಆ ಕಾದಂಬರಿಗಳು ಸೃಷ್ಟಿಸಿದ್ದ ತಂಗಾಳಿಯಂತಹ ಹವಾ ಅವರೆಲ್ಲರ ಜೀವನಗಳನ್ನು ಹರ್ಷಮಯವಾಗಿಸಿದ್ದಕ್ಕೆ ಅವರೆಲ್ಲರೂ ಕೃತಜ್ಞತಾ ಪೂರ್ವಕವಾಗಿ ಇಷ್ಟೆಲ್ಲವನ್ನೂ ಆಡಿದ್ದರು. ಈ ಭಾವನಾತ್ಮಕ ಪರಿಚಯಾತ್ಮಕ ಮಾತುಗಳ ನಂತರ ಲೇಖಕಿಯರು ತಮ್ಮ ಮನದ ಮಾತುಗಳನ್ನು ಆಡಿದರು.

ಮಾತೃಭಾಷೆ ತಮಿಳು, ಅಪ್ಪನ ಮಿಲಿಟರಿ ಕೆಲಸದಿಂದಾಗಿ ದೂರದ ನಾಗಪುರದಲ್ಲಿ ಹಿಂದಿ ಮಾಧ್ಯಮದಲ್ಲಿ ಶಿಕ್ಷಣ ಆರಂಭ, ಕನ್ನಡ ಕಲಿತಿದ್ದು ಮನೆಯಲ್ಲಿ ಅಪ್ಪನ ಮೂಲಕ, ಶಿಕ್ಷಣ ಇಂಗ್ಲಿಷ್ ಮಾಧ್ಯಮದಲ್ಲಿ! ಇವರು ನಮ್ಮ ಕನ್ನಡದ ಖ್ಯಾತ ಕಾದಂಬರಿಕಾರ್ತಿ! ಅವರೇ, 'ಮುದುಡಿದ ತಾವರೆ ಅರಳಿತು', 'ಸಮಯದ ಗೊಂಬೆ' ಚಿತ್ರಗಳಿಗೆ ಕಥೆ ನೀಡಿದ **ಚಿತ್ರಲೇಖಾ** ಅವರು! ಹೃದಯ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರೂ ಬೆಂಗಳೂರಿಂದ ಅತ್ಯಂತ ಪ್ರೀತಿಯಿಂದ ಕಾರ್ಯಕ್ರಮಕ್ಕಾಗಿ ಬಂದಿದ್ದರು. ತಾವು ಕಾದಂಬರಿಕಾರ್ತಿ ಕತೆಯನ್ನು ಹೇಳಿದ ಅವರ ಮಾತುಗಳನ್ನು ಕೇಳಿದ ಮೇಲೆ ಅಚ್ಚರಿಪಡುವ ಸರದಿ ನಮ್ಮದಾಗಿತ್ತು.

ಅತ್ಯಂತ ಜನಪ್ರಿಯರಾದ ಇವರು 160 ಕಾದಂಬರಿಗಳನ್ನು ರಚಿಸಿದ್ದಾರೆ. ಆದರೆ ಇವರಿಗೆ ಇದುವರೆಗೂ ಒಂದೂ ಪ್ರಶಸ್ತಿ ಬಂದಿಲ್ಲ ಎಂಬುದನ್ನು ಕೇಳಿ ತುಂಬಾ ಬೇಸರವಾಯಿತು.

ಶಿವಮೊಗ್ಗೆಯ ಕಡೆಯ ಮಲೆನಾಡಿನ ಜೀವನವನ್ನು ತಮ್ಮ ಕೃತಿಗಳ ಮೂಲಕ ನಮಗೆ ಪರಿಚಯಿಸಿದ **ವಸುಮತಿ ಉಡುಪ** ಅವರದು ನಿಶ್ಶಬ್ಧ ಸಾಹಿತ್ಯ ಸೇವೆ. ಇಂದಿಗೂ ತಮ್ಮ ಪಾಡಿಗೆ ತಾವು ಬರೆಯುತ್ತಿರುವ ಇವರ ಕೆಲವೇ ಕೆಲವು ಮಾತುಗಳು ಅವರ ಇನಿದನಿಯಲ್ಲಿ ಹಿತವೆನಿಸಿದವು.

ಉಷಾ ನವರತ್ನರಾಮ್ ಅವರ ಪುತ್ರಿ ಕಾದಂಬರಿಕಾರ್ತಿ **ಆರತಿ ವೆಂಕಟೇಶ್** ತಮ್ಮ ತಾಯಿ ಮತ್ತು ತಂದೆ ತಮಗೆ ಬಳುವಳಿಯಾಗಿ ನೀಡಿದ ಬರವಣಿಗೆಗೆ ಕೃತಜ್ಞತೆ ಸಲ್ಲಿಸುತ್ತಾ ತಮ್ಮ ತಾಯಿಯ ವಿಶಿಷ್ಟ ವ್ಯಕ್ತಿತ್ವವನ್ನು ತೆರೆದಿಟ್ಟರು. ತಮ್ಮ ತಾಯಿಗಿದ್ದ ಸೌಂದರ್ಯ ಪ್ರಜ್ಞೆ, ಆಧುನಿಕ ಮನೋಭಾವ, ಸ್ನೇಹಶೀಲತೆ ಎಲ್ಲವನ್ನೂ ನೆನೆಸಿಕೊಳ್ಳುತ್ತಾ, ತಮ್ಮ ತಾಯಿಯವರ ನಾವೀನ್ಯತೆಗೆ ತದ್ವಿರುದ್ಧವಾದ ತಮ್ಮ ಸಾಂಪ್ರದಾಯಿಕ ಮನೋಭಾವವನ್ನು ತೆರೆದಿಟ್ಟರು. ಉಷಾ ಅವರು 1990ರಲ್ಲಿ ರಚಿಸಿದ 'ಕರೆದರೂ ಬರಬಾರದೆ' ಕಾದಂಬರಿಯ ಕತೆ ಮತ್ತು 1993ರಲ್ಲಿ 'ಆಪ್ತಮಿತ್ರದ' ಮೂಲ ಚಿತ್ರ ಮಣಿಚಿತ್ರತ್ತಾಳ್ ಚಿತ್ರದ ಕತೆ ಒಂದಕ್ಕೊಂದು ಹೊಂದಿಕೆಯಾಗುವ ಅಚ್ಚರಿಯ ವಿಷಯವನ್ನು ಅವರ ಬಾಯಿಂದ ಕೇಳಿ ಎಲ್ಲರೂ ದಂಗಾದರು.

ಇನ್ನು 180 ಕಾದಂಬರಿಗಳನ್ನು ರಚಿಸಿ ಜನಪ್ರಿಯತೆಯ ಉತ್ತುಂಗವನ್ನು ಏರಿದ್ದ ಇಂದಿಗೂ ಅಲ್ಲಿಯೇ ರಾರಾಜಿಸುತ್ತಿರುವ ಎಚ್.ಜಿ.ರಾಧಾದೇವಿ ಅವರ ಪುತ್ರಿ, ತಾಯಿಯ ಮೇಲೆ ಅತೀವ ಪ್ರೀತಿ ಮತ್ತು ಗೌರವವನ್ನು ಇಟ್ಟುಕೊಂಡಿರುವುದು ಮಾತ್ರವಲ್ಲದೆ, ಅವರ ಕಾದಂಬರಿಗಳ ಮರುಮುದ್ರಣಗಳ ಉಸ್ತುವಾರಿಯನ್ನೂ ನೋಡಿಕೊಳ್ಳುತ್ತಿದ್ದಾರೆ. ಎಚ್.ಜಿ. ರಾಧಾದೇವಿ ಅವರ ಕಾದಂಬರಿಯೊಂದನ್ನು ಹಿಂದಿಗೆ ಅನುವಾದಿಸಿ ದೆಹಲಿಯ ಪ್ರಕಾಶನವೊಂದರ ಮೂಲಕ ಪ್ರಕಟಿಸಿದ್ದಾರೆ. ಫೇಸ್‌ಬುಕ್‌ನಲ್ಲಿ ಪುಸ್ತಕ ಅವಲೋಕನ ಎಂಬ ಪೇಜ್ ಅನ್ನು ಆರಂಭಿಸಿ ಎಲ್ಲ ಕನ್ನಡ ಲೇಖಕ–ಲೇಖಕಿಯರ ಕೃತಿಗಳ ಓದು ಮತ್ತು ವಿಮರ್ಶೆಯನ್ನು ಓದುಗರು ಮಾಡುವಂತೆ ಪ್ರೇರೇಪಿಸುತ್ತಿದ್ದಾರೆ. ನೋಡಲು ತಾಯಿಯ ಪಡಿಯಚ್ಚಿನಂತೆ ಇರುವ ಶ್ರೀಲಕ್ಷ್ಮೀ ಅವರು, ದೇಶ ಸುತ್ತು ಕೋಶ ಓದು ಎಂಬ ನಾಣ್ಣುಡಿಯಲ್ಲಿನ, ಕೋಶ ಓದು ಎನ್ನುವ ಭಾಗವನ್ನು ತಮ್ಮ ತಾಯಿ ವ್ರತದಂತೆ ಪಾಲಿಸುತ್ತಿದ್ದರು. ಹಾಗಾಗಿ ಹಲವು ವಿಷಯಗಳಿಗೆ ಸಂಬಂಧಿಸಿದ ಕನ್ನಡ ಮತ್ತು ಇಂಗ್ಲಿಷ್ ಪುಸ್ತಕಗಳನ್ನು ಓದುತ್ತಿದ್ದರು. ಹಾಗಾ ಗಿಯೇ ಅವರ ಕಾದಂಬರಿಗಳಲ್ಲಿ ಸಾಮಾನ್ಯ ಗೃಹಿಣಿಯಿಂದ ಹಿಡಿದು, ಡಾಕ್ಟರ್, ಗಗನಸಖಿ, ಬ್ಯಾಂಕ್ ಉದ್ಯೋಗಿ, ಶಿಕ್ಷಕಿ, ಚಿತ್ರಕಾರ್ತಿ, ವೇಶ್ಯಾಸುಳಿಗೆ ಸಿಲುಕಿದ್ದ ಮಹಿಳೆಯರ ಪಾತ್ರಗಳನ್ನೂ ನೈಜವಾಗಿ ಚಿತ್ರಿಸಲು ಸಾಧ್ಯವಾಗಿದ್ದು? ಎಂದು ಹೆಮ್ಮೆಯಿಂದ ಹೇಳಿದರು.

ಈ ಎಲ್ಲ ಲೇಖಕಿಯರಿಗೂ ಸ್ಫೂರ್ತಿಯ ಸೆಲೆಯಾಗಿದ್ದ ಮಹಾನ್ ಲೇಖಕಿ ತ್ರಿವೇಣಿ ಅವರ ಮಗಳು, **ಮೀರಾ ಶಂಕರ್** 10 ದಿನದ ಕೂಸಿದ್ದಾಗಲೇ ತಮ್ಮ ತಾಯಿಯನ್ನು ಕಳೆದುಕೊಂಡವರು. ಮೀರಾ ಅವರಿಗೆ ತಮ್ಮ ತಾಯಿಯ ಮುಖವನ್ನು ನೋಡಿದ್ದಾಗಲೀ, ಅವರ ಅಪ್ಪುಗೆಯ ಬಿಸಿ ಅನುಭವಿಸಿದ್ದಾಗಲೀ, ಅವರ ಮಡಿಲಲ್ಲಿ ಆಡಿದ್ದಾಗಲೀ ನೆನಪಿರಲು ಶಕ್ಯವೇ ಇಲ್ಲ. ಆದರೂ ಅವರಿಗೆ ತಮ್ಮ ತಾಯಿಯ ಮೇಲಿರುವ ಅಸೀಮ ಪ್ರೇಮ, ಶ್ರದ್ಧೆ, ಆಸಕ್ತಿ, ಗೌರವ ನಂಬಲ ಸಾಧ್ಯವಾದದ್ದು. 17 ವರ್ಷಗಳ ಕಾಲ ಅಮೆರಿಕೆ ಯಲ್ಲಿದ್ದು ಈಗ ಮೈಸೂರಿನಲ್ಲಿಯೇ ನೆಲೆಸಿರುವ ಮೀರಾ ಅವರು, ತ್ರಿವೇಣಿ ಅವರ ಕಾದಂಬರಿಗಳನ್ನು ಧ್ವನಿ ಪುಸ್ತಕಗಳು ಮತ್ತು ಇ-ಬುಕ್‌ಗಳನ್ನಾಗಿ ಮಾಡಿದ್ದಾರೆ. ಅವರ ಮನೆಯನ್ನು ಮ್ಯೂಸಿಯಂ ಆಗಿ ಪರಿವರ್ತಿಸಿ, ಅದನ್ನು ಸಾಹಿತ್ಯಾಸಕ್ತರ ನೆಚ್ಚಿನ ತಾಣವನ್ನಾಗಿಸಬೇಕೆಂದಿರುವುದು ಎಲ್ಲರಿಗೂ ತಿಳಿದಿದೆ. ಬೆಳ್ಳಿ ಮೋಡದ ಉದ್ಘಾಟನೆಗೆ ಪ್ರೀತಿಯ ಆಹ್ವಾನವೀಯುತ್ತಲೇ, ತಮ್ಮ ತಾಯಿ ಗಳಿಸಿರುವ ಪ್ರೀತಿ–ಗೌರವ ನನ್ನನ್ನು ಅವರಿಗೆ ಮತ್ತೆ ಹತ್ತಿರವಾಗಿಸಿತು ಎಂದಾಗ ಎಲ್ಲರ ಕಣ್ಣುಗಳೂ ತೇವವಾದವು.

ಚಿತ್ರಲೇಖ, ವಸುಮತಿ ಉಡುಪ, ರಾಧಾದೇವಿ ಮತ್ತು ಉಷಾ ನವರತ್ನರಾಮ್ ಎಲ್ಲರಿಗೂ ತ್ರಿವೇಣಿ ಅವರು ಆದರ್ಶವಾಗಿದ್ದರು ಎಂಬ ವಿಷಯವನ್ನು ಯಾರೂ ಖಂಡಿತಾ ಬಾಯಿ ಮಾತಿಗೆ ಹೇಳಲಿಲ್ಲ. ಅವರ ನಿಧನದ ಸುದ್ದಿ ರೇಡಿಯೋದಲ್ಲಿ ಪ್ರಸಾರವಾದಾಗ ದಿನಗಟ್ಟಲೆ ಕಣ್ಣೀರು ಸುರಿಸಿದ್ದನ್ನು ಅಲ್ಲಿ ನೆರೆದಿದ್ದ ಪ್ರತಿ ಯೊಬ್ಬರೂ ನೆನಪಿಸಿಕೊಂಡರು.

ಸೋಮವಾರ ನಡೆದ ಕಾರ್ಯಕ್ರಮದ ಬಗ್ಗೆ ಬರೆದು ಅದರ ವರದಿ ನೀಡಬೇಕೆಂಬ ಉದ್ದೇಶದಿಂದ ಖಂಡಿತಾ ನಾನಿಲ್ಲಿ ಈ ಲೇಖನವನ್ನು ಬರೆಯುತ್ತಿಲ್ಲ. ನಮ್ಮ ಕನ್ನಡ ಸಾಹಿತ್ಯ ಲೋಕದಲ್ಲಿ ಲೇಖಕಿ ಯರು ಅವಗಣನೆಗೆ ತುತ್ತಾಗಿರುವುದು ಹೊಸ ವಿಷಯವೇ ನಲ್ಲ. ಅಡುಗೆ ಮನೆ ಸಾಹಿತ್ಯ ಎಂದು ಜರೆದು, ವಿಮರ್ಶೆಗೆ ಅರ್ಹವೇ ಅಲ್ಲದ ಕೃತಿಗಳು ಲೇಖಕಿಯರವು ಎಂಬ ಷರಾ ಬರೆದು ಬಿಟ್ಟಿರುವ ಪುರುಷ ವಿಮರ್ಶಕರು, Literature is a mirror held to the life ಎಂಬ ಸತ್ಯವನ್ನು ಜಾಣತನದಿಂದ ಮರೆತಿದ್ದಾರೆ.

ಅಡುಗೆ ಮನೆಯನ್ನೇ ಲೋಕವಾಗಿಸಿಕೊಂಡ, ಮನೆ ಮಕ್ಕಳು ಸಂಸಾರ ಎಂದು ಶಿಕ್ಷಣ ವಂಚಿತರಾಗಿ ಒದ್ದಾಡುತ್ತಿದ್ದ ಹೆಂಗಸರಿಗೆ ಶಿಕ್ಷಣ ದೊರೆಯಲು ಪ್ರಾರಂಭವಾದರೂ, ಅಡುಗೆಮನೆ ಅವರ ಪ್ರಮುಖ ರಂಗವಾಗಿತ್ತು. ಸಂಸಾರದ ನಿರ್ವಹಣೆ ಅವರ ಧ್ಯೇಯ ವಾಗಿತ್ತು. ಉತ್ತಮ ಗೃಹಿಣಿ ಎನಿಸಿಕೊಳ್ಳುವುದು ಅವರ ಮುಖ್ಯ ಗುರಿಯಾಗಿತ್ತು. ಅಥವಾ ಸಮಾಜ ಹೀಗೆ ಅವರನ್ನು ರೂಪಿಸಿತ್ತು. ಹೊರ ಪ್ರಪಂಚಕ್ಕೆ ನಿಧಾನಕ್ಕೆ ತೆರೆದುಕೊಳ್ಳುತ್ತಿದ್ದ ಅವರು ತಮಗೆ ಕಂಡದ್ದನ್ನು ಬರೆಯಲು ತೊಡಗಿದರು ಎಂಬ ಸಣ್ಣ ಪ್ರಜ್ಞೆಯೂ ಇಲ್ಲದೇ ಅವರನ್ನು ಹೀಯಾಳಿಸತೊಡಗಿದ್ದ ವಿಮರ್ಶಕರ ಕ್ರೌರ್ಯ ಕ್ಷಮೆಗೆ ಅರ್ಹವಲ್ಲ. ಈಗಲೂ ಪರಿಸ್ಥಿತಿ ಅಷ್ಟೇನೂ ಬದಲಾಗಿಲ್ಲದಿದ್ದರೂ ಸಹನೀಯವಾಗಿದೆ ಎಂಬುದು ಸಮಾಧಾನಕರ.

ಆದರೆ ವಿಮರ್ಶಕರು ನಿರ್ದಾಕ್ಷಿಣ್ಯವಾಗಿ ಸಾಹಿತ್ಯವೆಂದು ಕರೆಯಲೇ ನಿರಾಕರಿಸುತ್ತಿದ್ದ ಕಾಲದಲ್ಲಿ ಗಟ್ಟಿಯಾಗಿ ನಿಂತು, ಯಾವುದೇ ಹೀಯಾಳಿಕೆಗೆ ಬೆದರದೆ, ಕುಗ್ಗದೆ ಸಾಹಿತ್ಯ ರಚನೆಯಲ್ಲಿ ತೊಡಗಿದ್ದ ಮೊದಲ ತಲೆಮಾರಿನ ಈ ಲೇಖಕಿಯರ ಬಗ್ಗೆ ಹೆಚ್ಚೇನೂ ವಿಷಯಗಳು ನಮಗೆ ಎಲ್ಲಿಂದಲೂ ತಿಳಿಯುವುದಿಲ್ಲ. ಎಷ್ಟೋ ಲೇಖಕಿಯರು ವಯಸ್ಸು ಸೇರಿದಂತೆ ಹಲವು ಕಾರಣಗಳಿಗೆ ತೆರೆ ಮರೆಗೆ ಸರಿದಿರುವಾಗ, ಅವರು ಜೀವಂತವಿರುವ ಬಗ್ಗೆಯೇ ಅನುಮಾನಗಳು ಹುಟ್ಟಿಕೊಂಡು, ಎಲ್ಲರೂ ಅವರನ್ನು ಮರೆತೇ ಬಿಡುತ್ತೇವೆ. ಇಂತಹ ಸಂದರ್ಭದಲ್ಲಿ ಒಂದು ತಲೆಮಾರಿನ ಮಹಿಳೆಯರನ್ನು ಓದಿಗೆ ಹಚ್ಚಿದ, ಕನಸುಗಳನ್ನು ಹೆಣೆದುಕೊಟ್ಟ ಕಾದಂಬರಿಕಾರ್ತಿಯರನ್ನು ನೆನಪಿಸಿಕೊಟ್ಟ ಈ ಸಮಾರಂಭ ಹಲವು ವಿಚಾರಗಳನ್ನು ತಲೆಗೆ ತುಂಬಿತು. ಇಂತಹ ಕಾರ್ಯಕ್ರಮಗಳು ಮತ್ತೆ ಮತ್ತೆ ನಡೆಯಬೇಕಾದ ಜರೂರನ್ನು ಒತ್ತಿ ಹೇಳಿದ ಹಾಗಿತ್ತು ಈ ಕಾರ್ಯಕ್ರಮ.


ಕಾಫಿ ಉಪ್ಪಿಟ್ಟುಗಳ ಸಮಾರಾಧನೆ, ಅಲಂಕಾರ ಶೃಂಗಾರಗಳ ವರ್ಣನೆ ಎಂದು ತಿರಸ್ಕರಿಸಿದ್ದ ಈ ಪುಸ್ತಕಗಳೇ ಹೆಂಗಸರನ್ನು ಹಲವು ಬವಣೆಗಳ ನಡುವೆಯೂ ಜೀವಂತವಾಗಿಟ್ಟಿದ್ದು ಎಂಬ ಸತ್ಯವನ್ನು ಮರೆಯಬಾರದು.

# ಭವಿಷ್ಯದ ಚುನಾವಣೆ ಫಲಿತಾಂಶಕ್ಕೆ ನೀವೇ ಜವಾಬ್ದಾರರಾಗಿರುತ್ತೀರಿ

### ಕಾಂಗ್ರೆಸ್ ನಾಯಕರಿಗೆ ಮಲ್ಲಿಕಾರ್ಜುನ ಖರ್ಗೆ ಎಚ್ಚರಿಕೆ

ನವದೆಹಲಿ, ಫೆ.19– ಇತ್ತೀಚೆಗಷ್ಟೇ ನಡೆದ ದೆಹಲಿ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಶೂನ್ಯಕ್ಕೆ ತೃಪ್ತಿಪಟ್ಟುಕೊಂಡಿದ್ದು, ಪಕ್ಷದ ಸೋಲಿನ ಬಗ್ಗೆ ಟೀಕೆಗಳು ವ್ಯಕ್ತವಾಗಿವೆ. ಈ ಬೆನ್ನಲ್ಲೇ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪಕ್ಷದ ಪ್ರಧಾನ ಕಾರ್ಯದರ್ಶಿಗಳು ಮತ್ತು ರಾಜ್ಯ ಉಸ್ತುವಾರಿಗಳ ಸಭೆ ನಡೆಸಿದ್ದಾರೆ. ಭವಿಷ್ಯದ ಚುನಾವಣಾ ಫಲಿತಾಂಶಗಳಿಗೆ ಅವರನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

ಪಕ್ಷದ ಪ್ರಧಾನ ಕಚೇರಿ ಇಂದಿರಾ ಭವನದಲ್ಲಿ ನಡೆದ ಸಭೆಯಲ್ಲಿ ನೂತನ ಪದಾಧಿಕಾರಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು, ಪಕ್ಷದ ಮುಖಂಡರು ತಳಮಟ್ಟದಲ್ಲಿ ಕೆಲಸ ಮಾಡಿ ಬೂತ್ ಮಟ್ಟದಿಂದ ಪಕ್ಷವನ್ನು ಬಲಪಡಿಸಬೇಕು ಮತ್ತು ಸಂಘಟನೆಗೆ ಸೈದ್ಧಾಂತಿಕವಾಗಿ ಬದ್ಧರಾಗಿರುವವರನ್ನು ಉತ್ತೇಜಿಸಬೇಕು. ಈಗಾಗಲೇ ಕೆಲವು ಬದಲಾವಣೆಗಳು ನಡೆದಿವೆ ಮತ್ತು ಇನ್ನೂ ಕೆಲವು




ಬದಲಾವಣೆಗಳು ನಡೆಯುತ್ತವೆ ಎಂದು ಹೇಳಿದ್ದಾರೆ.

ಜವಾಬ್ದಾರಿಯ ಪ್ರಮುಖ ವಿಷಯದ ಬಗ್ಗೆ ನಾನು ನಿಮ್ಮೊಂದಿಗೆ ಮಾತನಾಡಲು ಬಯಸುತ್ತೇನೆ. ರಾಜ್ಯಗಳಲ್ಲಿ ಪಕ್ಷವನ್ನು ಪುನರುಜ್ಜೀವನಗೊಳಿಸಲು ಮತ್ತು ಮುಂಬರುವ ಎಲ್ಲ ಚುನಾವಣೆ ಫಲಿತಾಂಶಗಳಿಗಾಗಿ ನಿಮ್ಮೆಲ್ಲರನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದು ಎಂದು ಅವರು ಪದಾಧಿಕಾರಿಗಳಿಗೆ ಹೇಳಿದರು.

ಬೂತ್ ಮಟ್ಟದಿಂದ ಕೇಂದ್ರ ಕಚೇರಿವರೆಗೆ ತಳಮಟ್ಟದಲ್ಲಿ ಪಕ್ಷವನ್ನು ಬಲಪಡಿಸುವ ಜವಾಬ್ದಾರಿ ನಿಮ್ಮ ಮೇಲಿದೆ. ಕಷ್ಟಕಾಲದಲ್ಲಿ ಪಕ್ಷದ ಬೆನ್ನಿಗೆ ಬಂಡೆಯಂತೆ ನಿಲ್ಲುವ ಸೈದ್ಧಾಂತಿಕ ಬದ್ಧತೆ ಇರುವವರನ್ನು ಪಕ್ಷಕ್ಕೆ ಕರೆತರಬೇಕು. ಪಕ್ಷವನ್ನು ಬಲಪಡಿಸಲು ಪ್ರಯತ್ನಿಸುವಾಗ, ಕೆಲವೊಮ್ಮೆ ಕಷ್ಟದ ಸಮಯದಲ್ಲಿ ಓಡಿಹೋಗುವವರನ್ನು ತರಾತುರಿಯಲ್ಲಿ ಕರೆತರಲಾಗುತ್ತದೆ. ಅಂತಹವರಿಂದ ನಾವು ದೂರವಿರಬೇಕು ಎಂದು ಪಕ್ಷದ ಮುಖಂಡರಿಗೆ ತಿಳಿಸಿದರು.

### ಶಾಸಕ ಕೆ.ಹರೀಶ್‌ಗೌಡ, ಪತ್ತಿನ ಮಹಾಮಂಡಲದ ಅಧ್ಯಕ್ಷ ಚಂದ್ರಶೇಖರ್‌ಗೆ ಅಭಿನಂದನೆ...



ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘದ ನೂತನ ಅಧ್ಯಕ್ಷ, ಮೈಸೂರು ಕಾಂಗ್ರೆಸ್ ಮುಖಂಡ ಚಂದ್ರಶೇಖರ್, ಶಾಸಕ ಕೆ.ಹರೀಶ್‌ಗೌಡ ಅವರನ್ನು ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು, ದೇವರಾಜ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಮೇಶ ರಾಯಪ್ಪ ಸನ್ಮಾನಿಸಿದರು. ಈ ವೇಳೆ ಮಾಜಿ ಕಾರ್ಪೊರೇಟರ್ ಗೋಪಿ, ಬಾಲು, ಮುಖಂಡರಾದ ಮಂಜುನಾಥ್, ಒಂಟಿಕೊಪ್ಪಲ್ ಗುರು, ಪಡುವಾರಹಳ್ಳಿ ಕುಮಾರ್, ಇಂದಿರಾಗಾಂಧಿ ಬ್ಲಾಕ್ ಕಾರ್ಯದರ್ಶಿ ರಾಮಚಂದ್ರ, ಮೂರ್ತಿ ಇದ್ದರು.

## ರೀಲ್ಸ್ ಮಾಡುವಾಗ ರೈಲು ಡಿಕ್ಕಿಯಾಗಿ ಮೂವರು ಯುವಕರು ದುರ್ಮರಣ!

ದೊಡ್ಡಬಳ್ಳಾಪುರ, ಫೆ.19– ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರದ ಹೊರವಲಯದ ಸಿದ್ದೇನಾಯಕನಹಳ್ಳಿ ರೈಲ್ವೆ ಹಳಿ ಬಳಿ ರೈಲು ಡಿಕ್ಕಿಯಾಗಿ ಮೂವರು ಯುವಕರು ಸಾವನ್ನಪ್ಪಿರುವ ದಾರುಣ ಘಟನೆ ನಡೆದಿದೆ. ಮೃತರನ್ನು ಉತ್ತರ ಪ್ರದೇಶ ಮೂಲದ 18 ವರ್ಷದ ರಾಹುಲ್, 20 ವರ್ಷದ ಬಿಕೇಶ್ ಮತ್ತು 24 ವರ್ಷದ ಲಲನ್ ಎಂದು ಗುರುತಿಸಲಾಗಿದೆ.

ಮೂವರು ಯುವಕರು ಕಾರ್ಪೆಂಟರ್ ಕೆಲಸ ಮಾಡುತ್ತಿದ್ದರು. ಸಂಜೆ ಕೆಲಸ ಮುಗಿಸಿಕೊಂಡು ರೈಲ್ವೆ ಹಳಿ ಬಳಿ ಬಂದಿದ್ದರು. ರೀಲ್ಸ್ ಮಾಡುತ್ತಿದ್ದಾಗ ರೈಲು ಡಿಕ್ಕಿಯಾಗಿ ಯುವಕರು ಮೃತಪಟ್ಟಿರುವ ಶಂಕೆ ವ್ಯಕ್ತವಾಗಿದೆ. ಯಶವಂತಪುರ ರೈಲ್ವೆ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

*Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com*

## ಹಾಸನ ಮಿತ್ರ

# ಚುನಾವಣೆ ಸಮೀಪದ ವೇಳೆ ಗ್ಯಾರಂಟಿ ಹಣ ಸಿಗುತ್ತೆ

### ಜೆಡಿಎಸ್ ಯುವ ನಾಯಕ ನಿಖಿಲ್ ಕುಮಾರಸ್ವಾಮಿ ವ್ಯಂಗ್ಯ



ಜೆಡಿಎಸ್ ಪಕ್ಷದ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಮಾತನಾಡುತ್ತಿರುವುದು.

ಹಾಸನ,ಫೆ.19–ಕೇವಲ ಚುನಾವಣೆ ಹತ್ತಿರ ಬಂದ ಸಂದರ್ಭದಲ್ಲಿ ಮಾತ್ರ ಗ್ಯಾರಂಟಿ ಹಣವನ್ನು ಕೊಡುವ ಕಾಂಗ್ರೆಸ್ ಸರಕಾರಕ್ಕೆ ಉಳಿದ ಸಮಯದಲ್ಲಿ ನೆನಪು ಬರುವುದಿಲ್ಲ ಎಂದು ಜೆಡಿಎಸ್ ಪಕ್ಷದ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ವ್ಯಂಗ್ಯವಾಡಿದರು.

ನಗರದ ಖಾಸಗಿ ರೆಸಾರ್ಟ್‌ವೊಂದರಲ್ಲಿ ಹಾಸನ, ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆಯ ಪಕ್ಷದ ಜಿಲ್ಲಾಧ್ಯಕ್ಷರು, ಹಾಲಿ, ಮಾಜಿ ಶಾಸಕರು ಕಳೆದ ವಿಧಾನ ಸಭಾ ಚುನಾವಣೆ ಪರಾಜಿತ ಅಭ್ಯರ್ಥಿಗಳ ಸಭೆಯನ್ನು ನಡೆಸಿದ ಬಳಿಕ ಮಾಧ್ಯಮದೊಂದಿಗೆ ಮಾತನಾಡಿದ ಅವರು, ಚನ್ನಪಟ್ಟಣ, ಶಿಗ್ಗಾವಿ, ಸಂಡೂರು ಉಪಚುನಾವಣೆ ಸಮಯದಲ್ಲಿ ಗೃಹಲಕ್ಷ್ಮಿ ಹಣ ಕೊಡಲಾಗಿತ್ತು. ಆದರೆ ಮನೆಯಲ್ಲಿ ಗೃಹಿಣಿಯರು ಗೃಹಲಕ್ಷ್ಮಿ ಹಣ ಬರುತ್ತದೆ ಎಂದು ಕಾದಿದ್ದಾರೆ. ಮುಂದೆ ಜಿಲ್ಲಾ ಪಂಚಾಯತ್ ಮತ್ತು ತಾಲೂಕು ಪಂಚಾಯತ್ ಚುನಾವಣೆ ಘೋಷಣೆ ಆದರೇ ಮಾತ್ರ ಗೃಹ ಲಕ್ಷ್ಮಿಯ ಹಣ ಹಾಕುತ್ತಾರೆ. ಇವರಿಗೆ ಚುನಾವಣೆ ವೇಳೆ ಮಾತ್ರ ಗ್ಯಾರಂಟಿ ನೆನಪಿಗೆ ಬರುತ್ತದೆ ಎಂದು ವ್ಯಂಗ್ಯವಾಡಿದರು.

ಮುಂದೆ ನಡೆಯಲಿರುವ ಜಿಲ್ಲಾ ಪಂಚಾಯತ್ ಮತ್ತು ತಾಲೂಕು ಪಂಚಾಯತ್ ಚುನಾವಣೆ ಕುರಿತು ನಾವು ಸಭೆ ಮಾಡಿದ್ದೇವೆ. ಈಗಾಗಲೇ ಪಕ್ಷದ ಸದಸ್ಯತ್ವ ನೋಂದಣಿ ವೇಗವಾಗಿ ನಡೆಯುತ್ತಿದೆ. ಹಾಸನ, ಶಿವಮೊಗ್ಗ ಚಿಕ್ಕಮಗಳೂರು ಜಿಲ್ಲೆಯ ಶಾಸಕರು, ಮಾಜಿ ಶಾಸಕರು, ಮುಖಂಡರು ಈ ಸಭೆಯಲ್ಲಿ ಭಾಗವಹಿಸಿದ್ದಾರೆ. ಈ ಸಭೆಯಲ್ಲಿ ಸಾಕಷ್ಟು ಚರ್ಚೆ ಮಾಡಿದ್ದೇವೆ. ಈ ಸ್ಥಳೀಯ ಚುನಾವಣೆಯನ್ನು ಗಂಭೀರವಾಗಿ ತೆಗೆದುಕೊಂಡಿದ್ದು, ಹತ್ತು ದಿನದಲ್ಲೇ ಕುಮಾರಣ್ಣ ಜೆಡಿಎಸ್ ಶಾಸಕರು, ಎಂಎಲ್‌ಸಿ, ಮುಖಂಡರ ಸಭೆ ಮಾಡಲಿದ್ದಾರೆ ಎಂದರು.

ಇದೇ ವೇಳೆ ವಿಧಾನಪರಿಷತ್ ಸದಸ್ಯ ಸೂರಜ್ ರೇವಣ್ಣ, ಜೆಡಿಎಸ್ ಶಾಸಕಾಂಗ ಪಕ್ಷದ ಉಪನಾಯಕಿ ಶಾರದಾ ಪೂರ್ಯ ನಾಯಕ್, ಮಾಜಿ ಸಚಿವ ಹೆಚ್.ಕೆ.ಕುಮಾರಸ್ವಾಮಿ, ಶಾಸಕ ಎ.ಮಂಜು, ಸಿ.ಎನ್. ಬಾಲಕೃಷ್ಣ, ಹೆಚ್.ಪಿ.ಸ್ವರೂಪ್, ಮಾಜಿ ಶಾಸಕ ಕೆ.ಎಸ್.ಲಿಂಗೇಶ್, ಮುಖಂಡರಾದ ಶೃಂಗೇರಿ ಸುಧಾಕರ್ ಶೆಟ್ಟಿ, ಶಿವಮೊಗ್ಗ ಮಾಜಿ ಶಾಸಕರಾದ ಪ್ರಸನ್ನ, ಭದ್ರಾವತಿ ಶಾರದ ಅಪ್ಪಾಜಿಗೌಡ, ಅರಸೀಕೆರೆ ಸಂತೋಷ್, ಬಾಣಾವರ ಅಶೋಕ್ ಇತರರು ಉಪಸ್ಥಿತರಿದ್ದರು.

# ಹಳೆ ತಾಲೂಕು ಕಚೇರಿ ನೂತನ ಕಟ್ಟಡಕ್ಕೆ ಶಾಸಕ ಭೇಟಿ; ಪರಿಶೀಲನೆ



ನಿರ್ಮಾಣ ಹಂತದ ನಗರಸಭೆ ಕಟ್ಟಡವನ್ನು ಶಾಸಕ ಸ್ವರೂಪ್ ಪರಿಶೀಲಿಸಿದರು.

ಹಾಸನ, ಫೆ.19– ನಗರದ ಕಟ್ಟಿನಕೆರೆ ಮಾರುಕಟ್ಟೆಯ ಹಳೆ ತಾಲೂಕು ಕಚೇರಿ ಸ್ಥಳದಲ್ಲಿ ನಿರ್ಮಾಣ ಹಂತದಲ್ಲಿರುವ ನಗರಸಭೆ ಕಟ್ಟಡವನ್ನು ಕ್ಷೇತ್ರದ ಶಾಸಕ ಸ್ವರೂಪ್ ಪ್ರಕಾಶ್ ಭೇಟಿ ನೀಡಿ ಪರಿಶೀಲನೆ ನಡೆಸಿ, ಮಾಹಿತಿ ಪಡೆದರು.

ನಗರದ ಹಳೆ ತಾಲೂಕು ಕಚೇರಿ ಸ್ಥಳದಲ್ಲಿ ನಿರ್ಮಾಣ ಹಂತದಲ್ಲಿರುವ ನಗರಸಭೆ ಕಟ್ಟಡಕ್ಕೆ ಭೇಟಿ ನೀಡಿದ ಅವರು, ಸಂಬಂಧಿಸಿದ ಇಲಾಖೆ ಅಧಿಕಾರಿಗಳು ಹಾಗೂ ಗುತ್ತಿಗೆದಾರರ ಜೊತೆಗೆ ಪರಿಶೀಲನೆ ನಡೆಸಿ, ಈಗಾಗಲೇ ಕಟ್ಟಡ ಕಾಮಗಾರಿ ವಿಳಂಬವಾಗಿದ್ದು, ಕಟ್ಟಡ ಕಾಮಗಾರಿಯನ್ನು ಶೀಘ್ರವಾಗಿ ಮುಗಿಸಿ ಹಸ್ತಾಂತರ ಮಾಡಬೇಕು ಎಂದು ಸೂಚನೆ ನೀಡಿದರು. ಈ ಹಿಂದೆ ಹಳೆ ಕಟ್ಟಡದಲ್ಲಿ ಇದ್ದ ಫಲಾನುಭವಿಗಳಿಗೆ ಮಳಿಗೆಗಳ ಹಂಚಿಕೆಯಲ್ಲಿ ಮೊದಲ ಪ್ರಾಧಾನ್ಯತೆ ನೀಡಿ ನಂತರ ಅರ್ಜಿ ಸಲ್ಲಿಸಿದವರ ಪೈಕಿ ನಿಜವಾದ ಹಾಗೂ ಅರ್ಹ ಫಲಾನುಭವಿಗಳಿಗೆ ತಲುಪಿಸುವ ನಿಟ್ಟಿನಲ್ಲಿ ಕೆಲಸಗಳು ಆಗಬೇಕಿದೆ ಎಂದರು.

ಈ ವೇಳೆ ಸಂಬಂಧಿಸಿದ ಇಂಜಿನಿಯರ್, ಗುತ್ತಿಗೆದಾರರು ಹಾಗೂ ಮುಖಂಡರು ಉಪಸ್ಥಿತರಿದ್ದರು.

## ಎಸ್‌ಬಿಎಂ ಮಂಜುಗೆ ಅಭಿನಂದನೆ...



ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ 2025–2030ನೇ ಸಾಲಿನ ಆಡಳಿತ ಮಂಡಳಿ ಚುನಾವಣೆಯಲ್ಲಿ ನಿರ್ದೇಶಕರಾಗಿ ಆಯ್ಕೆಯಾದ ಮಾಜಿ ಕಾರ್ಪೋರೇಟರ್ ಎಸ್‌ಬಿಎಂ ಮಂಜು ಅವರನ್ನು ಅಭಿನಂದಿಸಲಾಯಿತು. ಈ ವೇಳೆ ಮುಖಂಡರಾದ ಮುರುಳಿ, ವಿನೋದ್, ದೀಪಕ್‌ಗೌಡ, ಮಹೇಶ್, ಶಿವಪ್ರಸಾದ್ ಇನ್ನಿತರಿದ್ದರು.

# ಫೆ.23, ಕಣ್ಣಿನ ಉಚಿತ ತಪಾಸಣೆ

ಮೈಸೂರು, ಫೆ.19(ಎಂಟಿವೈ)– ಮೈಸೂರಿನ ಪುರಭವನದಲ್ಲಿ ಫೆ.23 ರಂದು ಬೆಳಿಗ್ಗೆ 11 ಗಂಟೆಗೆ ಕಣ್ಣಿನ ಉಚಿತ ತಪಾಸಣೆ, ಕನ್ನಡಕ ವಿತರಣೆ ಹಾಗೂ ಮಧ್ಯಾಹ್ನ 3 ಗಂಟೆಗೆ ಕರ್ನಾಟಕ ಫ್ಯಾಷನ್ ಶೋ –2025 ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಕರ್ನಾಟಕ ಸಾಂಸ್ಕೃತಿಕ ಹಾಗೂ ಸಾಹಿತ್ಯ ಪರಿಷತ್ತಿನ ನಗರಾಧ್ಯಕ್ಷೆ ಡಾ.ಮೌಲ್ಯ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕ ಸಾಂಸ್ಕೃತಿಕ ಹಾಗೂ ಸಾಹಿತ್ಯ ಪರಿಷತ್ತಿನ ದ್ವಿತೀಯ ವರ್ಷದ ವಾರ್ಷಿಕೋತ್ಸವದ ಅಂಗವಾಗಿ ಫೆ.23 ರಂದು ಬೆಳಗ್ಗೆ 11 ಗಂಟೆಗೆ ಎಎಸ್‌ಜಿ ಆಸ್ಪತ್ರೆ ವತಿಯಿಂದ ಕಣ್ಣಿನ ಉಚಿತ ತಪಾಸಣೆ ಹಾಗೂ ಉಚಿತ ಕನ್ನಡ ವಿತರಣೆ ಕಾರ್ಯಕ್ರಮ ಆಯೋಜಿಸಲಾಗಿದೆ. ಈ ಕಾರ್ಯಕ್ರಮದಲ್ಲಿ 100 ಮಂದಿಗೆ ಉಚಿತವಾಗಿ ಕನ್ನಡಕ ವಿತರಿಸಲಾಗುತ್ತದೆ. ಬಳಿಕ ಅಂದು ಮಧ್ಯಾಹ್ನ 3 ಗಂಟೆಯಿಂದ ಕರ್ನಾಟಕ ಫ್ಯಾಷನ್ ಶೋ–2025 ಕಾರ್ಯಕ್ರಮ ಆಯೋಜಿಸಲಾಗಿದೆ. ಈ ಫ್ಯಾಷನ್ ಶೋದಲ್ಲಿ ಎಲ್ಲಾ ವಯೋಮಾನದ ಆಸಕ್ತರು ಪಾಲ್ಗೊಳ್ಳಬಹುದು ಎಂದರು.

ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ಸಾಂಸ್ಕೃತಿಕ ಹಾಗೂ ಸಾಹಿತ್ಯ ಪರಿಷತ್ ಕಾರ್ಯಾಧ್ಯಕ್ಷ ತೇಜಸ್ ಪೃಥ್ವಿರಾಜ್, ಪದಾಧಿಕಾರಿಗಳಾದ ಅಮೀನಾ ಬೇಗಂ, ಹೇಮಲತಾ, ಎಎಸ್‌ಐ ಆಸ್ಪತ್ರೆಯ ಮುಜೀರ್ ಇದ್ದರು.

## ಕಂದಕಕ್ಕೆ ಉರುಳಿದ ಬಸ್: 25 ಮಂದಿಗೆ ಗಾಯ

ಚಿಕ್ಕೋಡಿ,ಫೆ.19–ಕೆಎಸ್‌ಆರ್‌ಟಿಸಿ ಬಸ್ ಕಂದಕಕ್ಕೆ ಉರುಳಿದ್ದು, 25 ಮಂದಿ ಗಾಯಗೊಂಡಿರುವ ಘಟನೆ ಮಹಾರಾಷ್ಟ್ರದ ಸಾಂಗಲಿ ಜಿಲ್ಲೆಯ ಮೀರಜ್ ತಾಲೂಕಿನ ಮೈಶಾಳ ಗ್ರಾಮದಲ್ಲಿ ನಡೆದಿದೆ. ಮೀರಜ್‌ನಿಂದ ವಿಜಯಪುರಕ್ಕೆ ತೆರಳುತ್ತಿದ್ದ ಬಸ್ ಪಲ್ಟಿಯಾಗಿ 25ರಿಂದ 30 ಅಡಿ ಕಂದಕಕ್ಕೆ ಉರುಳಿದೆ. ಬಸ್‌ನಲ್ಲಿದ್ದ 40 ಜನರಲ್ಲಿ 25 ಮಂದಿಗೆ ಗಾಯಗಳಾಗಿವೆ. ಬಸ್‌ನಲ್ಲಿ ಸಿಲುಕಿದ್ದವರನ್ನು ಸ್ಥಳೀಯರು ಹೊರತೆಗೆದಿದ್ದು, ಗಾಯಾಳುಗಳಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಅದೃಷ್ಟವಶಾತ್ ಭಾರಿ ಅನಾಹುತ ತಪ್ಪಿದೆ. ಮೀರಜ್ ಗ್ರಾಮೀಣ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

# ಹಿಂದೂಗಳನ್ನು ಒಗ್ಗೂಡಿಸಲು ಶ್ರಮಿಸಿದ ಛತ್ರಪತಿ ಶಿವಾಜಿ ಮಹಾರಾಜರು

### ಛತ್ರಪತಿ ಶಿವಾಜಿ ಮಹಾರಾಜರ ಜಯಂತ್ಯುತ್ಸವದಲ್ಲಿ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಅಭಿಮತ





ಮೈಸೂರಿನ ಕಲಾಮಂದಿರದಲ್ಲಿ ಆಯೋಜಿಸಿದ್ದ ಛತ್ರಪತಿ ಶಿವಾಜಿ ಮಹಾರಾಜ ಜಯಂತಿ ಕಾರ್ಯಕ್ರಮದಲ್ಲಿ ಶಾಸಕ ಕೆ.ಹರೀಶ್‌ಗೌಡ ಶಿವಾಜಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಚಿತ್ರದಲ್ಲಿ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಶ್ರೀ ಪ್ರಭಾನಂದ ಪವಾರ್ ಸ್ವಾಮೀಜಿ, ಕೆ.ನಾಗೇಂದ್ರ ರಾವ್, ವೆಂಕೋಬರಾವ್ ಇತರರಿದ್ದಾರೆ. (ಬಲಚಿತ್ರ) ಶಿವಾಜಿ ಮಹಾರಾಜರ ಭಾವಚಿತ್ರದ ಮೆರವಣಿಗೆಯಲ್ಲಿ ಪಾಲ್ಗೊಂಡಿರುವ ಜನ.

ಮೈಸೂರು, ಫೆ.19(ಎಂಟಿವೈ)– ಹಿಂದುಗಳನ್ನು ಒಂದುಗೂಡಿಸಲು ಶ್ರಮಿಸಿದ ಛತ್ರಪತಿ ಶಿವಾಜಿ ಮಹಾರಾಜರ ಶೌರ್ಯ ಹಾಗೂ ಪರಾಕ್ರಮದೊಂದಿಗೆ ಅವರ ಆಡಳಿತದ ವೈಖರಿಯನ್ನು ಮುಂದಿನ ಪಿಳಿಗೆಗೆ ತಲುಪಿಸಲು ಕಾರ್ಯಕ್ರಮ ರೂಪಿಸಬೇಕು ಎಂದು ಶಾಸಕ ಕೆ.ಹರೀಶ್‌ಗೌಡ ಸಲಹೆ ನೀಡಿದ್ದಾರೆ.

ಮೈಸೂರಿನ ಕಲಾಮಂದಿರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಛತ್ರಪತಿ ಶಿವಾಜಿ ಮಹಾರಾಜರ ಜಯಂತೋತ್ಸವ ಸಮಿತಿ ವತಿಯಿಂದ ಬುಧವಾರ ಆಯೋಜಿಸಿದ್ದ 398ನೇ ಶಿವಾಜಿ ಮಹಾರಾಜರ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಛತ್ರಪತಿ ಶಿವಾಜಿ ಮಹಾರಾಜರು ಹಿಂದೂಗಳನ್ನು ಒಂದುಗೂಡಿಸುವಲ್ಲಿ ಪ್ರಮುಖವಾದ ಪಾತ್ರವಹಿಸಿದ್ದಾರೆ. ಶೌರ್ಯ ಹಾಗೂ ಪರಾಕ್ರಮಕ್ಕೆ ಹೆಸರಾಗಿದ್ದ ಅವರು, ಉತ್ತಮ ಆಡಳಿತಗಾರರೂ ಆಗಿದ್ದರು. ಸಂಘಟನೆ ಮಾಡುವುದರಲ್ಲೂ ಚತುರತೆ ಹೊಂದಿದ್ದರು. ಶಕ್ತಿಶಾಲಿಯೂ ಧೈರ್ಯವಂತರೂ ಆಗಿದ್ದರು. ಆಡಳಿತದಲ್ಲಿ ಪ್ರಜೆಗಳ ಕ್ಷೇಮ ಹಾಗೂ ರಕ್ಷಣೆಗೆ ಆದ್ಯತೆ ನೀಡುತ್ತಿದ್ದರು. ಬ್ರಿಟಿಷರು ಹಾಗೂ ಮೊಘಲರ ವಿರುದ್ಧ ಪ್ರಬಲವಾಗಿ ಹೋರಾಟ ಮಾಡುವ ಮೂಲಕ ದೇಶದಲ್ಲಿ ಆಡಳಿತ ನಡೆಸುತ್ತಿದ್ದ ಹಲವು ಮಹಾರಾಜರಿಗೆ ಪ್ರೇರಣೆಯಾಗಿದ್ದರು ಎಂದು ತಿಳಿಸಿದರು.

ಈ ಹಿಂದೆ ಮಕ್ಕಳು ಪಠ್ಯಕ್ರಮಗಳಲ್ಲಿ ಶಿವಾಜಿ ಮಹಾರಾಜರ ಬಗ್ಗೆ ಶಾಲಾ ಮಕ್ಕಳಿಗೆ ಮಾಹಿತಿ ನೀಡಲಾಗುತ್ತಿತ್ತು. ಆದರೆ ಇತ್ತೀಚಿನ ಪಠ್ಯಪುಸ್ತಕಗಳಲ್ಲಿ ಅವರ ಬಗ್ಗೆ ಕಾಣುತ್ತಿಲ್ಲ. ಹೀಗಾಗಿ ಮುಂದಿನ ಪೀಳಿಗೆಗೆ ಶಿವಾಜಿ ಅವರ ಶೌರ್ಯದ ಬಗ್ಗೆ ತಿಳಿಸಬೇಕು. ಶಿವಾಜಿ ಅವರು ನಡೆದು ಬಂದಂತಹ ದಾರಿಯನ್ನು ತಿಳಿಸಿ ಆ ಪ್ರೇರಣೆ ಮೂಲಕ ನಾವು ನಮ್ಮ ಸಮಾಜವನ್ನು ಸ್ವಚ್ಛವಾಗಿ ಇಡಬೇಕು. ಅವರು ಹಾಕಿದಂತಹ ಮಾರ್ಗದರ್ಶನದಲ್ಲಿ ಇಂದಿನ ಯುವಪೀಳಿಗೆಗೆ ಸಾಗಬೇಕು ಎಂದರು.

ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಮಾತನಾಡಿ, ಹಿಂದೂ ಸಾಮ್ರಾಜ್ಯವನ್ನು ಕಟ್ಟಿದ ಏಕೈಕ ಮಹಾರಾಜ ಎಂಬ ಕೀರ್ತಿಗೆ ಛತ್ರಪತ್ರಿ ಶಿವಾಜಿ ಮಹಾರಾಜ ಪಾತ್ರರಾಗಿದ್ದಾರೆ. ಬಾಲ್ಯದಿಂದಲೇ ಹೋರಾಟದ ಮನೋಭಾವನೆ ಪ್ರದರ್ಶಿಸಿ ಸೈನ್ಯವೊಂದನ್ನು ಕಟ್ಟಿದ್ದರು. ಇಂತಹ ಹೋರಾಟದ ಮನೋಭಾವನೆ ನಮ್ಮ ಯುವಕರಲ್ಲೂ ಮೂಡಬೇಕು. ಇತಿಹಾಸವನ್ನು ಓದಿ ತಿಳಿದುಕೊಳ್ಳಬೇಕು. ಆಗ ಮಾತ್ರ ಇತಿಹಾಸವನ್ನು ಸೃಷ್ಟಿ ಮಾಡಬಹುದು. ಹೀಗಾಗಿ ಪ್ರತಿಯೊಬ್ಬ ಯುವಕರೂ ಕೂಡ ಛತ್ರಪತಿ ಶಿವಾಜಿ ಬಗ್ಗೆ ತಿಳಿದುಕೊಳ್ಳಬೇಕು. ಆಗ ಮಾತ್ರ ಮತ್ತೊಬ್ಬ ಶಿವಾಜಿ ಹುಟ್ಟಿ ಬರಲು ಸಾಧ್ಯ ಎಂದು ಹೇಳಿದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಅಕ್ಕಮಹಾದೇವಿ ಸಂಶೋಧನಾ ಮತ್ತು ವಿಸ್ತರಣಾ ಪೀಠದ ನಿರ್ದೇಶಕರಾದ ಪ್ರೊ. ಕವಿತಾ ರೈ ವಿಶೇಷ ಉಪನ್ಯಾಸ ನೀಡಿ, ಮಹಾರಾಷ್ಟ್ರ, ಗೋವಾ ಮತ್ತು ಕರ್ನಾಟಕದಲ್ಲಿ ಶಿವಾಜಿ ಜಯಂತಿಯನ್ನು ಉತ್ಸಾಹದಿಂದ ಆಚರಿಸಲಾಗುತ್ತದೆ. ಈ ಸಂದರ್ಭದಲ್ಲಿ ಮರಾಠಾ ಸಮುದಾಯವು ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುವಲ್ಲಿ ಉತ್ತಮ ಆಸಕ್ತಿಯನ್ನು ತೆಗೆದುಕೊಳ್ಳುತ್ತದೆ. ಮರಾಠಾ ಚಕ್ರವರ್ತಿಯ ಅಸಾಧಾರಣ ಆಡಳಿತ ಕೌಶಲ್ಯ, ಸಮರ ಶೌರ್ಯ ಮತ್ತು ಮಿಲಿಟರಿ ತಂತ್ರಗಳನ್ನು ಗೌರವಿಸುವ ಗುರಿಯನ್ನು ಹೊಂದಬೇಕು ಎಂದರು.

ಕಾರ್ಯಕ್ರಮದ ಸಾನಿಧ್ಯವನ್ನು ಶ್ರೀ ಪ್ರಭಾನಂದ ಪವಾರ್ ಸ್ವಾಮೀಜಿ ವಹಿಸಿದ್ದರು. ಈ ಸಂದರ್ಭದಲ್ಲಿ ಮೈಸೂರು ಸಿಟಿ ಶ್ರೀ ಛತ್ರಪತಿ ಕೋ–ಆಪರೇಟಿವ್ ಸೊಸೈಟಿ ಅಧ್ಯಕ್ಷ ಕೆ.ನಾಗೇಂದ್ರರಾವ್, ನಿರ್ದೇಶಕರಾದ ಎಸ್.ವೆಂಕೋಬಾರಾವ್, ಕೃಷ್ಣಾಜಿ ಗಾಯಕ್‌ವಾಡ್, ಎಂ.ಎಸ್.ತುಕಾರಂ, ಸುನೀಲ್ ಎಂ.ಸಂಕ್ವಾಡ್, ಕೆಕೆಎಂಪಿಯ ನಿರ್ದೇಶಕ ಜ್ಞಾನಪ್ರಕಾಶ್ ಪವಾರ್, ಕನ್ನಡ–ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಎಂ.ಡಿ.ಸುದರ್ಶನ್ ಉಪಸ್ಥಿತರಿದ್ದರು.

**ಶಿವಾಜಿ ಭಾವಚಿತ್ರ ಮೆರವಣಿಗೆ:** ಇದಕ್ಕೂ ಮುನ್ನ ಅರಮನೆ ಮುಂಭಾಗದ ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಮುಂಭಾಗದಲ್ಲಿ ಆಯೋಜಿಸಿದ್ದ ಶಿವಾಜಿ ಮಹಾರಾಜರ ಭಾವಚಿತ್ರದ ಮೆರವಣಿಗೆಗೆ ಶಾಸಕ ಕೆ.ಹರೀಶ್‌ಗೌಡ ಚಾಲನೆ ನೀಡಿದರು. ವಿವಿಧ ಜಾನಪದ ಕಲಾತಂಡಗಳೊಂದಿಗೆ ಕೆ.ಆರ್.ವೃತ್ತ, ಡಿ.ದೇವರಾಜ ಅರಸು ರಸ್ತೆ, ಜೆಎಲ್‌ಬಿ ರಸ್ತೆ, ವಿನೋಬ ರಸ್ತೆ ಮೂಲಕ ಕಲಾಮಂದಿರ ತಲುಪಿತು. ಶಿವಾಜಿ ವೇಷದಾರಿಯೊಬ್ಬ ಕುದುರೆ ಸವಾರಿ ಮಾಡುವ ಮೂಲಕ ಗಮನ ಸೆಳೆದರು.

# ಉದಯಗಿರಿಯಲ್ಲಿ ಗಲಾಟೆ ಮಾಡಿದವರನ್ನು ಬಂಧಿಸದಂತೆ ಡಾ.ಪರಮೇಶ್ವರ್ ತಾಕೀತು

### ಮಾಜಿ ಸಂಸದ ಪ್ರತಾಪ್‌ಸಿಂಹ ಆರೋಪ



ಮೈಸೂರು, ಫೆ.19(ಬಿಎಲ್‌ಯು)– ಮೈಸೂರಿನ ಉದಯ ಗಿರಿ ಪೊಲೀಸ್ ಠಾಣೆ ಮೇಲೆ ಕಲ್ಲು ತೂರಾಟ ಮಾಡಿದ ಪುಂಡರನ್ನು ಬಂಧಿಸದಂತೆ ಗೃಹ ಸಚಿವ ಡಾ.ಪರಮೇಶ್ವರ್ ಪೊಲೀಸರಿಗೆ ತಾಕೀತು ಮಾಡಿದ್ದಾರೆ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಆರೋಪಿಸಿದ್ದಾರೆ.

ಮೈಸೂರಿನಲ್ಲಿ ಇಂದು ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಪೊಲೀಸ್ ಠಾಣೆ ಮುಂದೆ ಗಲಾಟೆ ಮಾಡಿದವರನ್ನು ಬಂಧಿಸದಂತೆ ಹೇಳಲು ಡಾ.ಪರಮೇಶ್ವರ್ ಮೈಸೂರಿಗೆ ಬಂದಿದ್ದರು ಅಷ್ಟೇ ಎಂದು ಪ್ರತಾಪ್ ಸಿಂಹ ದೂರಿದ್ದಾರೆ.

ಗಲಾಟೆ ಮಾಡಿದ 16 ಪುಂಡರನ್ನು ಬಿಟ್ಟು ಯಾರನ್ನು ಬಂಧಿಸಿಲ್ಲ. ಗಲಾಟೆಗೆ ಪ್ರಚೋದನೆ ನೀಡಿದ ವ್ಯಕ್ತಿಯನ್ನು ಕೂಡ ಈ ತನಕ ಬಂಧಿಸಿಲ್ಲ. ಒಂದು ಸಮುದಾಯ ಓಲೈಕೆ ಮಾಡುತ್ತಿರುವ ಈ ಸರ್ಕಾರಕ್ಕೆ ಅಧಿಕಾರ ನಡೆಸಲು ಯೋಗ್ಯತೆ ಇಲ್ಲ. ಮುಸ್ಲಿಂ ಓಲೈಕೆ ಈ ಸರ್ಕಾರದ ಒನ್ ಲೈನ್ ಅಜೆಂಡಾ ಆಗಿದೆ ಎಂದು ಆಪಾದಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಮುಸ್ಲಿಂ ಮತ ಬೇಕೇ ಹೊರತು ರಾಜ್ಯದ ಕಾನೂನು ಸುವ್ಯವಸ್ಥೆ ಬೇಕಾಗಿಲ್ಲ. ಇದರ ಆಸಕ್ತಿಯೂ ಇವರಿಗಿಲ್ಲ ಎಂದು ಹೇಳಿದರು.

ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರ ಕಾನೂನು ತರಲು ಇಲ್ಲಿ ಯಾರಿಗೂ ಧಂ ಇಲ್ಲ. ಹಿಂದೂಗಳ ಮೇಲೆ ಕಲ್ಲು ತೂರಲು ರಾಜ್ಯ ಕಾಂಗ್ರೆಸ್ ಸರ್ಕಾರ ಫ್ರೀ ಪರ್ಮಿಟ್ ನೀಡಿದೆ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಆಪಾದಿಸಿದರು.

## ಮಾರಮ್ಮನಿಗೆ ವಿಶೇಷ ಪೂಜೆ, ಕೊಂಡೋತ್ಸವ



ಚಾಮುಂಡಿಬೆಟ್ಟದ ಗ್ರಾಮದೇವತೆ ಮಾರಮ್ಮನಿಗೆ ವಿಶೇಷ ಪೂಜೆ ಹಾಗೂ ಕೊಂಡೋತ್ಸವ ನಡೆಯಿತು. ಚಾಮುಂಡೇಶ್ವರಿ ದೇವಸ್ಥಾನದ ಪ್ರಧಾನ ಅರ್ಚಕರಾದ ಡಾ.ಶಶಿಶೇಖರ್ ದೀಕ್ಷಿತ್, ದೇವಸ್ಥಾನದ ಪ್ರಾಧಿಕಾರದ ಕಾರ್ಯದರ್ಶಿ ಎಂ.ಜೆ. ರೂಪಾ, ನಾಗರಾಜು ಮಣೆಗಾರ್, ನಾಯಕರ ಸಂಘದ ಅಧ್ಯಕ್ಷ ಶಂಭುಲಿಂಗು, ದೊಡ್ಡ ಯಜಮಾನ ಶಿವರಾಮ್ ನಾಯಕ, ಕಾರ್ಯದರ್ಶಿ ನಾಗೇಂದ್ರ, ಮಹಾದೇವ ಸ್ವಾಮಿ, ಶ್ರೀಧರ್, ಸುಬ್ರಮಣ್ಯ, ಪುಟ್ಟರಾಜು ಕೋರ್ಟ್, ನಾಗೇಂದ್ರ, ರಂಗಸ್ವಾಮಿ, ಮಹದೇವ, ನಂಜಪ್ಪ, ಚನ್ನಪ್ಪ, ಮಂಜುನಾಯಕ್ ಹಾಗೂ ಗ್ರಾಮಸ್ಥರು ಇದ್ದರು.



## ಬಾಕ್ಸಿಂಗ್ ಸ್ಪರ್ಧೆ: ಚಿನ್ನದ ಪದಕ

**ಮೈಸೂರಿನ ಮಹರ್ಷಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿ ಹೆಚ್.ಎನ್.ಮಧುಸೂದನ್ ಕರ್ನಾಟಕ ಅರ್ಬನ್ ಗೇಮ್ಸ್ ಬಾಕ್ಸಿಂಗ್ ಚಾಂಪಿಯನ್‌ಶಿಪ್–2025ನಲ್ಲಿ 19 ವರ್ಷ ವಿಭಾಗದ 65 ಕೆಜಿ ವಿಭಾಗದ ಬಾಕ್ಸಿಂಗ್‌ನಲ್ಲಿ ಪ್ರಥಮ ಸ್ಥಾನ ಗಳಿಸಿ ಚಿನ್ನದ ಪದಕ ಪಡೆದಿದ್ದಾರೆ. ಮಹರ್ಷಿ ವಿದ್ಯಾಸಂಸ್ಥೆ ಸಂಯೋಜಕ ತೇಜಸ್ ಬಿ.ಶಂಕರ್, ಪ್ರಾಚಾರ್ಯ ಮಹದೇವ ಸ್ವಾಮಿ ಮತ್ತಿತರರು ಅಭಿನಂದಿಸಿದ್ದಾರೆ.**

## ಮಕ್ಕಳ ಬೇಸಿಗೆ ಶಿಬಿರ

**ಮೈಸೂರು:** ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ ವತಿಯಿಂದ ಮಕ್ಕಳ ಬೇಸಿಗೆ ಶಿಬಿರ ಆಯೋಜಿಸಲಾಗಿದೆ. ಶಿಬಿರದಲ್ಲಿ ಕಥೆ, ಕವನ, ಹಾಸ್ಯ, ಲೇಖನ, ಕಿರುನಾಟಕ, ಏಕಪಾತ್ರಾಭಿನಯ, ಮಿಮಿಕ್ರಿ, ರಸಪ್ರಶ್ನೆ, ಚಿತ್ರಕಲೆ, ಗಾಯನ ತರಬೇತಿ ನೀಡಲಾಗುವುದು. 1ರಿಂದ 10ನೇ ತರಗತಿ ವಿದ್ಯಾರ್ಥಿಗಳು ಭಾಗವಹಿಸಬಹುದು. ವಿವರಗಳಿಗೆ ಮೊ. 9513807425, 7204411400 ಸಂಪರ್ಕಿಸಿ.

## ಫೆ.26, ಮಹಾಶಿವರಾತ್ರಿ: ಮಾಂಸ ಮಾರಾಟ ನಿಷೇಧ

ಮೈಸೂರು,ಫೆ.19– ಫೆ.26ರಂದು ಮಹಾಶಿವರಾತ್ರಿ ಪ್ರಯುಕ್ತ ಮೈಸೂರು ಮಹಾನಗರಪಾಲಿಕೆಗೆ ಸೇರಿದ ಕುರಿ, ಮೇಕೆಗಳ ಕಸಾಯಿಖಾನೆ ಮತ್ತು ಇತರೆ ಎಲ್ಲಾ ಮಾಂಸದ ಅಂಗಡಿಗಳನ್ನು ಮುಚ್ಚಬೇಕು. ಈ ದಿನ (ಕುರಿ, ಮೇಕೆ, ಕೋಳಿ ಮಾಂಸ, ಹಂದಿ ಮಾಂಸ ಮತ್ತು ಮೀನು) ವ್ಯಾಪಾರವನ್ನು ನಗರದಲ್ಲಿ ಕಡ್ಡಾಯವಾಗಿ ನಿಷೇಧಿಸಲಾಗಿರುತ್ತದೆ ಎಂದು ಪಾಲಿಕೆ ಆರೋಗ್ಯಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬಿಡದಿ ಬಳಿ ತಮ್ಮ ಜಮೀನಿನ ಸರ್ವೆ ರಾಜಕೀಯ ಸೇಡಿನ ಭಾಗ

- ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ವಾಗ್ದಾಳಿ
- ರಾಜ್ಯ ಕಾಂಗ್ರೆಸ್ ಸರ್ಕಾರ ನನ್ನ ಟಾರ್ಗೆಟ್ ಮಾಡ್ತಿದೆ

ಬೆಂಗಳೂರು, ಫೆ.19(ಕೆಎಂಶಿ)–ಬಿಡದಿ ಬಳಿ ಕೇತಗಾನಹಳ್ಳಿಯಲ್ಲಿನ ತಮ್ಮ ಜಮೀನು ಸರ್ವೆ ರಾಜಕೀಯ ಸೇಡಿನ ಭಾಗ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಟೀಕಿಸಿದ್ದಾರೆ.

ಐಪಿಎಸ್ ಅಧಿಕಾರಿಗಳ ನೇತೃತ್ವದಲ್ಲಿ ಎಸ್‌ಐಟಿ ರಚನೆ ಮಾಡುತ್ತಿದ್ದವರು ಈಗ ಐಎಎಸ್ ಅಧಿಕಾರಿಗಳ ಎಸ್‌ಐಟಿ ರಚನೆ ಮಾಡುತ್ತಿದ್ದಾರೆ ಎಂದು ವ್ಯಂಗ್ಯವಾಡಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ಭೂಮಿ ಖರೀದಿಸಿ 40 ವರ್ಷಗಳಾಗಿವೆ. ಈಗ ಇದನ್ನು ಕೆದಕುವ ಮೂಲಕ ನನ್ನನ್ನು ಟಾರ್ಗೆಟ್ ಮಾಡಲಾಗುತ್ತಿದೆ ಎಂದು ಹೇಳಿದರು.

ಭೂಮಿಯನ್ನು 1984ರಲ್ಲಿ ಖರೀದಿ ಮಾಡಿದ್ದು, ಸಿನಿಮಾ ಹಂಚಿಕೆದಾರನಾಗಿ ದುಡಿದ ಹಣದಲ್ಲಿ ಖರೀದಿಸಿದ್ದೇನೆ. ಅಂದಿ ನಿಂದಲೂ ಜಮೀನಿನ ಮೇಲೆ ಕೆಲವರ ಕಣ್ಣು ಬಿದ್ದಿದೆ. ನನ್ನನ್ನು ರಾಜಕೀಯವಾಗಿ ಎದುರಿಸಲಾಗದೆ ಅಸಹಾಯಕತೆಯಿಂದ ರಾಜ್ಯ ಕಾಂಗ್ರೆಸ್ ಸರ್ಕಾರ ಸರ್ವೆ ಮೂಲಕ ಹೆದರಿಸುವ ಕೆಲಸ ಮಾಡುತ್ತಿದೆ. ನನ್ನ ವಿರುದ್ಧ 2012ರಿಂದಲೂ ತನಿಖೆ ಮಾಡುತ್ತಿದ್ದು, ಇದುವರೆಗೆ ಏನೂ ಸಿಕ್ಕಿಲ್ಲ. ಸಿದ್ದರಾಮಯ್ಯ ರೀತಿ ನಾನು ಸರ್ಕಾರಿ ಜಮೀನು ಲೂಟಿ ಮಾಡಿಲ್ಲ. ಇದುವರೆಗಿನ ತನಿಖೆಗಳು ಸಾಕಾಗುವುದಿಲ್ಲವೆಂದು ಐಎಎಸ್ ಅಧಿಕಾರಿಗಳ ನೇತೃತ್ವದಲ್ಲಿ ಎಸ್‌ಐಟಿ ತನಿಖೆ ಮಾಡಿಸುತ್ತಿದ್ದಾರೆ, ಯಾವುದೇ ತನಿಖೆ ಮಾಡಲಿ, ದೋಷ ಮುಕ್ತವಾಗಿದ್ದೇನೆ. ಮಾಜಿ ಶಾಸಕ ಸಿ.ಎಂ. ಲಿಂಗಪ್ಪ ಮತ್ತು ಜಿಲ್ಲಾ ಪಂಚಾಯತ್ ಸದಸ್ಯ ರಾಮಚಂದ್ರ 1986ರಲ್ಲಿ ಇದೇ ಜಮೀನು ವಿಷಯದಲ್ಲಿ ಅಂದಿನ ಪ್ರಧಾನ ಮಂತ್ರಿ ಹಾಗೂ ಗೃಹಮಂತ್ರಿಗೆ ಪತ್ರ ಬರೆದಿದ್ದರು.



ತಮ್ಮ ದೂರಿನಲ್ಲಿ ಕುಮಾರಸ್ವಾಮಿ ಜಮೀನು ಖರೀದಿಸಿದ್ದಾರೆ ಎಂದಿದ್ದರೇ ಹೊರತು ಕಬಳಿಸಿದ್ದಾರೆ ಎಂಬ ಆರೋಪ ಮಾಡಿರಲಿಲ್ಲ. ನಾನು ಖರೀದಿ ಮಾಡಿದ ಭೂಮಿಯಲ್ಲಿ ಕೃಷಿ ಮಾಡುತ್ತಿದ್ದೇನೆ. ಯಾವುದೇ ಅಕ್ರಮ ಚಟುವಟಿಕೆ ನಡೆಸಿಲ್ಲ. ಎಲ್ಲಾ ದಾಖಲೆಗಳನ್ನೂ ಇಟ್ಟುಕೊಂಡಿದ್ದೇನೆ.

ಸಮಾಜ ಪರಿವರ್ತನಾ ಸಮುದಾಯದ ಎಸ್.ಆರ್.ಹಿರೇಮಠ ನನ್ನ ಜಮೀನು ವಿಷಯದ ಕುರಿತು ಆರೋಪ ಮಾಡಿದ್ದಾರೆ. ಆದರೆ, ರಾಜ್ಯ ಹೈಕೋರ್ಟ್‌ನಿಂದ ಯಾವುದೇ ನೋಟಿಸ್ ಬಂದಿಲ್ಲ.

ರಾಜ್ಯ ಸರ್ಕಾರ ಕೆಲವರನ್ನು ಬಳಸಿಕೊಂಡು ನನ್ನ ಮೇಲೆ ಆರೋಪ ಮಾಡಿಸುತ್ತಿದೆ. ಇವರೆಲ್ಲ ಈಗ ಎಲ್ಲಿಂದ ಉದ್ಭವ ಆದರು ಎಂಬುದು ಗೊತ್ತಿಲ್ಲ. 40 ವರ್ಷಗಳ ಹಿಂದೆ ಖರೀದಿಸಿದ ಭೂಮಿಯನ್ನು ಅನೇಕ ಬಾರಿ ಸರ್ವೆ ಮಾಡಿಸಿದ್ದಾರೆ.

ಪ್ರತೀ ಬಾರಿ ಸರ್ವೆ ನಡೆಯುವಾಗ ಕಾಂಗ್ರೆಸ್ ಪುಡಾರಿಗಳು ಕೆಲವರನ್ನು ಕರೆತಂದು ಮಾಧ್ಯಮಗಳಿಗೆ ಹೇಳಿಕೆ ಕೊಡಿಸಿದ್ದಾರೆ. 40 ವರ್ಷಗಳಿಂದ ನನ್ನ ಬಳಿ ಯಾರೂ ಬಂದಿರಲಿಲ್ಲ. ದೂರುದಾರರು ಈಗ ಎಲ್ಲಿಂದ ಬಂದರು ಎಂದು ಪ್ರಶ್ನಿಸಿದರು. ಎಸ್‌ಐಟಿ ಯಾವುದೇ ನೋಟೀಸ್ ನೀಡದೇ ಸರ್ವೆ ಮಾಡಲು ಹೊರಟಿತ್ತು. ಜಿಲ್ಲಾಧಿಕಾರಿ ಹಾಗೂ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಅವರಿಗೆ ಕರೆ ಮಾಡಿ ಮಾತನಾಡಿ, ನೋಟಿಸ್ ಕೊಟ್ಟು ಸರ್ವೆ ಮಾಡಿ ಎಂದಿದ್ದೆ. ಭೂಮಿ ಖರೀದಿಯಲ್ಲಿ ಯಾವುದೇ ಅಕ್ರಮ ನಡೆದಿಲ್ಲ, ರಾಜ್ಯದಲ್ಲಿ ಯಾರು ಏನೇನು ಮಾಡಿದ್ದಾರೆ, ಎಷ್ಟೆಷ್ಟು ಭೂಮಿ ಲೂಟಿ ಹೊಡೆದಿದ್ದಾರೆ ಎಂಬುದಕ್ಕೆ ದೊಡ್ಡ ಇತಿಹಾಸವೇ ಇದೆ, ಸಂವಿಧಾನಿಕ ಸಂಸ್ಥೆ, ತನಿಖಾ ವ್ಯವಸ್ಥೆಯನ್ನು ಮನಬಂದಂತೆ ದುರ್ಬಳಕೆ ಮಾಡಿಕೊಂಡಿದ್ದಾರೆ ಎನ್ನುವುದೂ ಗೊತ್ತಿದೆ, ಅವರ ದಾಖಲೆಗಳು ನನ್ನ ಬಳಿ ಇವೆ ಎಂದಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರ ಚಿಯರ್ ಲೀಡರ್ ದೇವೇಗೌಡ ಎಂಬುದಾಗಿ ಹೇಳಿಕೆ ನೀಡುವ ಮುನ್ನ ಸಿದ್ದರಾಮಯ್ಯ ತಮ್ಮ ಯೋಗ್ಯತೆ ಅರಿತುಕೊಳ್ಳುವುದು ಉತ್ತಮ.

ನೀರಾವರಿಗೆ ದೇವೇಗೌಡರು ಏನು ಮಾಡಿದ್ದಾರೆ ಎಂಬುದು ಇಡೀ ದೇಶಕ್ಕೇ ಗೊತ್ತಿದೆ, ಸಿದ್ದರಾಮಯ್ಯ ಏನು ಮಾಡಿದ್ದಾರೆ ಎನ್ನುವುದು ಜನರಿಗೂ ಗೊತ್ತಿದೆ.

ನೀರಾವರಿ, ರಾಜ್ಯದ ಜನತೆ ರಕ್ಷಣೆ ಕುರಿತು ಇವರಿಂದ ಹೇಳಿಸಿಕೊಳ್ಳಬೇಕಿಲ್ಲ, ರಾಜ್ಯದ ನೆಲ, ಜಲ, ಭಾಷೆ, ನೀರಾವರಿ ವಿಚಾರದಲ್ಲಿ ಸಿದ್ದರಾಮಯ್ಯ ಕೊಡುಗೆ ಏನು. ಒಂದು ದಿನವಾದರೂ ನೀರಿನ ಬಗ್ಗೆ ವಿಧಾನಸಭೆಯಲ್ಲಿ ಸಿದ್ದರಾಮಯ್ಯ ಮಾತಾಡಿದ್ದಾರಾ, ಎಲ್ಲಿಯಾದರೂ ಹೋರಾಟ ಮಾಡಿದ್ದಾರಾ, 102 ಡಿಗ್ರಿ ಜ್ವರ ಇದ್ದರೂ, ಕೈಯ್ಯಲ್ಲಿ ಐವಿ ಇದ್ದರೂ ರಾಜ್ಯಸಭೆಯಲ್ಲಿ ಗೋದಾವರಿ–ಕೃಷ್ಣ–ಕಾವೇರಿ ನದಿಗಳ ಜೋಡಣೆ ಯೋಜನೆ ಕುರಿತು ದೇವೇಗೌಡರು ಮಾತನಾಡಿದರು, ನೀರಾವರಿ ಬಗ್ಗೆ ಇವರಿಂದ ಹೇಳಿಸಿಕೊಳ್ಳಬೇಕಾ ಎಂದು ಪ್ರಶ್ನಿಸಿದರು.

ತಮ್ಮ ಕೊಡುಗೆ ಬಗ್ಗೆ ಕೇಳಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ತಿರುಗೇಟು ನೀಡಿದ ಕುಮಾರಸ್ವಾಮಿ, ದುಡ್ಡು ಹೊಡೆದಿರುವುದೇ ಅವರು ರಾಜ್ಯಕ್ಕೆ ನೀಡಿರುವ ಕೊಡುಗೆ, ಇನ್ನೊಂದು ವಾರ ಸರ್ಕಾರದ ನಡೆ ನೋಡಿಕೊಂಡು ಆಮೇಲೆ ಮಾತನಾಡುತ್ತೇನೆ ಎಂದರು.

## ಸರ್ಕಾರಿ ಭೂಮಿ ಒತ್ತುವರಿ ಆರೋಪ: ಕುಮಾರಸ್ವಾಮಿ ರಾಜೀನಾಮೆಗೆ ಆಗ್ರಹ

ಮೈಸೂರು,ಫೆ.19(ಎಂಟಿವೈ)– ಬಿಡದಿ ಬಳಿಯ ಕೇತಗಾನಹಳ್ಳಿಯಲ್ಲಿ ಸರ್ಕಾರಿ ಭೂಮಿ ಒತ್ತುವರಿ ಮಾಡಿದ ಆರೋಪ ಎದುರಿಸುತ್ತಿರುವ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿ ನಿಷ್ಪಕ್ಷಪಾತವಾಗಿ ಸರ್ವೆ ಕಾರ್ಯ ನಡೆಸಲು ಸಹಕರಿಸ ಬೇಕು ಎಂದು ನಗರ ಕಾಂಗ್ರೆಸ್ ವಕ್ತಾರ ಎಸ್.ರಾಜೇಶ್ ಒತ್ತಾಯಿಸಿದ್ದಾರೆ.


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇತಗಾನಹಳ್ಳಿಯಲ್ಲಿ 14 ಎಕರೆ ಸರ್ಕಾರಿ ಭೂಮಿಯನ್ನು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಕುಟುಂಬದವರು ಒತ್ತುವರಿ ಮಾಡಿದ್ದಾರೆ. ಕುಮಾರಸ್ವಾಮಿ ಅವರ ಜಮೀನನ್ನು ಕಬಳಿಸಲು ಕಾಂಗ್ರೆಸ್ ಸರ್ಕಾರ ಪ್ರಯತ್ನಿಸಿಲ್ಲ. ಆದರೆ, ಸರ್ಕಾರಿ ಜಮೀನು ರಕ್ಷಣೆ ಮಾಡಲು ಮುಂದಾಗಿರುವುದ ರಿಂದ ಹೆಚ್.ಡಿ.ಕುಮಾರಸ್ವಾಮಿ ಸಹಿಸದೆ ರಾಜ್ಯ ಸರ್ಕಾರದ ವಿರುದ್ಧ ಸುಳ್ಳು ಆರೋಪ ಮಾಡುತ್ತಿದ್ದಾರೆ. ಸರ್ಕಾರಿ ಭೂಮಿ ಒತ್ತುವರಿ ಮಾಡಿಕೊಂಡಿರುವುದಕ್ಕೆ ಎಲ್ಲಾ ದಾಖಲೆಗಳಿವೆ. ಈ ಜಮೀನಿನ ಸರ್ವೆ ಕಾರ್ಯವನ್ನು ಹೆಚ್‌ಡಿಕೆ ಕುಟುಂಬದ ಸದಸ್ಯರಾದ ಅನಸೂಯ ಹಾಗೂ ಡಿ.ಸಿ.ತಮ್ಮಣ್ಣ ಮಾಡಿಸುತ್ತಿದ್ದಾರೆ. ಹೆಚ್.ಡಿ.ಕುಮಾರಸ್ವಾಮಿ ಅವರು ಸರ್ವೆ ಮಾಡುವವರ ಮೇಲೆ ಪ್ರಭಾವ ಬೀರುತ್ತಿದ್ದಾರೆ ಎಂದು ಆರೋಪಿಸಿದರು. ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಮುಖಂಡರಾದ ಶ್ರೀನಿವಾಸ್, ಕೇಶವ, ಓಂಕಾರ್ ರವಿ, ಕುಕ್ಕರಹಳ್ಳಿ ನಂಜುಂಡಸ್ವಾಮಿ, ಎಸ್.ಎ.ರಹೀಮ್, ಸೈಯ್ಯದ್ ಫಾರೂಕ್ ಉಪಸ್ಥಿತರಿದ್ದರು.

## ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು, ಫೆ.19– ಫೆ.20ರಂದು ಬೆಳಗ್ಗೆ 10ರಿಂದ ಸಂಜೆ 6 ಗಂಟೆಯವರೆಗೆ ನಿರ್ವಹಣಾ ಕಾಮಗಾರಿಯನ್ನು ಹಮ್ಮಿಕೊಳ್ಳಲಾಗಿರುವುದರಿಂದ ಚಿಕ್ಕೇಗೌಡನಹುಂಡಿ, ದೇವಲಾಪುರ, ರಾಯನಹುಂಡಿ, ಆಯರಹಳ್ಳಿ, ಮರಿಗೌಡನಹುಂಡಿ, ಕುಂಬ್ರಹಳ್ಳಿ, ಕುಂಬ್ರಹಳ್ಳಿ ಮಠ, ಸೋಮೇಶ್ವರಪುರ, ಬಸಹಳ್ಳಿಹುಂಡಿ, ಕಿರಾಳು, ಹದಿನಾರು, ಹದಿನಾರು ಮೊಳೆ, ಮೂಡಹಳ್ಳಿ, ಮಲ್ಲರಾಜಹುಂಡಿ, ಭರಣಿ ಕುಡಿಯುವ ನೀರಿನ ಸ್ಥಾವರ ಹಾಗೂ ಸುತ್ತಮುತ್ತ ವಿದ್ಯುತ್ ವ್ಯತ್ಯಯವಾಗಲಿದೆ.

# ಸದ್ಗುಣ–ಸಂಸ್ಕಾರಗಳು ಶಿಕ್ಷಣದ ಗುರಿಯಾಗಬೇಕು

## ಆದಿಚುಂಚನಗಿರಿ ಶ್ರೀಗಳ 12ನೇ ವಾರ್ಷಿಕ ಪಟ್ಟಾಭಿಷೇಕ ಕಾರ್ಯಕ್ರಮ



ಡಾ.ನಿರ್ಮಲಾನಂದನಾಥ ಸ್ವಾಮೀಜಿಯವರ 12ನೇ ವಾರ್ಷಿಕ ಪಟ್ಟಾಭಿಷೇಕದ ಅಂಗವಾಗಿ ಏರ್ಪಡಿಸಲಾಗಿದ್ದ ಕಾರ್ಯಕ್ರಮದಲ್ಲಿ ಶ್ರೀಗಳು ಮತ್ತು ಸಚಿವರು, ಮತದಾರನ ಹಕ್ಕು ಮತ್ತು ಜವಾಬ್ದಾರಿಗಳನ್ನು ಕುರಿತು ರಚಿಸಲಾದ ಕೃತಿಗಳನ್ನು ಬಿಡುಗಡೆ ಮಾಡಿದರು.

ಮಂಡ್ಯ, ಫೆ19– ಧರ್ಮ ವಿಜ್ಞಾನ ಅಧ್ಯಾತ್ಮದ ಅವಿನಾಭಾವತೆಯು ವಿಶ್ವದ ಅನೇಕ ಅಚ್ಚರಿಗಳಿಗೆ ನಾಂದಿಯಾಗಿದೆ. ಮನುಷ್ಯನನ್ನು ಎತ್ತರಕ್ಕೆ ಕೊಂಡೊಯ್ಯುವ ಸಾಧನಗಳಾದ ಸದ್ಗುಣ–ಸಂಸ್ಕಾರಗಳು ಶಿಕ್ಷಣದ ಗುರಿಯಾಗಬೇಕು ಎಂದು ತುಮಕೂರು ಸಿದ್ಧಗಂಗಾ ಮಠದ ಪೀಠಾಧ್ಯಕ್ಷರಾದ ಶ್ರೀ ಸಿದ್ಧಲಿಂಗ ಮಹಾ ಸ್ವಾಮೀಜಿಗಳು ಅಭಿಪ್ರಾಯಪಟ್ಟರು.

ಅವರಿಂದು ನಾಗಮಂಗಲ ತಾಲೂಕಿನ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠದಲ್ಲಿ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಅವರ 12ನೇ ವಾರ್ಷಿಕ ಪಟ್ಟಾಭಿಷೇಕದ ಅಂಗವಾಗಿ ಏರ್ಪಡಿಸಿದ್ದ ರಾಜ್ಯ ಮಟ್ಟದ ವಿಜ್ಞಾನ ಉತ್ಸವ ಮತ್ತು ಬೃಹತ್ ವಸ್ತು ಪ್ರದರ್ಶನ ಉದ್ಘಾಟನಾ ಸಮಾರಂಭದ ದಿವ್ಯ ಉಪಸ್ಥಿತಿ ವಹಿಸಿ ಮಾತನಾಡಿದರು.

ಸಮಾಜ ಸೇವೆಯಲ್ಲಿ ತೊಡಗಿರುವ ಮಠ ಮಾನ್ಯಗಳ ಒಂದೆಡೆಯಾದರೆ ಶಿಕ್ಷಣ ಕ್ಷೇತ್ರಕ್ಕೆ ಅಪಾರ ಕೊಡುಗೆಯನ್ನು ನೀಡಿ ಶಿಕ್ಷಣ ಕ್ರಾಂತಿಯನ್ನೇ ಮಾಡಿದ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠವು ದೇಶದ ಮಾದರಿ ಸಂಸ್ಥಾನವಾಗಿದೆ. ಮಹಾ ದಾರ್ಶನಿಕ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರ ಸಂಕಲ್ಪದ ಫಲವಾಗಿ ಇಂದು ಶ್ರೀಮಠ ವಿಶ್ವಾದ್ಯಂತ ಬೆಳೆದು ನಿಂತಿದೆ. ನಾಡಿನ ಸುಸಜ್ಜಿತ ವಿದ್ಯಾರ್ಥಿಗಳಿಗೆ ವಿಜ್ಞಾನದ ಆಕರ್ಷಣೆಯನ್ನು ಹೆಚ್ಚಿಸುವ ಆ ಮೂಲಕ ಜ್ಞಾನವಂತನ್ನಾಗಿಸಲು ಇಂತಹ ವಿಜ್ಞಾನ ಉತ್ಸವ ಹಾಗೂ ಈ ಮಹಾ ವಸ್ತು ಪ್ರದರ್ಶನದ ಏರ್ಪಾಡು ನಿಜಕ್ಕೂ ಅರ್ಥಪೂರ್ಣ ಹಾಗೂ ಶ್ಲಾಘನೀಯವಾಗಿದೆ.

ಇಲ್ಲಿ ಸೇರಿರುವ ಅಪಾರಸಂಖ್ಯೆಯ ವಿದ್ವಜ್ಜನರು, ಪ್ರಾಧ್ಯಾಪಕರು, ವಿಜ್ಞಾನಿಗಳು, ಸಾಧಕರು ಸಾಕ್ಷೀಕರಿಸಿದ್ದಾರೆ. ಗುರುಗಳ ಮಾರ್ಗದರ್ಶನದಲ್ಲಿ ಬೆಳೆಯುತ್ತಿರುವ ಯುವ ಸಮೂಹವೇ, ವಿದ್ಯಾರ್ಥಿಗಳೇ ಇಂತಹ ಸಂದರ್ಭವನ್ನು ಸದುಪಯೋಗಪಡಿಸಿಕೊಂಡು ಉತ್ತಮ ಸಾಧಕರಾಗಿ ಎಂದು ಆಶೀರ್ವದಿಸಿದರು.

ರಾಜ್ಯಮಟ್ಟದ ವಿಜ್ಞಾನ ವಸ್ತುಪ್ರದರ್ಶನವನ್ನು ಉದ್ಘಾಟಿಸಿದ ಭಾರತೀಯ ವಿಜ್ಞಾನ ಸಂಸ್ಥೆಯ ಪ್ರಧಾನ ವಿಜ್ಞಾನಿ ಡಾ.ಗೌತಮ್ ರಾಧಾಕೃಷ್ಣ ದೇಸಿರಾಜು ಮಾತನಾಡಿ, ಧರ್ಮ ಮತ್ತು ವಿಜ್ಞಾನ ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಭೂಮಿ ಸೂರ್ಯನನ್ನು ಸುತ್ತಿದರೆ ಚಂದ್ರ ಭೂಮಿಯನ್ನು ಸುತ್ತುತ್ತದೆ. ಇದು ನೈಸರ್ಗಿಕ ವಿಸ್ಮಯವಾದರೂ ಇಲ್ಲಿ ಧರ್ಮವಿದೆ. ವಿಶಿಷ್ಟ ಸಂಬಂಧವೂ ಇದೆ. ಪೂರ್ಣಚಂದ್ರನಿಂದ ಪೌರ್ಣಮಿಯಾಗುವುದು, ಅರ್ಧಚಂದ್ರದ ನಿಯಾಮಕವನ್ನು ಕುರಿತು ಲಲಿತ ಭಾರತೀಯ ಸಂಸ್ಕೃತಿಯಾದ ಸಹಸ್ರನಾಮದ ಮಹತ್ವ, ಸಪ್ತಮಿ ಮತ್ತು ಅಷ್ಟಮಿ ಚಂದ್ರ ಶಾಂತಿಯ ಸಾಗರ ಎಂದು ಬಣ್ಣಿಸಿ, ವಿಜ್ಞಾನವು ಹೇಗೆ ನೋಡುತ್ತದೆ ಎಂಬುದನ್ನು ಸಂಸ್ಕೃತ ಶ್ಲೋಕದ ಮೂಲಕ ತಿಳಿಸಿದರು.

ವಿಜ್ಞಾನ ಸಂಚಯ ಕೃತಿಯನ್ನು ಲೋಕಾರ್ಪಣೆಗೊಳಿಸಿದ ಕೃಷಿ ಸಚಿವರಾದ ಎನ್. ಚಲುವರಾಯಸ್ವಾಮಿ ಮಾತನಾಡಿ, ಆದಿಚುಂಚನಗಿರಿ, ಸುತ್ತೂರು ಹಾಗೂ ಸಿದ್ಧಗಂಗಾ ಮಠಗಳು ಶಿವನ ಮೂರು ಕಣ್ಣುಗಳಿದ್ದಂತೆ ಮಹಾ ಕ್ಷೇತ್ರ ಸಂಸ್ಥಾನಗಳು ಎಂದು ಬಣ್ಣಿಸುತ್ತಾ ತಮ್ಮ ಪ್ರಾಥಮಿಕ ಶಿಕ್ಷಣ ಸಿದ್ಧಗಂಗಾ ಮಠದಲ್ಲಿ ಶ್ರೀ ಶಿವಕುಮಾರ ಮಹಾಸ್ವಾಮಿಗಳ ಸಾನ್ನಿಧ್ಯದಲ್ಲಿ ನಡೆಯಿತು, ನಂತರದಲ್ಲಿ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮೀಜಿಗಳ ಮಾರ್ಗದರ್ಶನದಲ್ಲಿ ಬೆಳೆದ ದಿನಗಳನ್ನು ಸ್ಮರಿಸಿಕೊಂಡರು. ಶ್ರೀ ಮಠವು ಆಧ್ಯಾತ್ಮಕ್ಕೆ ಸೀಮಿತವಾಗದೆ ಶಿಕ್ಷಣ, ಆರೋಗ್ಯ, ಅರಣ್ಯ ವಿಜ್ಞಾನ ತಂತ್ರಜ್ಞಾನ ಹೀಗೆ ಅನೇಕ ಕ್ಷೇತ್ರಗಳನ್ನು ಪೋಷಿಸಿ ಮುನ್ನಡೆಸುತ್ತಾ ಸಾಗಿದೆ. ಭಾರತ ದೇಶ ಜ್ಞಾನ ಮತ್ತು ಮಾನವ ಸಂಪನ್ಮೂಲತೆಯ ಸಂಪದ್ಭರಿತ ದೇಶ ಎಂಬುದನ್ನು ಅನೇಕ ಸಂದರ್ಭಗಳಲ್ಲಿ ವಿಶ್ವ ಮಟ್ಟದಲ್ಲಿ ಸಾಬೀತುಗೊಳಿಸುತ್ತಿದೆ. ಇಂಥ ಮಹಾನಾಯ ಸಾಲಿಗೆ ಇಂದಿನ ಯುವ ಪೀಳಿಗೆ ಸಾಗಿ ದೇಶದ ಭವಿಷ್ಯವನ್ನು ಉಜ್ವಲಗೊಳಿಸಿ ಎಂದರು. ಶ್ರೀ ಮಠವು ಇಷ್ಟೆಲ್ಲ ಸಾಧನೆಯ ಜೊತೆಗೆ ಕೃಷಿ ಕಾಲೇಜು ಸ್ಥಾಪಿಸಿ ಕೃಷಿ ಕ್ರಾಂತಿಯನ್ನು ಮಾಡುವ ಸಂಕಲ್ಪ ತೊಟ್ಟಿರುವುದು ಗುರುಗಳ ದೂರದೃಷ್ಟಿಯ ಸಂಕೇತವಾಗಿದೆ ಎಂದರು.

ಮುಖ್ಯ ಅತಿಥಿಗಳಾಗಿ ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ಮಾತನಾಡಿದರು.

ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿದ್ದ ಪೀಠಾಧ್ಯಕ್ಷರಾದ ಡಾ.ನಿರ್ಮಲಾನಂದನಾಥ ಮಹಾ ಸ್ವಾಮೀಜಿ ಆಶೀರ್ವಚನ ನೀಡಿದರು.

ಕಾರ್ಯಕ್ರಮದಲ್ಲಿ ಶ್ರೀ ಮಠದ ಪ್ರಧಾನ ಕಾರ್ಯದರ್ಶಿ ಶ್ರೀ ಪ್ರಸನ್ನನಾಥ ಸ್ವಾಮೀಜಿ ಹಾಗೂ ಎಲ್ಲಾ ಶಾಖಾ ಮಠಗಳ ಪೂಜ್ಯರು ಹಾಜರಿದ್ದರು. ಸ್ಥಳೀಯ ಮಂಡ್ಯ ಜಿಲ್ಲಾಧಿಕಾರಿ ಡಾಕುಮಾರ್, ಮಂಡ್ಯ ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ನಂದಿನಿ.ಕೆ.ಆರ್, ಆದಿಚುಂಚನಗಿರಿ ವಿಶ್ವವಿದ್ಯಾಲಯದ ಕುಲಪತಿ ಡಾ.ಎಂ.ಎ.ಶೇಖರ್, ಕುಲಸಚಿವ ಡಾ.ಸಿ.ಕೆ ಸುಬ್ಬರಾಯ, ಶಿಕ್ಷಣ ಟ್ರಸ್ಟ್‌ನ ಆಡಳಿತಾಧಿಕಾರಿ ಡಾ.ಎ.ಟಿ.ಶಿವರಾಮು ಹಾಜರಿದ್ದರು.

ವಿಜ್ಞಾನ ಉತ್ಸವದ ಪ್ರಯುಕ್ತ ಏರ್ಪಡಿಸಿದ್ದ ವಿಶೇಷ ಉಪನ್ಯಾಸಗಳನ್ನು ಬೆಂಗಳೂರಿನ ಇಸ್ರೋ ಸಂಸ್ಥೆಯ ನಿವೃತ್ತ ನಿರ್ದೇಶಕ ಡಾ. ಬಿ.ಹೇಮಗೋಪಾಲ್, ಮೈಸೂರು ವಿಶ್ವವಿದ್ಯಾಲಯದ ಪ್ರೊ.ಎಸ್.ಜಿ.ರಾಮಚಂದ್ರ ಬೆಂಗಳೂರು ವಿಧಿ ಕಾಲೇಜಿನ ಮುಖ್ಯಸ್ಥರಾದ ಡಾ.ವಿ.ಪಿ. ಆರತಿ ಕಾರ್ಯಕ್ರಮ ನಿರೂಪಿಸಿದರು.

ವಿಜ್ಞಾನ ಉತ್ಸವ ವಸ್ತು ಪ್ರದರ್ಶನದಲ್ಲಿ ಭಾಗವಹಿಸಿದ ಅಂಗ ಕಾಲೇಜುಗಳ ಬೆಂಗಳೂರಿನ ಹೆಚ್ಎಎಲ್, ಇಸ್ರೋ ಕಂಪನಿಗಳು, ವಿಶ್ವೇಶ್ವರಯ್ಯ ಮ್ಯೂಸಿಯಂ, ಕರ್ನಾಟಕ ಸರ್ಕಾರದ ಇಂಧನ ಇಲಾಖೆ ಹಾಗೂ ಇತರ ಇಲಾಖೆಗಳು. 5 ವಿವಿಧ ವಿಷಯಗಳ (Theme) ದ ಈ ಬೃಹತ್ ವಸ್ತುಪ್ರದರ್ಶನದಲ್ಲಿ 180ಕ್ಕೂ ಹೆಚ್ಚು ಸ್ಟಾಲ್‌ಗಳಲ್ಲಿ, 172 ಕಾಲೇಜುಗಳಿಂದ ಒಟ್ಟು 1220 ವಿದ್ಯಾರ್ಥಿಗಳು ಭಾಗವಹಿಸಿದ್ದಾರೆ. ಪದವಿ, ಸ್ನಾತಕೋತ್ತರ ಪದವಿ, ವೈದ್ಯಕೀಯ, ಇಂಜಿನಿಯರಿಂಗ್, ನರ್ಸಿಂಗ್, ಫಾರ್ಮಸಿ, ಬಿ.ಇಡಿ ಹಾಗೂ ಇತರ ಕಾಲೇಜುಗಳು ಭಾಗವಹಿಸಿವೆ (ರಾಜ್ಯದ ಸರ್ಕಾರಿ ಹಾಗೂ ಖಾಸಗಿ ಕಾಲೇಜುಗಳು)

## ಶ್ರೀರಂಗಪಟ್ಟಣದಲ್ಲಿ ಖಾತಾ ಆಂದೋಲನ



ಪುರಸಭೆ ಅಧ್ಯಕ್ಷೆ ಯಶೋಧಮ್ಮ, ಉಪಾಧ್ಯಕ್ಷ ಎಂ.ಎಲ್.ದಿನೇಶ್ ಹಾಗೂ ಮುಖ್ಯಾಧಿಕಾರಿ ಎಂ.ರಾಜಣ್ಣ ನೇತೃತ್ವದಲ್ಲಿ ಸರ್ವ ಸದಸ್ಯರ ಸಭೆ ನಡೆಯಿತು.

**ಶ್ರೀರಂಗಪಟ್ಟಣ:** ಸರ್ಕಾರದ ಹೊಸ ನಿಯಮದಂತೆ ಎ ಖಾತಾ ಮತ್ತು ಬಿ ಖಾತಾ ನೀಡಲು ಸದಸ್ಯರ ಜೊತೆಗೂಡಿ ಪ್ರತೀ ವಾರ್ಡ್‌ಗಳಲ್ಲೂ ಆಂದೋಲನ ಹಮ್ಮಿಕೊಳ್ಳಲಾಗುತ್ತಿದ್ದು, ಸರ್ವ ಸದಸ್ಯರೂ ತಮ್ಮ ವಾರ್ಡಿನ ಜನತೆಯ ಸಂಪರ್ಕಕ್ಕೆ ಸ್ಪಂದಿಸುವಂತೆ ಉಪಾಧ್ಯಕ್ಷ ಎಂ.ಎಲ್.ದಿನೇಶ್ ತಿಳಿಸಿದರು.

ಪಟ್ಟಣದ ಪುರಸಭೆ ಸಭಾಂಗಣದಲ್ಲಿ ಪುರಸಭೆ ಅಧ್ಯಕ್ಷೆ ಯಶೋಧಮ್ಮ ಅಧ್ಯಕ್ಷತೆಯಲ್ಲಿ ಮುಖ್ಯಾಧಿಕಾರಿ ಎಂ.ರಾಜಣ್ಣ ನೇತೃತ್ವದಲ್ಲಿ ಬುಧವಾರ ಸರ್ವ ಸದಸ್ಯರ ಸಭೆಯಲ್ಲಿ ಅವರು ಮಾತನಾಡಿದರು.

ಕಂದಾಯ ಇಲಾಖೆ ಬಗ್ಗೆ ಸಾರ್ವಜನಿಕರಿಂದ ಹೆಚ್ಚಿನ ದೂರುಗಳು ಕೇಳಿಬರುತ್ತಿವೆ. ವಿನಾಕಾರಣ ಸಾರ್ವಜನಿಕರನ್ನು ಕಚೇರಿಗೆ ಅಲೆಸಬೇಡಿ. ತಮ್ಮ ವಾರ್ಡ್‌ಗಳ ಸಮಸ್ಯೆಗಳಿಗೆ ಅಧಿಕಾರಿಗಳು ಸ್ಪಂದಿಸಬೇಕು. ಇಲ್ಲಿನ ಅಧಿಕಾರಿಗಳ ಸದಸ್ಯರ ದೂರವಾಣಿ ನಂಬರ್‌ಗಳೇ ಗೊತ್ತಿಲ್ಲ. ಸಮಸ್ಯೆಗಳ ಬಗ್ಗೆ ಕರೆ ಮಾಡಿದರೆ, ಕರೆಗೆ ಸ್ಪಂದಿಸುವುದೇ ಇಲ್ಲ ಎಂದು ಸದಸ್ಯ ರಾಧ ಶ್ರೀಕಂಠ ದೂರಿದರು.

ಪತ್ರಕರ್ತರಿಗೆ ಪತ್ರಿಕಾ ಭವನದ ಖಾತೆಯನ್ನು ತುರ್ತಾಗಿ ಮಾಡಿಕೊಡುವಂತೆ ಸರ್ವ ಸದಸ್ಯರು ಒಮ್ಮತದ ಸಹಮತ ವ್ಯಕ್ತಪಡಿಸಿದರು. ಮಂಡ್ಯ ಜಿಲ್ಲಾ ಹಾಲು ಒಕ್ಕೂಟದ ವ್ಯಾಪ್ತಿಯ ಶ್ರೀರಂಗಪಟ್ಟಣ ಉಪಕಚೇರಿಗೆ, ಮಡಿವಾಳ ಜನಾಂಗದ ಭವನ ನಿರ್ಮಾಣಕ್ಕೆ ನಿವೇಶನ ಮಂಜೂರು ಮಾಡಿಕೊಡುವಂತೆ ಸಭೆಯಲ್ಲಿ ಕೋರಿದರು. 21 ತಿಂಗಳ ಜಮಾ ಖರ್ಚು ವಿಷಯವಾಗಿ ಸ್ಥಾಯಿ ಸಮಿತಿಯೊಂದಿಗೆ ಮುಂದಿನ ಸಭೆಯಲ್ಲಿ ಕೂಲಂಕುಷವಾಗಿ ಚರ್ಚೆ ಮಾಡುವ ತೀರ್ಮಾನಕ್ಕೆ ಬರಲಾಯಿತು.

ಸಭೆಯಲ್ಲಿ ಸದಸ್ಯರಾದ ಎಸ್.ಪ್ರಕಾಶ್, ಎಂ.ನಹೀಶ್, ದಯಾನಂದ್, ಕೃಷ್ಣಪ್ಪ ಎಸ್. ನಹೀಶ್, ಎಸ್.ಟಿ ರಾಜು, ನಾಮಿನಿ ಸದಸ್ಯರು ಬಸವರಾಜು ಇತರರು ಉಪಸ್ಥಿತರಿದ್ದರು.

## ವಿವಿ ನಗರದಿಂದ ಮಹಿಳೆ ನಾಪತ್ತೆ



ಪಾಂಡವಪುರ, ಫೆ19– ಇಲ್ಲಿಗೆ ಸಮೀಪದ ವಿವಿ ನಗರದಿಂದ ಮಹಿಳೆಯೊಬ್ಬರು ನಾಪತ್ತೆಯಾಗಿದ್ದಾರೆ. ಆರ್.ರಮೇಶ್ ಅವರ ಪತ್ನಿ ಶೋಭಾ(45) ಫೆ15ರಂದು ಮಧ್ಯಾಹ್ನ ಮನೆಯಿಂದ ಹೊರ ಹೋದವರು ಇದುವರೆಗೂ ಪತ್ತೆಯಾಗಿಲ್ಲ ಎಂದು ಆರ್.ರಮೇಶ್ ಪಾಂಡವಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಶೋಭಾ ಅವರು 5 ಅಡಿ ಎತ್ತರ, ಎಣ್ಣೆಗೆಂಪು ಬಣ್ಣ, ಬಲಗೈ ಮೇಲೆ ರಮೇಶ ಎಂಬ ಹಸಿರು ಹಚ್ಚೆ ಗುರುತಿದೆ.

ಈ ಚಹರೆಯ ಮಹಿಳೆ ಬಗ್ಗೆ ಯಾರಿಗಾದರೂ ಸುಳಿವು ಸಿಕ್ಕಲ್ಲಿ ಕೂಡಲೇ ಸಮೀಪದ ಪೊಲೀಸ್ ಠಾಣೆಗಾಗಲಿ ಪಾಂಡವಪುರ ಪೊಲೀಸ್ ಠಾಣೆ: 08236 255132 ಅಥವಾ ಮೊ: 9480804874ಗೆ ಸಂಪರ್ಕಿಸುವಂತೆ ಕೋರಲಾಗಿದೆ.

## ಮಂಡ್ಯ ವಿವಿ ಮುಚ್ಚದಂತೆ ಯಮದೂರು ಆಗ್ರಹ

ಮಂಡ್ಯ, ಫೆ19– ಸುಮಾರು 5 ವರ್ಷಗಳ ಹಿಂದೆ ಪ್ರಾರಂಭಗೊಂಡ ಮಂಡ್ಯ ವಿಶ್ವವಿದ್ಯಾಲಯವನ್ನು ಮೈಸೂರು ವಿಶ್ವವಿದ್ಯಾಲಯಕ್ಕೆ ವಿಲೀನಗೊಳಿಸುವ ನಿರ್ಣಯವನ್ನು ಕೈಬಿಡಬೇಕು ಎಂದು ಮೈಸೂರು ವಿಶ್ವವಿದ್ಯಾಲಯದ ಶಿಕ್ಷಣ ಮಂಡಳಿಯ ಮಾಜಿ ಸದಸ್ಯ ಡಾ.ವೈ.ಎಸ್.ಸಿದ್ದರಾಜು (ಯಮದೂರು ಸಿದ್ದರಾಜು) ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಂಡ್ಯ ಜಿಲ್ಲೆಗೆ ವಿಶ್ವವಿದ್ಯಾಲಯ ಲಭಿಸಿರುವುದು ಹೆಮ್ಮೆಯ ವಿಷಯವಾಗಿದ್ದು, ಅದನ್ನು ಉಳಿಸಿಕೊಂಡು ಕೊಂಡೊಯ್ಯುವಲ್ಲಿ ಜಿಲ್ಲಾ ಮಂತ್ರಿಗಳು ಹಾಗೂ ಶಾಸಕರುಗಳು ವಿಫಲರಾಗಿದ್ದಾರೆ ಎಂದರು.

ಜಿಲ್ಲೆಯ ಮಂಡ್ಯ ವಿಶ್ವವಿದ್ಯಾಲಯವನ್ನು ಮೈಸೂರು ವಿಶ್ವವಿದ್ಯಾಲಯಕ್ಕೆ ವಿಲೀನ ಮಾಡಿದಲ್ಲಿ ಸದರಿ ವಿಶ್ವವಿದ್ಯಾಲಯದಲ್ಲಿ ಪದವಿ ಹಾಗೂ ಸ್ನಾತಕೋತ್ತರ ಪದವಿಗೆ ವ್ಯಾಸಂಗ ಮಾಡುತ್ತಿರುವ ಹಾಲಿ ವಿದ್ಯಾರ್ಥಿಗಳಿಗೆ ಘೋರ ಅನ್ಯಾಯ ಮಾಡಿದಂತಾಗುತ್ತದೆ ಎಂದು ಕಳವಳ ವ್ಯಕ್ತಪಡಿಸಿದರು.

ಸದರಿ ವಿಲೀನ ಪ್ರಕ್ರಿಯೆಯು ಜಿಲ್ಲೆಗೆ ಸಿಹಿ ನೀಡಿ, ಹಿಂದೆಯೇ ಕಹಿಯನ್ನು ಉಣಿಸುವಂತಾಗಿದ್ದು, ಸದರಿ ನಿರ್ಧಾರವನ್ನು ಹಿಂಪಡೆಯಬೇಕು ಎಂದು ಒತ್ತಾಯಿಸಿದರು.

ವಿಶ್ವವಿದ್ಯಾಲಯಗಳನ್ನು ಅವಲಂಭಿಸಿರುವ ವಿದ್ಯಾರ್ಥಿಗಳ ಹಿತ ದೃಷ್ಟಿಯಿಂದ ಎಲ್ಲಾ ವಿಶ್ವವಿದ್ಯಾಲಯಗಳಿಗೆ ತಲಾ 20 ಕೋಟಿ ರೂ ನಂತೆ ಅನುದಾನ ನೀಡಿ ಉಳಿಸಿಕೊಳ್ಳಬೇಕು. ಇದರಿಂದ ಸರ್ಕಾರಕ್ಕೆ 180 ಕೋಟಿ ರೂ ನಷ್ಟು ಹೊರೆಯಾಗಬಹು ದಷ್ಟೇ ಎಂದು ಸಲಹೆ ನೀಡಿದರು.

## ಕಾಂಗ್ರೆಸ್ ಯುವ ಘಟಕಕ್ಕೆ ಆಯ್ಕೆ



**ಶ್ರೀರಂಗಪಟ್ಟಣ:** ಯುವ ಕಾಂಗ್ರೆಸ್ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿಯಾಗಿ ರವಿ ವೈಆರ್ ಆಯ್ಕೆಯಾಗಿದ್ದಾರೆ.

ಯುವ ಕಾಂಗ್ರೆಸ್ ಘಟಕದ ಸದಸ್ಯತ್ವ ಮತ್ತು ಪದಾಧಿಕಾರಿಗಳ ಹುದ್ದೆಗೆ ಸೆ.20ರಿಂದ ಅ.20 ರವರೆಗೆ ಆನ್‌ಲೈನ್ ಮೂಲಕ ಮತದಾನ ನಡೆದಿತ್ತು 25,588 ಮತಗಳ ಪೈಕಿ ರವಿ ವೈ.ಆರ್ ಅವರು 8,736 ಮತ ಪಡೆದಿದ್ದಾರೆ. ಶಾಸಕ ರಮೇಶ ಬಂಡಿಸಿ ದ್ದೇಗೌಡ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ದಿನೇಶ್ ರವಿ ಅವರನ್ನು ಅಭಿನಂದಿಸಿದ್ದಾರೆ.

### ಕೆ.ಆರ್.ಪೇಟೆಯ ವಿದ್ಯುತ್ ಕೇಂದ್ರದಿಂದ ಚನ್ನರಾಯ ಪಟ್ಟಣದ ಪೆಟ್ರೋಲ್ ಬಂಕ್‌ಗಳಿಗೆ ವಿದ್ಯುತ್

## ಕಾಮಗಾರಿ ತಡೆದು ರೈತರ ಆಕ್ರೋಶ, ಇಂಜಿನಿಯರ್‌ಗೆ ಘೇರಾವ್



ಕೆ.ಆರ್.ಪೇಟೆ, ಫೆ19– ತಾಲೂಕಿನ ಸಂತೇಬಾಚಹಳ್ಳಿ ಹೋಬಳಿಯ ಹರಿಯಾಲದಮ್ಮ ದೇವಸ್ಥಾನ, ಗಂಗನಹಳ್ಳಿ ಬಳಿ ಇರುವ ವಿದ್ಯುತ್ ಸ್ವೀಕರಣ ಕೇಂದ್ರದಿಂದ ಚನ್ನರಾಯಪಟ್ಟಣ ತಾಲೂಕಿನ ಪೆಟ್ರೋಲ್ ಬಂಕ್‌ಗಳಿಗೆ ವಿದ್ಯುತ್ ಕಲ್ಪಿಸುವ ಉದ್ದೇಶದಿಂದ ವಿದ್ಯುತ್ ಲೈನ್ ನಿರ್ಮಾಣ ಮಾಡುತ್ತಿರುವುದನ್ನು ವಿರೋಧಿಸಿ ಸ್ಥಳೀಯ ರೈತರು ಕಾಮ ಗಾರಿಯನ್ನು ತಡೆದು ಇಂಜಿನಿಯರ್ ಕೃಷ್ಣ ಅವರಿಗೆ ಘೇರಾವ್ ಹಾಕಿ ಕೂಡಲೇ ಕಾಮಗಾರಿ ಸ್ಥಗಿತಗೊಳಿಸುವಂತೆ ಆಗ್ರಹಿಸಿ ಪ್ರತಿಭಟನೆ ನಡೆಸಿದರು.

ನಮ್ಮ ಕೆ.ಆರ್.ಪೇಟೆ ತಾಲೂಕಿನ ಈ ಭಾಗದ ಗ್ರಾಮಗಳಿಗೆ ಹಾಗೂ ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಪೂರೈಕೆ ಮಾಡಲು ವಿದ್ಯುತ್ ಕೊರತೆ ಉಂಟಾಗುತ್ತಿದ್ದು, ಲೋಡ್ ಶೆಡ್ಡಿಂಗ್ ಮಾಡಲಾಗುತ್ತಿದೆ. ಇಂತಹ ಸಂಕಷ್ಟದ ಪರಿಸ್ಥಿತಿ ಇದ್ದರೂ ಸಹ ಚನ್ನರಾಯ ಪಟ್ಟಣ ತಾಲೂಕಿನಲ್ಲಿರುವ ಪೆಟ್ರೋಲ್ ಬಂಕ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವುದಕ್ಕಾಗಿ ಚನ್ನರಾಯಪಟ್ಟಣ ವಿಭಾಗದ ಚೆಸ್ಕಾಂ ಇಂಜಿನಿಯರ್ ಕೃಷ್ಣ ಮತ್ತು ಗುತ್ತಿಗೆದಾರರು ಬಂದು ಹರಿಯಾಲದಮ್ಮ ದೇವಸ್ಥಾನದ ಬಳಿ ಇರುವ ವಿದ್ಯುತ್ ಸ್ವೀಕರಣ ಕೇಂದ್ರದಿಂದ ವಿದ್ಯುತ್ ಕಂಬಗಳನ್ನು ಅಳವಡಿಸಿ ವಿದ್ಯುತ್ ತಂತಿಗಳನ್ನು ಅಳವಡಿಸುತ್ತಿದ್ದಾಗ ಸ್ಥಳಕ್ಕೆ ಬಂದ ನೂರಾರು ರೈತರು ಕಾಮಗಾರಿಯ ಬಗ್ಗೆ ಪ್ರಶ್ನಿಸಿ ಕಾಮಗಾರಿ ತಡೆದು ಪ್ರತಿಭಟನೆ ನಡೆಸಿದರು. ಪ್ರತಿಭಟನೆಯಲ್ಲಿ ಗ್ರಾಪಂ ಸದಸ್ಯ ಬೆಡದಹಳ್ಳಿ ಸುನಿಲ್, ಭಾರತೀಪುರ ಚಂದ್ರೇಗೌಡ, ಕೊರಟೀಕೆರೆ ಶಿವಕುಮಾರ್, ಕುಂದೂರು ರಾಮಚಂದ್ರು ಮಧು, ನಾಗೇಶ್, ಶಿವರಾಂ ಸೇರಿದಂತೆ ಬೆಡದಹಳ್ಳಿ, ಗಂಗನಹಳ್ಳಿ, ಭಾರತೀಪುರ, ಯಲಾದಹಳ್ಳಿ, ಕುಂದೂರು, ಆಚಮನಹಳ್ಳಿ, ಹರಿಯಾಲದಮ್ಮ ದೇವಾಲಯ, ಮಾರೇನಹಳ್ಳಿ ಗ್ರಾಮಗಳ ನೂರಾರು ರೈತರು ಪ್ರತಿಭಟನೆ ಯಲ್ಲಿ ಭಾಗವಹಿಸಿದ್ದರು.

ಒಂದನೇ ಪುಟದಿಂದ

## 10 ಕೆಜಿ ಅಕ್ಕಿ ವಿತರಣೆ

ಹಸಿವುಮುಕ್ತ ರಾಜ್ಯವನ್ನಾಗಿಸಿರುವುದು ಹೆಮ್ಮೆಯ ವಿಷಯ ಎಂದರು. ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ರಾಗಿ, ಜೋಳ ಮತ್ತು ಭತ್ತ ಖರೀದಿಗೆ 366 ಕೇಂದ್ರ ತೆರೆಯಲಾಗಿದೆ, ಕಳೆದ ಡಿಸೆಂಬರ್ 1ರಿಂದಲೇ ನೋಂದಣಿ ಮಾಡಿಕೊಳ್ಳಲು ರೈತರಿಗೆ ಅವಕಾಶ ಕಲ್ಪಿಸಲಾಗಿದ್ದು, ಈ ವರ್ಷದ ಮಾರ್ಚ್ ಅಂತ್ಯದವರೆಗೆ ನೋಂದಣಿ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.

ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ, ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ ಹಾಗೂ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ಖರೀದಿ ಏಜೆನ್ಸಿಗಳಾಗಿ ಕಾರ್ಯನಿರ್ವಹಿಸುತ್ತಿವೆ. ಕೇಂದ್ರ ಸರ್ಕಾರ ರಾಗಿಗೆ ಕನಿಷ್ಠ ಬೆಂಬಲ ಬೆಲೆಯನ್ನು 4,290 ರೂ.ಗೆ ನಿಗದಿಪಡಿಸಿದೆ, ಖರೀದಿ ಗುರಿ 4.40 ಲಕ್ಷ ಮೆಟ್ರಿಕ್ ಟನ್‌ಗಳಾಗಿದೆ, 3.6 ಲಕ್ಷ ಮೆಟ್ರಿಕ್ ಟನ್ ರಾಗಿ ನೀಡಲು 2,54,528 ರೈತರು ನೋಂದಾಯಿಸಿ ಕೊಂಡಿದ್ದು, ಪ್ರತಿ 10 ರೈತರಿಂದ ಗರಿಷ್ಠ 20 ಕ್ವಿಂಟಾಲ್ ಖರೀದಿಸಲು ಕ್ರಮ ವಹಿಸಲಾಗಿದೆ. ಸಾಮಾನ್ಯ ಭತ್ತಕ್ಕೆ ಕನಿಷ್ಠ ಬೆಂಬಲ ಬೆಲೆ 2,300 ರೂ., "ಎ" ಗ್ರೇಡ್ ಭತ್ತಕ್ಕೆ 2,320 ರೂ. ನಿಗದಿ ಯಾಗಿದ್ದು, ಖರೀದಿ ಗುರಿ 7.5 ಲಕ್ಷ ಮೆಟ್ರಿಕ್ ಟನ್‌ಗಳಾಗಿದೆ, ಭತ್ತ ನೀಡಲು 3,388 ರೈತರು ನೋಂದಾಯಿಸಿ ಕೊಂಡಿದ್ದು, ಪ್ರತಿ ರೈತರಿಂದ 50 ಕ್ವಿಂಟಾಲ್ ಖರೀದಿಗೆ ಕ್ರಮ ವಹಿಸಲಾಗಿದೆ.

## ವಾಷಿಂಗ್ ನಿರ್ಮಾ ಪೌಡರ್ ಹಾಕಿ ತೊಳೆದಿದ್ದಾರೆ...

ಪೊಲೀಸ್ ಅಧಿಕಾರಿಗೆ ವರ್ಗಾವಣೆ, ಪ್ರಮೋಷನ್ ಬೇಕು. ಅದಕ್ಕೆ ಹೀಗೆ ಮಾಡಿದ್ದಾರೆ. ಸಿಬಿಐ ತನಿಖೆಗೆ ಕೊಟ್ಟರೆ ಮಾತ್ರ ಸತ್ಯ ಹೊರಗಡೆ ಬರುತ್ತೆ.

ಇದು ಪೂರ್ವ ನಿಯೋಜಿತವಾದ ವರದಿ. ತಪ್ಪಿಲ್ಲ ಅಂದರೆ 14 ಸೈಟ್ ಯಾಕೆ ವಾಪಸ್ ಕೊಟ್ಟರು. A1, A2, A3 ತಪ್ಪಿಲ್ಲ ಅಂತ ಲೋಕಾಯುಕ್ತ ಹೇಳುತ್ತೆ. ಲೇಔಟ್ ಅಕ್ರಮ, ಅದು ಅವರಿಗೆ ಗೊತ್ತೇ ಇಲ್ಲ ಅಂತಾರೆ. 50:50 ಸೈಟ್ ಬೇಕು ಅಂದಾಗ ಮಾತ್ರ ನೋಡಿದ್ದಾರೆ. ಸಿದ್ದರಾಮಯ್ಯ ಒಂದು ಫೋನ್ ಕಾಲ್ ಕೂಡ ಮಾಡಿಲ್ಲ. ಸಿದ್ದರಾಮಯ್ಯನವರು ಒಂದು ಪತ್ರ ಕೂಡ ಬರೆದಿಲ್ಲ. ಸಿಎಂ ಸಿದ್ದರಾಮಯ್ಯ ಸಿಕ್ಕಿ ಹಾಕಿಕೊಳ್ಳೋಕೆ ಮೂರ್ಖರಾ ಎಂದರು. ಲೋಕಾಯುಕ್ತ ಬಿ ರಿಪೋರ್ಟ್‌ನಿಂದ ನಮಗೆ 100% ಬೇಜಾರಾಗಿದೆ. ನಮಗಿಂತ ಜಾಸ್ತಿ 200% ಕಾಂಗ್ರೆಸ್‌ನ ಕೆಲವರಿಗೆ ಬೇಜಾರು. ಸಿಎಂ ಆಗಬೇಕೆಂಬ ಕನಸು ಇಟ್ಟುಕೊಂಡವರಿಗೆ ನಿದ್ರೆ ಇಲ್ಲ. ಸಿಎಂ ಆಗಬೇಕು ಎಂಬುವವರ ಕನಸು ನುಚ್ಚು ನೂರಾಗಿದೆ. ನಾಳೆ ಬೆಂಗಳೂರಿನಲ್ಲಿ ನಾವು 10 ಜನ ಸಭೆ ಸೇರುತ್ತಿದ್ದೇವೆ. ಸಭೆಯಲ್ಲಿ ಮುಡಾ ಪ್ರಕರಣದ ಬಗ್ಗೆ ಚರ್ಚೆ ಮಾಡುತ್ತೇವೆ ಎಂದು ಹೇಳಿದರು.

**ಸಿಬಿಐಗೆ ಕೊಡದಿದ್ದರೆ ಸತ್ಯ ಹೊರಗೆ ಬರಲ್ಲ:** ಲೋಕಾಯುಕ್ತ ವರದಿ ಬಗ್ಗೆ ವಿಧಾನಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಮಾತನಾಡಿ, ಮುಡಾ ಅಕ್ರಮದ ಬಗ್ಗೆ ಸಿಬಿಐ ತನಿಖೆಗೆ ನೀಡಿದರೆ ಸತ್ಯ ಬಯಲಾಗುತ್ತದೆ. ಕಾಂಗ್ರೆಸ್‌ನವರಿಗೆ ಸಿಬಿಐ ಮೇಲೆ ವಿಶ್ವಾಸವಿಲ್ಲವೆಂದರೆ ಏನರ್ಥ. ಕಾಂಗ್ರೆಸ್‌ನವರು ಕೇಂದ್ರದಲ್ಲಿದ್ದಾಗ ನಡೆದ ತನಿಖೆಗಳ ಸ್ಥಿತಿ ಏನು. ಹಾಗಾದರೆ ಕಾಂಗ್ರೆಸ್‌ನವರು ಸಿಬಿಐ ದುರ್ಬಳಕೆ ಮಾಡಿಕೊಂಡಿದ್ದರಾ. ಮುಡಾ ಅಕ್ರಮದ ವಿರುದ್ಧ ನಮ್ಮ ಹೋರಾಟ ನಿರಂತರವಾಗಿರಲಿದೆ ಕಾನೂನು ಹೋರಾಟ ಮಾಡುವ ಬಗ್ಗೆ ಪಕ್ಷದಲ್ಲಿ ಚರ್ಚಿಸಿ ನಿರ್ಧಾರ ಮಾಡುತ್ತೇವೆ ಎಂದು ಸ್ಪಷ್ಟಪಡಿಸಿದರು.

## ಅವರು ಹೇಳಿದಂತೆ ತನಿಖೆ ಮಾಡಬೇಕಾ?

ಮುಖ್ಯಮಂತ್ರಿಗಳ ಪತ್ನಿ ಮತ್ತು ಜಮೀನು ಮಾರಾಟ ಮಾಡಿದವರು ಆರೋಪಿಗಳು. ಯಾವುದೇ ರೀತಿಯ ಅಪರಾಧ ಒಳಗೊಂಡ ಕೃತ್ಯ ಇದರಲ್ಲಿ ನಡೆದಿಲ್ಲ. ಇದನ್ನು ಸೃಷ್ಟಿ ಮಾಡಿದ್ದಾರೆ ಎಂಬುದು ನಮ್ಮ ನೇರವಾದ ಆರೋಪ ಎಂದರು.

ಸಾಕ್ಷಿ ಆಧಾರಗಳಿಲ್ಲ ಎಂದು ತನಿಖಾ ವರದಿಯಲ್ಲಿ ಬಂದರೆ ಸಾಕ್ಷ್ಯಾಧಾರಗಳಿಲ್ಲ ಅಂತಲೇ ಅರ್ಥ. ಯಾವುದಾದರೂ ಒಂದು ತೀರ್ಮಾನ ತೆಗೆದುಕೊಳ್ಳುವಾಗ ಪ್ರಕ್ರಿಯೆಗಳಲ್ಲಿ ಲೋಪವಾಗುವುದು ಬೇರೆ, ಅಪರಾಧಿಕರಣ ಬೇರೆ. ಪ್ರೊಸೀಜರ್ ಲ್ಯಾಪ್ಸಸ್ ಅಪರಾಧೀಕರಣ ಆಗುವುದಾದರೆ ನೂರಾರು ಎಫ್‌ಐಆರ್ ದಾಖಲಾಗಬೇಕಾಗುತ್ತದೆ. 25 ವರ್ಷದ ಹಿಂದಿನ ಡಿ ನೋಟಿಫಿಕೇಶನ್‌ನಲ್ಲಿ ಏನಾಗಿದೆ ಎಂದು ಈಗ ತನಿಖೆ ಮಾಡುವುದಕ್ಕೆ ಸಾಧ್ಯನಾ ಎಂದು ಪ್ರಶ್ನಿಸಿದ್ದಾರೆ.

ಇದು ಸಂಪೂರ್ಣವಾಗಿ ರಾಜಕೀಯಕ್ಕೆ ಬಳಸಿದ ಪ್ರಕರಣವಾಗಿದೆ. ತನಿಖೆ ಮಾಡಿರುವುದು ಲೋಕಾಯುಕ್ತ ಸಂಸ್ಥೆ. ಪಾರದರ್ಶಕವಾದ ತನಿಖೆ ಆಗಿದೆ. ಸ್ವತಂತ್ರವಾದ ತನಿಖೆ ನಡೆದಿದೆ ಎಂದು ಈಗಾಗಲೇ ನ್ಯಾಯಾಲಯವೂ ಹೇಳಿದೆ. ಇದರಲ್ಲಿ ಹಸ್ತಕ್ಷೇಪ ಮಾಡುವ ಪ್ರಶ್ನೆ ಇಲ್ಲ ಎಂದು ಕೋರ್ಟ್ ಹೇಳಿದೆ. ಕಾನೂನಾತ್ಮಕವಾಗಿ ಹೋರಾಟ ಮುಂದುವರೆಸಿಕೊಂಡು ಹೋಗಲಿ. ರಾಜಕೀಯವಾಗಿ ಆರೋಪಗಳಿಗೆ ಉತ್ತರ ಕೊಡಲು ಆಗುವುದಿಲ್ಲ ಎಂದು ತಿರುಗೇಟು ನೀಡಿದರು. ಸಂವಿಧಾನದ ಮೇಲೆ ಕಾನೂನಿನ ಮೇಲೆ ನಂಬಿಕೆ ಇಲ್ಲದವರು ಆರೋಪ ಮಾಡುತ್ತಾರೆ. ಬಿಜೆಪಿ ಅವರು ಹೇಳಿದಂತೆ ತನಿಖೆ ಮಾಡಬೇಕಾ. ಹೇಗೆ ತನಿಖೆ ಮಾಡಬೇಕು ಎಂದು ಅವರ ಅಧ್ಯಕ್ಷರು ಬಂದು ಹೇಳುತ್ತಾರಾ. ಎಂದು ವಾಗ್ದಾಳಿ ನಡೆಸಿದರು.

## ಕ್ಲೀನ್‌ಚಿಟ್

ಲೋಕಾಯುಕ್ತ ನಿರ್ಧರಿಸಿದೆ ಎಂದು ಹೇಳಲಾಗಿದೆ. ಈ ಕುರಿತಂತೆ ದೂರುದಾರ ಸ್ನೇಹಮಯಿ ಕೃಷ್ಣ ಅವರಿಗೆ ನೋಟೀಸ್ ಜಾರಿಗೊಳಿಸಿರುವ ಲೋಕಾಯುಕ್ತ, 'ನೀವು ಆರೋಪಿಸಿರುವ ಸಿಎಂ ಸಿದ್ದರಾಮಯ್ಯ, ಅವರ ಪತ್ನಿ ಪಾರ್ವತಿ ಹಾಗೂ ಕುಟುಂಬಸ್ಥರು ಮುಡಾ ನಿಯಮಗಳಂತೆ ಹೊಸ ಬಡಾವಣೆ ನಿರ್ಮಾಣಕ್ಕಾಗಿ ತಮ್ಮ ಭೂಮಿಯನ್ನು ಮುಡಾಕ್ಕೆ ನೀಡಿ ಅದಕ್ಕೆ ಪರಿಹಾರವಾಗಿ ಸೈಟುಗಳನ್ನು ಪಡೆದಿರುತ್ತಾರೆ. ಆದರೆ, ಆ ನಿವೇಶನಗಳನ್ನು ಅಕ್ರಮವಾಗಿ ಪಡೆದಿರುವುದಾಗಿ ನೀವು ದೂರು ದಾಖಲಿಸಿರುತ್ತೀರಿ. ಆ ದೂರುಗಳನ್ನಾಧರಿಸಿ ತನಿಖೆ ನಡೆಸಿದ್ದು, ನೀವು ಮಾಡಿರುವ ಆರೋಪಗಳಿಗೆ ಪೂರಕವಾದ ಸಾಕ್ಷ್ಯಾಧಾರಗಳು ಲಭ್ಯವಾಗಿಲ್ಲ. ಹೀಗೆ ದೂರುಗಳ ತನಿಖೆ ವೇಳೆ ಆಧಾರಗಳು, ಸಾಕ್ಷಿಗಳು ಸಿಕ್ಕದಿದ್ದ ಪಕ್ಷದಲ್ಲಿ ಅಂಥ ಪ್ರಕರಣಗಳನ್ನು ಈ ಹಿಂದೆ ಅನೇಕ ಬಾರಿ ವಜಾಗೊಳಿಸಲಾಗಿದೆ ಎಂದು ಹೇಳಿದೆ.

ಅಲ್ಲದೆ, 2016ರಿಂದ 2024ರವರೆಗೆ ಮುಡಾ ಬಡಾವಣೆಗಳಿಗಾಗಿ ಭೂಮಿ ಕೊಟ್ಟವರು ಶೇ.50:50 ಅನುಪಾತದ ಆಧಾರದಲ್ಲಿ ಪರಿಹಾರದ ನಿವೇಶನಗಳನ್ನು ಪಡೆದಿದ್ದಾರೆ. ಆ ಎಲ್ಲಾ ಪ್ರಕರಣಗಳ ಬಗ್ಗೆ ಸೂಕ್ತ ತನಿಖೆ ನಡೆಸಲಾಗುತ್ತದೆ. ಆನಂತರ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಲಾಗುತ್ತದೆ. ಸದ್ಯಕ್ಕೀಗ ನಾಲ್ವರು ಆರೋಪಿಗಳ ಬಗ್ಗೆ ಬಿ ರಿಪೋರ್ಟ್ ಸಲ್ಲಿಸಲು ನಿರ್ಧರಿಸಲಾಗಿದೆ. ನ್ಯಾಯಾಲಯಕ್ಕೆ ಬಿ ರಿಪೋರ್ಟ್ ಸಲ್ಲಿಕೆಯಾದ ಒಂದು ವಾರದೊಳಗೆ ನಿಮಗೆ (ಸ್ನೇಹಮಯಿ ಕೃಷ್ಣ) ಅದನ್ನು ಪ್ರಶ್ನಿಸಲು ಅವಕಾಶವಿದೆ ಎಂದು ಸ್ನೇಹಮಯಿ ಕೃಷ್ಣ ಅವರಿಗೆ ನೀಡಲಾಗಿರುವ ನೋಟಿಸ್‌ನಲ್ಲಿ ಲೋಕಾಯುಕ್ತ ಪೊಲೀಸರು ಹೇಳಿದ್ದಾರೆ.

**ಸ್ನೇಹಮಯಿ ಕೃಷ್ಣ ಆಕ್ಷೇಪ:** ಮುಡಾ ಪ್ರಕರಣದ ದೂರುದಾರ ಸ್ನೇಹಮಯಿ ಕೃಷ್ಣ ಅವರು ಲೋಕಾಯುಕ್ತರ ನಡೆಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಮುಡಾ ಹಗರಣದಲ್ಲಿ ಲೋಕಾಯುಕ್ತ ಪೊಲೀಸರು ಇಂಥದ್ದೇ ವರದಿ ನೀಡಬಹುದು ಎಂದು ನಾನು ನಿರೀಕ್ಷಿಸಿದ್ದೆ. ಲೋಕಾಯುಕ್ತ ಪೊಲೀಸರು ಸಿಎಂ ಹಾಗೂ ಅವರ ಕುಟುಂಬಸ್ಥರ ಬಗ್ಗೆ ಬಿ ರಿಪೋರ್ಟ್ ಸಲ್ಲಿಸುವ ಮೂಲಕ ತಮ್ಮ ಆತ್ಮಾಭಿಮಾನವನ್ನು ಮಾರಿಕೊಂಡಿದ್ದಾರೆ ಎಂದು ಹೇಳಿದ್ದಾರೆ. ಅಲ್ಲದೆ, 'ಬಿ' ರಿಪೋರ್ಟ್ ಅನ್ನು ಪ್ರಶ್ನಿಸಲು ಕಾಲಾವಕಾಶವಿದೆ. ನಾನು ಅದನ್ನು ಪ್ರಶ್ನಿಸುತ್ತೇನೆ. ಅದರ ವಿರುದ್ಧ ಮೇಲ್ಮನವಿ ಸಲ್ಲಿಸುತ್ತೇನೆ. ಸಿಎಂ ಸಿದ್ದರಾಮಯ್ಯನವರಿಗೆ ಈ ಪ್ರಕರಣದಲ್ಲಿ ಶಿಕ್ಷೆ ಕೊಡಿಸುವ ತನಕ ನಾನು ಸುಮ್ಮನಿರುವುದಿಲ್ಲ ಎಂದು ಅವರು ಹೇಳಿದ್ದಾರೆ.

## ಆರೋಪಿಗಳಿಗೆ ಶಿಕ್ಷೆ ಕೊಡಿಸುವೆ

ಆದರೆ ಹೈಕೋರ್ಟ್ ನನ್ನ ಮನವಿ ಪುರಸ್ಕರಿಸಲಿಲ್ಲ. ನಾನು ಅಂದು ನಿರೀಕ್ಷಿಸಿದಂತೆ ಲೋಕಾಯುಕ್ತರು ಸಿದ್ದರಾಮಯ್ಯ ಪರವಾಗಿ ವರದಿ ನೀಡಿದ್ದಾರೆ. ಲೋಕಾಯುಕ್ತರು ಸಿದ್ದರಾಮಯ್ಯ ಪ್ರಕರಣ ವಜಾ ಮಾಡಿದ ಮಾತ್ರಕ್ಕೆ ನಾನು ಸುಮ್ಮನೆ ಕೂರುವುದಿಲ್ಲ. ಕಾನೂನಾತ್ಮಕ ಹೋರಾಟ ಮಾಡಿ ಆರೋಪ ಸಾಬೀತು ಮಾಡುತ್ತೇನೆ. ಈ ಮೂಲಕ ಆರೋಪಿಗಳಿಗೆ ಶಿಕ್ಷೆ ಕೊಡಿಸುತ್ತೇನೆ ಎಂದು ತಿಳಿಸಿದರು.

ಲೋಕಾಯುಕ್ತರು ನಾಳೆ ಬೆಂಗಳೂರಿನ ಜನಪ್ರತಿನಿಧಿಗಳ ನ್ಯಾಯಾಲಯಕ್ಕೆ ವರದಿ ಸಲ್ಲಿಸುತ್ತಿದ್ದಾರೆ. ಲೋಕಾಯುಕ್ತರು ಸಲ್ಲಿಸುವ ಅಂತಿಮ ವರದಿ ಓದಿ ವಕೀಲರೊಂದಿಗೆ ಸಮಾಲೋಚಿಸಿ ಮುಂದಿನ ಕಾನೂನು ಹೋರಾಟದ ಬಗ್ಗೆ ತೀರ್ಮಾನ ಮಾಡುತ್ತೇನೆ ಎಂದರು.

ಜನಪ್ರತಿನಿಧಿಗಳ ನ್ಯಾಯಾಲಯದಲ್ಲಿ ಮೂರು ದಿನಕ್ಕೆ, ವಾರಕ್ಕೊಮ್ಮೆ ವಿಚಾರಣೆ ನಡೆಯುವುದರಿಂದ ಬೇಗ ತೀರ್ಪು ಪ್ರಕಟವಾಗುತ್ತದೆ. ಈ ಮೂಲಕ ಶೀಘ್ರ ನ್ಯಾಯ ದೊರೆಯಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಜನಪ್ರತಿನಿಧಿಗಳ ನ್ಯಾಯಾಲಯದಲ್ಲಿ ವಕೀಲರ ನೆರವು ಇಲ್ಲದೆ ನಾನೇ ವಾದ ಮಾಡುತ್ತೇನೆ ಎಂದು ಸ್ನೇಹಮಯಿ ಕೃಷ್ಣ ತಿಳಿಸಿದ್ದಾರೆ.

## ಗ್ರಾಹಕರ ತೀವ್ರ ವಿರೋಧ

ಏನೆಲ್ಲಾ ತೊಂದರೆ ಆಗುತ್ತದೆ ಎಂದು ಪ್ರತಿಯೊಬ್ಬರು ಕೆಇಆರ್‌ಸಿಗೆ ಮನದಟ್ಟು ಮಾಡಿದರು. ಒಂದು ಹೆಚ್ ಪಿ ಗೆ 40 ರೂಪಾಯಿ ಹಾಗೂ ಒಂದು ಯೂನಿಟ್‌ಗೆ 10 ಪೈಸೆ ಹೆಚ್ಚಳ ಮಾಡಬೇಕು. 100 ಯೂನಿಟ್ ಒಳಗಿನ ಸಣ್ಣ ಕೈಗಾರಿಕೆಗಳಿಗೆ ಪ್ರಸ್ತುತ 140 ರೂ. ಇದ್ದು, ಇದನ್ನು 180 ರೂಪಾಯಿಗೆ ಹೆಚ್ಚಳ ಮಾಡುವಂತೆ ಚೆಸ್ಕಾಂ ಕೆಇಆರ್‌ಸಿಗೆ ಪ್ರಸ್ತಾವನೆ ಸಲ್ಲಿಸಿದೆ.

ಮನೆಗಳ ವಿದ್ಯುತ್ ಬಳಕೆಯಲ್ಲಿ 50 ಯೂನಿಟ್ ಒಳಗೆ ಈಗ ಇರುವ 120 ರೂಪಾಯಿಯನ್ನು 145 ರೂಪಾಯಿವರೆಗೆ ಹೆಚ್ಚಳ ಮಾಡಬೇಕು. 50 ಯೂನಿಟ್‌ನಿಂದ 100 ಯೂನಿಟ್ ಒಳಗೆ 210 ರಿಂದ 235 ರೂಪಾಯಿ ಏರಿಕೆ ಮಾಡಬೇಕು ಎಂದು ಚೆಸ್ಕಾಂ ಕೆಇಆರ್‌ಸಿ ಮುಂದೆ ಪ್ರಸ್ತಾವನೆ ಇಟ್ಟಿದೆ.

ಆದರೆ ಚೆಸ್ಕಾಂ ಪ್ರಸ್ತಾವನೆಗೆ ಪ್ರತಿಯೊಬ್ಬರು ತೀವ್ರ ವಿರೋಧ ವ್ಯಕ್ತಪಡಿಸಿದರು. ಒಂದು ಮನೆಯಲ್ಲಿ ಕನಿಷ್ಟ ಎರಡು ಹೆಚ್ ಪಿ ವಿದ್ಯುತ್ ಸಂಪರ್ಕ ಇರುತ್ತದೆ. ಕೆಇಆರ್‌ಸಿಗೆ ಚೆಸ್ಕಾಂ ಬೇಡಿಕೆ ಸಲ್ಲಿಸಿರುವಂತೆ ಒಂದು ಹೆಚ್‌ಪಿಗೆ 40 ರೂಪಾಯಿ ಹೆಚ್ಚಳ ಮಾಡಿದರೆ ಗ್ರಾಹಕ ಹೆಚ್ಚುವರಿಯಾಗಿ 80 ರೂಪಾಯಿ ಹೆಚ್ಚುವರಿಯಾಗಿ ನೀಡಬೇಕಿದೆ. ಎರಡು ಹೆಚ್‌ಪಿಗೆ 80 ರೂಪಾಯಿ ಹಾಗೂ ಒಂದು ಯೂನಿಟ್‌ಗೆ 10 ಪೈಸೆ ನೀಡಿದರೆ ಪ್ರತಿ ಮನೆಯ ಗ್ರಾಹಕನಿಗೆ ಹೆಚ್ಚುವರಿಯಾಗಿ 150 ರೂಪಾಯಿಗೂ ಹೆಚ್ಚು ಹೊರೆ ಹೊರಬೇಕು ಎಂದು ಮೈಸೂರು ಕೈಗಾರಿಕೆಗಳ ಸಂಘದ ಪ್ರಧಾನ ಕಾರ್ಯದರ್ಶಿ ಸುರೇಶ್ ಕುಮಾರ್ ಜೈನ್ ಸೇರಿದಂತೆ ಹಲವರು ಆಕ್ಷೇಪಿಸಿದರು.

ಈಗಾಗಲೇ ಅಗತ್ಯ ವಸ್ತುಗಳ ಬೆಲೆ ಹೆಚ್ಚಳವಾಗಿದೆ. ಕೈಗಾರಿಕೆಗಳ ಕಚ್ಚಾ ವಸ್ತುಗಳ ಬೆಲೆ ಏರಿಕೆಯಾಗಿದೆ. ಇಂತಹ ಸಂದರ್ಭದಲ್ಲಿ ಗ್ರಾಹಕರು ಬಳಸುವ ವಿದ್ಯುತ್ ಸೇರಿದಂತೆ ಕೈಗಾರಿಕೆಗಳ ವಾಣಿಜ್ಯ ಬಳಕೆಯ ವಿದ್ಯುತ್ ದರ ಏರಿಕೆ ಮಾಡಿದರೆ ಮತ್ತಷ್ಟು ಆರ್ಥಿಕ ಸಂಕಷ್ಟಕ್ಕೆ ಸಿಲುಕಬೇಕಾಗುತ್ತದೆ ಎಂದು ವಾಸ್ತವತೆ ತಿಳಿಸಿದರು.

ಸ್ಮಶಾನಗಳಲ್ಲಿ ವಿದ್ಯುತ್ ಚಿತಾಗಾರಕ್ಕೆ ಬಳಸುವ ವಿದ್ಯುತ್, ಸ್ವಿಮಿಂಗ್ ಪೂಲ್, ಹಂದಿ ಸಾಕಾಣಿಕೆ, ಮೈಸೂರು ಅರಮನೆ ವಿದ್ಯುದ್ದೀಕರಣವನ್ನು ಕೈಗಾರಿಕಾ ವಲಯಕ್ಕೆ ಸೇರಿಸಲಾಗಿದೆ. ಕೈಗಾರಿಕಾ ವಲಯದಿಂದ ಇವುಗಳನ್ನು ಪ್ರತ್ಯೇಕಗೊಳಿಸಿದರೆ ವಿದ್ಯುತ್ ಹೊರೆ ಕಡಿಮೆಯಾಗುತ್ತದೆ ಎಂದು ಹೇಳಿದರು.

ಮೈಸೂರಿನ ಕೈಗಾರಿಕಾ ಪ್ರದೇಶ ಹಾಗೂ ತಾಂಡ್ಯ ಕೈಗಾರಿಕಾ ಪ್ರದೇಶವನ್ನು ಕೈಗಾರಿಕಾ ಪಟ್ಟಣ ಪಂಚಾಯಿತಿಗೆ ಸೇರಿಸಲಾಗಿದೆ. ಇದರಿಂದ ಸಣ್ಣ ಕೈಗಾರಿಕೆಗಳಿಗೆ ಪ್ರತಿ ಯೂನಿಟ್‌ಗೆ ಸಿಗುವ 30 ಪೈಸೆ ರಿಯಾಯಿತಿ ರದ್ದಾಗುತ್ತದೆ. ಆದ ಕಾರಣ ಪಟ್ಟಣ ಪಂಚಾಯಿತಿಗೆ ಸೇರಿಸಿದ್ದರೂ ರಿಯಾಯಿತಿ ಮುಂದುವರೆಸಬೇಕು ಎಂದು ಒತ್ತಾಯಿಸಿದರು.

ಈ ಭಾಗದಲ್ಲಿ 40 ಸಾವಿರ ರೈತರ ಕೃಷಿ ಪಂಪ್ ಸೆಟ್‌ಗಳಿದ್ದು, ನಷ್ಟವಾಗಲಿ ಅಥವಾ ಆದಾಯ ಬರಲಿ ರೈತರು ಚೆಸ್ಕಾಂಗೆ 100 ಕೋಟಿ ಆದಾಯ ನೀಡುತ್ತಾರೆ. ಆದರೆ ಚೆಸ್ಕಾಂ ರೈತರ ನೆರವಿಗೆ ಬರುತ್ತಿಲ್ಲ. ಮೈಸೂರಿನ ಖಾಸಗಿ ಬಡಾವಣೆಗಲ್ಲಿ ವಿದ್ಯುತ್ ಸಂಪರ್ಕಕ್ಕೆ ಚೆಸ್ಕಾಂ ನಯಾ ಪೈಸೆ ಖರ್ಚು ಮಾಡಿಲ್ಲ. ಗೃಹ ನಿರ್ಮಾಣ ಸಹಕಾರ ಸಂಘಗಳೇ ಈ ಸೌಕರ್ಯ ಕಲ್ಪಿಸಿಕೊಂಡಿವೆ. ಆದರೂ ಚೆಸ್ಕಾಂ ಅಭಿವೃದ್ಧಿ ಶುಲ್ಕ ವಸೂಲಿ ಮಾಡುತ್ತಿವೆ ಎಂದು ರೈತ ನವೀನ್ ರಾಜೇ ಅರಸ್ ಆರೋಪ ಮಾಡಿದರು.

ಶಿಕ್ಷಣ ಸಂಸ್ಥೆಗಳಲ್ಲಿ ಸ್ಥಿರ ಠೇವಣಿಯನ್ನು 210 ರಿಂದ 250 ರೂಪಾಯಿ ಹೆಚ್ಚಳ ಮಾಡಲಾಗಿದ್ದು, ಇದನ್ನು ರದ್ದು ಮಾಡಬೇಕು ಎಂದು ಬಾಬು ರಾಜೇಂದ್ರ ಪ್ರಸಾದ್ ತಿಳಿಸಿದರು. ವಿದ್ಯುತ್ ಗುತ್ತಿಗೆದಾರರ ಸಂಘದ ರಮೇಶ್ ಮಾತನಾಡಿ, ಚೆಸ್ಕಾಂ ಸೇರಿದಂತೆ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳು ಕೋಟ್ಯಾಂತರ ರೂಪಾಯಿ ನೀಡಿ ಸಾಫ್ಟ್‌ವೇರ್ ಅಳವಡಿಸಿದೆ. ಆದರೆ ಕೆಲವೇ ತಿಂಗಳಲ್ಲಿ ಅದರಲ್ಲಿ ತಾಂತ್ರಿಕ ತೊಂದರೆ ಎದು ರಾಯಿತು. ತರುವಾಯ ಮತ್ತೊಂದು ಹೊಸ ಸಾಫ್ಟ್‌ವೇರ್ ಅಳವಡಿಸಲಾಯಿತು. ಇದರ ಹೊರೆ ಎಲ್ಲರೂ ಹೊರ ಬೇಕಾಗಿದೆ ಎಂದು ಆಪಾದಿಸಿದರು.

## ಇದೊಂದು ತನಿಖೆ ಅಂತಾ ಕರೀಬೇಕಾ!

ಮೇಲಾಧಿಕಾರಿಗಳು ಕ್ಲಿಯರ್ ಮಾಡಿದ ಮೇಲೆ ಇವರು ಲೋಕಾಯುಕ್ತಗೆ ವರದಿ ಕೊಡುತ್ತಾರೆ ಅಂತೆ. ಹೇಗೆ ತನಿಖೆ ಆಗಿದೆ ಅಂತ ಮೇಲಾಧಿಕಾರಿಗೆ ತೋರಿಸಿಕೊಂಡು ಮೇಲಾಧಿಕಾರಿ ಗ್ರೀನ್ ಸಿಗ್ನಲ್ ಕೊಟ್ಟ ಮೇಲೆ ವರದಿ ಕೊಡೋದಾ ಎಂದು ಪ್ರಶ್ನೆ ಮಾಡಿದರು.

ಮುಖ್ಯಮಂತ್ರಿ ವಿರುದ್ಧ ಅವರ ಕೈಕೆಳಗೆ ಕೆಲಸ ಮಾಡೋ ಅಧಿಕಾರಿಗಳು ವರದಿ ಕೊಡುತ್ತಾರಾ? ವಾಸ್ತವಾಂಶ ಏನಾಗಿದೆ ಎಂದು ಸಿದ್ದರಾಮಯ್ಯ ವಿರುದ್ಧ ದಾಖಲೆಗಳು ಚೆಲ್ಲಾಡುತ್ತಿವೆ. ಲೋಕಾಯುಕ್ತದವರು ಮಾಡಿರುವುದು ಒಂದು ತನಿಖೆನಾ? ಸಿದ್ದರಾಮಯ್ಯ ವಿರುದ್ಧ ಅವರ ವರದಿ ಕೊಡುತ್ತಾರಾ ಎಂದು ಪರೋಕ್ಷವಾಗಿ ಮುಡಾ ಕೇಸ್‌ನಲ್ಲಿ ಸಿದ್ದರಾಮಯ್ಯಗೆ ಕ್ಲೀನ್‌ಚಿಟ್ ಕೊಡುತ್ತಾರೆ ಎಂದು ಆರೋಪ ಮಾಡಿದರು.

## ದೆಹಲಿಯ ನೂತನ ಮುಖ್ಯಮಂತ್ರಿ

ಶೀಲಾ ದೀಕ್ಷಿತ್ ಹಾಗೂ ಎಎಪಿಯಿಂದ ಆತಿಶಿ ದೆಹಲಿಯ ಮುಖ್ಯಮಂತ್ರಿಗಳಾಗಿದ್ದರು. ಇದೀಗ ರೇಖಾ ಗುಪ್ತಾ ಈ ಸ್ಥಾನ ಅಲಂಕರಿಸಲಿದ್ದು, ರಾಜಧಾನಿಯಲ್ಲಿ ಮಹಿಳೆಯರ ದರ್ಬಾರ್ ಮುಂದುವರಿಯಲಿದೆ. ದೆಹಲಿಯ ಐತಿಹಾಸಿಕ ರಾಮಲೀಲಾ ಮೈದಾನದಲ್ಲಿ ನಾಳೆ (ಫೆ.20) ನೂತನ ಮುಖ್ಯಮಂತ್ರಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ. ಅಂದು ಸಂಜೆ 4.30ರ ಸುಮಾರಿಗೆ ನಡೆಯಲಿರುವ ಕಾರ್ಯಕ್ರಮದಲ್ಲಿ ಬಿಜೆಪಿ ಆಡಳಿತವಿರುವ ರಾಜ್ಯಗಳ ಮುಖ್ಯಮಂತ್ರಿಗಳು ಸೇರಿದಂತೆ ಹಿರಿಯ ಬಿಜೆಪಿ ನಾಯಕರು ಭಾಗವಹಿಸುವ ನಿರೀಕ್ಷೆಯಿದೆ.

## ಗಾಂಜಾ ಸೇವಿಸುತ್ತಿದ್ದ ಯುವಕರ ಬಂಧನ

ಮೈಸೂರು,ಫೆ19(ಪಿಎಂ)– ಸ್ಮಶಾನದಲ್ಲಿ ಗಾಂಜಾ ಸೇವಿಸುತ್ತಿದ್ದ ಮೂವರು ಯುವಕರನ್ನು ಬಂಧಿಸಿರುವ ಮೇಟಗಳ್ಳಿ ಪೊಲೀಸರು, ಅವರಿಂದ 13.49 ಗ್ರಾಂ ಗಾಂಜಾ ಮತ್ತು ಬೈಕ್ ಅನ್ನು ವಶಪಡಿಸಿಕೊಂಡಿದ್ದಾರೆ. ಮೇಟಗಳ್ಳಿಯ ಶ್ರವಂತ್ (18), ಬಿಎಂಶ್ರೀನಗರದ ಆಕಾಶ್ (18) ಮತ್ತು ರವಿಕುಮಾರ್ (19) ಬಂಧಿತರು. ಪೇಂಟಿಂಗ್ ಹಾಗೂ ಕೂಲಿ ಕೆಲಸ ಮಾಡುವ ಈ ಯುವಕರು ಫೆ.17ರಂದು ಬೆಳಗ್ಗೆ 11ರ ಸಮಯದಲ್ಲಿ ಬಿಎಂಶ್ರೀ ನಗರ ಮುಖ್ಯ ರಸ್ತೆಯಲ್ಲಿ ಗಸ್ತಿನಲ್ಲಿದ್ದ ಪೊಲೀಸರ ಕೈಗೆ ಸಿಕ್ಕಿ ಬಿದ್ದಿದ್ದಾರೆ. ಮೇಟಗಳ್ಳಿ ಸ್ಮಶಾನದ ಹುಣಸೇ ಮರದ ಕೆಳಗೆ ಕುಳಿತು ಗಾಂಜಾ ಸೇವನೆ ಮಾಡುತ್ತಿದ್ದಾಗ ಇವರು ಪೊಲೀಸರಿಗೆ ಸಿಕ್ಕಿ ಹಾಕಿಕೊಂಡಿದ್ದಾರೆ.

## ಸಾಲ ಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡ ಒಂದೇ ಕುಟುಂಬದ ನಾಲ್ವರ ಅಂತ್ಯಕ್ರಿಯೆ

ಮೈಸೂರು, ಫೆ. 19(ಬಿಎಲ್‌ಯು)– ಮೈಸೂರಿನ ವಿಶ್ವೇಶ್ವರನಗರ ಅಪಾರ್ಟ್‌ಮೆಂಟ್‌ನಲ್ಲಿ ಸಾಲ ಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡ ನಾಲ್ವರ ಅಂತ್ಯಕ್ರಿಯೆ ನೆರವೇರಿಸಲಾಗಿದೆ.

ಮೈಸೂರಿನ ವಿಶ್ವೇಶ್ವರನಗರದ ಅಪಾರ್ಟ್‌ಮೆಂಟ್‌ನಲ್ಲಿ ಲೇಬರ್ ಏಜೆಂಟ್ ಚೇತನ್, ಪತ್ನಿ ರೂಪಾಲಿ, ಮಗ ಕುಶಾಲ್ ಹಾಗೂ ತಾಯಿ ಪ್ರಿಯಂವಧಾ ಅವರನ್ನು ಕೊಲೆ ಮಾಡಿ, ತಾನು ನೇಣಿಗೆ ಶರಣಾಗಿದ್ದರು.

ಚೇತನ್ ಸಹೋದರ ಅಮೇರಿಕಾದಿಂದ ಬರಬೇಕಾಗಿದ್ದ ಕಾರಣ ಮರಣೋತ್ತರ ಪರೀಕ್ಷೆ ನಡೆಯದೆ, ಕೆ.ಆರ್. ಆಸ್ಪತ್ರೆಯ ಶವಾಗಾರದಲ್ಲಿ ದೇಹಗಳ ಇಡಲಾಗಿತ್ತು. ಅಮೇರಿಕಾದಿಂದ ಭರತ್ ಮೈಸೂರಿಗೆ ಬಂದ ನಂತರ ಮರಣೋತ್ತರ ಪರೀಕ್ಷೆ ನೆರವೇರಿಸಲಾಯಿತು.

ಅಣ್ಣ ಚೇತನ್ ಹಾಗೂ ತಾಯಿ ಪ್ರಿಯಂವಧ ಅವರ ದೇಹವನ್ನು ಭರತ್‌ಗೆ ಹಾಗೂ ರೂಪಾಲಿ ಮತ್ತು ಕುಶಾಲ್ ಅವರ ದೇಹವನ್ನು ರೂಪಾಲಿ ತಂದೆ ಸೇತು ರಾಮನ್ ಅವರಿಗೆ ಪೊಲೀಸರು ಹಸ್ತಾಂತರಿಸಿದ್ದಾರೆ. ನಿನ್ನೆ ಸಂಜೆ ನಾಲ್ವರ ಅಂತ್ಯಕ್ರಿಯೆ ನೆರವೇರಿಸಲಾಗಿದೆ.

ಅಪಾರ್ಟ್‌ಮೆಂಟ್‌ನಲ್ಲಿರುವ ಎರಡು ಫ್ಲಾಟ್, ಕಾರು ಹಾಗೂ ಜೀಪಿನ ಮೇಲೆ ಬ್ಯಾಂಕ್ ಸಾಲವಿತ್ತು. ಈ ನಾಲ್ವರ ಸಾವಿಗೆ ಸಾಲವೇ ಕಾರಣವಾಗಿದೆ. ಆದರೂ ಚೇತನ್ ಬರೆದಿರುವ ಡೆತ್‌ನೋಟ್ ಆಧರಿಸಿ ಕೃಷ್ಣರಾಜ ಎಸಿಪಿ ರಮೇಶ್ ಕುಮಾರ್ ಅವರು ತನಿಖೆ ನಡೆಸುತ್ತಿದ್ದಾರೆ.

### ಬೆಟ್ಟಿಂಗ್‌ನಿಂದ ಸಾಲ ಮಾಡಿ ಆತ್ಮಹತ್ಯೆಗೆ ಶರಣಾದ ಮೂವರ ಅಂತ್ಯಸಂಸ್ಕಾರ

ಕ್ರಿಕೆಟ್ ಸೇರಿದಂತೆ ನಾನಾ ಆನ್‌ಲೈನ್ ಬೆಟ್ಟಿಂಗ್‌ನಿಂದ ಸಾಲದ ಶೂಲಕ್ಕೆ ಸಿಲುಕಿ ಆತ್ಮಹತ್ಯೆ ಮಾಡಿಕೊಂಡಿದ್ದ ಯರಗನಹಳ್ಳಿ ಹಾಗೂ ವಿದ್ಯಾನಗರದ ಮೂವರ ಅಂತ್ಯಕ್ರಿಯೆ ನಿನ್ನೆ ನೆರವೇರಿದೆ. ಜೂಜಾಟಕ್ಕೆ ಮಾಡಿದ ಸಾಲತೀರಿಸಲಾಗದೆ ಜೋಶಿ ಆಂಟೋನಿ, ಜೋಬಿ ಆಂಟೋನಿ ಹಾಗೂ ಶರ್ಮಿಳಾ ಅವರ ಅಂತ್ಯ ಕ್ರಿಯೆಯನ್ನು ಚಾಮುಂಡಿ ಬೆಟ್ಟದ ತಪ್ಪಲಿನ ವಿದ್ಯುತ್ ಚಿತಾಗಾರದಲ್ಲಿ ನೆರವೇರಿಸಲಾಗಿದೆ.

## ಪಾಕಿಸ್ತಾನಕ್ಕೆ ರಕ್ಷಣಾ ಮಾಹಿತಿ ಸೋರಿಕೆ: ಕಾರವಾರದಲ್ಲಿ ಇಬ್ಬರು ಸೇರಿ ಮೂವರ ಬಂಧನ

**ನವದೆಹಲಿ:** ಪಾಕಿಸ್ತಾನ ಮೂಲದ



ಗುಪ್ತಚರ ಅಧಿಕಾರಿಗಳಿಗೆ ರಕ್ಷಣಾ ಇಲಾಖೆಗೆ ಸಂಬಂಧಿಸಿದ ಸೂಕ್ಷ್ಮ ಮಾಹಿತಿಯನ್ನು ಸೋರಿಕೆ ಮಾಡಿದ ಆರೋಪದ ಮೇಲೆ ಮೂವರನ್ನು ಎನ್‌ಐಎ ಬಂಧಿಸಿದೆ. ಕಾರವಾರ ನೌಕಾನೆಲೆ ಮತ್ತು ಕೊಚ್ಚಿ ನೌಕಾನೆಲೆಯಲ್ಲಿರುವ ಭಾರತೀಯ ರಕ್ಷಣಾ ಸಂಸ್ಥೆಗಳ ಬಗ್ಗೆ ಸೂಕ್ಷ್ಮ ಮಾಹಿತಿಯನ್ನು ಬಂಧಿತ ಆರೋಪಿಗಳು ಹಂಚಿಕೊಳ್ಳುತ್ತಿದ್ದರು ಎಂದು ರಾಷ್ಟ್ರೀಯ ತನಿಖಾ ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ.

ವೇತನ್ ಲಕ್ಷ್ಮಣ್ ತಂಡೇಲ್ ಮತ್ತು ಅಕ್ಷಯ್ ರವಿನಾಯಕ್ ಅವರನ್ನು ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯಲ್ಲಿ ಬಂಧಿಸಲಾಗಿದ್ದರೆ, ಅಭಿಲಾಷ್ ಪಿಎ ಅವರನ್ನು ಕೇರಳದ ಕೊಚ್ಚಿಯಿಂದ ಬಂಧಿಸಲಾಗಿದೆ ಎಂದು ಎನ್‌ಐಎ ತಿಳಿಸಿದೆ.

ಎನ್‌ಐಎ ತನಿಖೆಯ ಪ್ರಕಾರ ಕಾರವಾರ ನೌಕಾನೆಲೆ ಮತ್ತು ಕೊಚ್ಚಿ ನೌಕಾನೆಲೆಯಲ್ಲಿರುವ ಭಾರತೀಯ ರಕ್ಷಣಾ ಸಂಸ್ಥೆಗಳ ಬಗ್ಗೆ ಸೂಕ್ಷ್ಮ ಮಾಹಿತಿಯನ್ನು ಆರೋಪಿಗಳು ಹಂಚಿಕೊಳ್ಳುತ್ತಿದ್ದರು ಮತ್ತು ಈ ಮಾಹಿತಿಗಾಗಿ ಅವರು ಪಿಐಒಗಳಿಂದ ಹಣ ಪಡೆಯುತ್ತಿದ್ದರು.

# ಪೊಲೀಸ್ ತರಬೇತಿ ಪಡೆಯುತ್ತಿರುವ ಹೆಣ್ಣು ಮಕ್ಕಳು ಕಿತ್ತೂರು ರಾಣಿ ಚೆನ್ನಮ್ಮ, ರಾಣಿ ಅಬ್ಬಕ್ಕ, ಒನಕೆ ಓಬವ್ವರಂತೆ ಸಿದ್ಧರಾಗಿ

### ಮಹಿಳಾ ಪೊಲೀಸ್ ಕಾನ್ಸ್‌ಟೇಬಲ್ ಪ್ರಶಿಕ್ಷಣಾರ್ಥಿಗಳ ಬುನಾದಿ ತರಬೇತಿ ಶಿಬಿರದಲ್ಲಿ ಪೊಲೀಸ್ ತರಬೇತಿ ವಿಭಾಗದ ಎಡಿಜಿಪಿ ಅಲೋಕ್‌ಕುಮಾರ್ ಕರೆ

ಮೈಸೂರು, ಫೆ.19(ಜಿಎ)–ಪೊಲೀಸ್ ತರಬೇತಿ ಪಡೆಯುತ್ತಿರುವ ಹೆಣ್ಣು ಮಕ್ಕಳು ಕಿತ್ತೂರು ರಾಣಿ ಚೆನ್ನಮ್ಮ, ರಾಣಿ ಅಬ್ಬಕ್ಕ, ಒನಕೆ ಓಬವ್ವ, ಬೆಳವಾಡಿ ಮಲ್ಲಮ್ಮನವರಂತೆ ಸಿದ್ಧರಾಗಬೇಕು ಎಂದು ಮಹಿಳಾ ಪೊಲೀಸ್ ಕಾನ್ಸ್‌ಟೇಬಲ್ ಪ್ರಶಿಕ್ಷಣಾರ್ಥಿಗಳಿಗೆ ರಾಜ್ಯ ಪೊಲೀಸ್ ತರಬೇತಿ ವಿಭಾಗದ ಎಡಿಜಿಪಿ ಅಲೋಕ್ ಕುಮಾರ್ ಕರೆ ನೀಡಿದರು.

ಮೈಸೂರಿನ ಜ್ಯೋತಿನಗರದಲ್ಲಿರುವ ಮಹಿಳಾ ಪೊಲೀಸ್ ತರಬೇತಿ ಶಾಲೆಯಲ್ಲಿ ಬುಧವಾರ ಆಯೋಜಿಸಲಾಗಿದ್ದ 9ನೇ ತಂಡದ ಮಹಿಳಾ ಪೊಲೀಸ್ ಕಾನ್ಸ್‌ಟೇಬಲ್ ಪ್ರಶಿಕ್ಷಣಾರ್ಥಿಗಳ ಬುನಾದಿ ತರಬೇತಿ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ನಿಮ್ಮ ಕನಸು ಬೇರೆ ಇರಬಹುದು. ಆದರೆ, ಇಂದು ಖಾಕಿ ಬಟ್ಟೆ ಹಾಕಿದ್ದೀರಿ, ಇದು ನಿಮ್ಮ ಸುದೈವ ಎಂದರು.

ಹೆಣ್ಣು ಮಕ್ಕಳು ಎನ್ನುವ ವಿಷಯವನ್ನು ನಿಮ್ಮ ಮನಸ್ಸಿನಿಂದ ತೆಗೆದುಹಾಕಿ ಪುರುಷರಿಗಿಂತ ನಾವು ಕಮ್ಮಿ ಇಲ್ಲ ಎಂದು ನಿಮ್ಮನ್ನು ಸದೃಢಗೊಳಿಸಿಕೊಳ್ಳಿ. ಖಾಕಿ ಬಟ್ಟೆ



ಮೈಸೂರಿನ ಜ್ಯೋತಿನಗರದಲ್ಲಿರುವ ಮಹಿಳಾ ಪೊಲೀಸ್ ತರಬೇತಿ ಶಾಲೆಯಲ್ಲಿ ಬುಧವಾರ ಆಯೋಜಿಸಲಾಗಿದ್ದ 9ನೇ ತಂಡದ ಮಹಿಳಾ ಪೊಲೀಸ್ ಕಾನ್ಸ್‌ಟೇಬಲ್ ಪ್ರಶಿಕ್ಷಣಾರ್ಥಿಗಳ ಬುನಾದಿ ತರಬೇತಿ ಶಿಬಿರ ಉದ್ಘಾಟಿಸಿ, ರಾಜ್ಯ ಪೊಲೀಸ್ ತರಬೇತಿ ವಿಭಾಗದ ಎಡಿಜಿಪಿ ಅಲೋಕ್‌ಕುಮಾರ್ ಮಾತನಾಡಿದರು.

ಹಾಕಿದ ನಂತರ ನಮ್ಮ ವೃತ್ತಿಗೆ ಆದ್ಯತೆ ಕೊಡಬೇಕು. ಕೆಲವೊಮ್ಮೆ ಹೊಂದಾಣಿಕೆ ಅನಿವಾರ್ಯ, ಆ ವೇಳೆ ತಾನು ಹೆಣ್ಣು ಎಂಬ ಮನೋಭಾವ ಬದಲಿಸಿಕೊಳ್ಳಿ. ನಮ್ಮ ಹೆಣ್ಣು ಮಕ್ಕಳಿಗೆ ಇರುವ ತಾಕತ್ತು ಪ್ರದರ್ಶನ ಆಗಬೇಕು ಎಂದರು.

ಸಾರ್ವಜನಿಕರ ಸೇವೆಗಾಗಿಯೇ ಪೊಲೀಸ್ ಇಲಾಖೆ ಇರುವುದು. ಅವರೊಂದಿಗೆ ನಮ್ಮ ವರ್ತನೆ ಶಿಸ್ತುಬದ್ಧವಾಗಿರಬೇಕು. ಜನಸ್ನೇಹಿ ಪೊಲೀಸ್ ವ್ಯವಸ್ಥೆ ಬರಬೇಕು. ಹೆಣ್ಣು ಮಕ್ಕಳಿಗೆ ಹೆಣ್ಣುಮಕ್ಕಳ ಬಗ್ಗೆ ಸ್ಪಂದನೆ ಇರಬೇಕು, ಅನ್ಯಾಯ ಆಗಬಾರದು. ಸೇವಾ ಮನೋಭಾವ ಹೊಂದಬೇಕು. ಸ್ವಯಂ ಶಿಸ್ತು ಇರಬೇಕು. ಜೊತೆಗೆ ಕೌಟುಂಬಿಕ ಸಮಸ್ಯೆಗಳು ಇದ್ದರೆ ಅವುಗಳನ್ನು ಸರಿಪಡಿಸಿಕೊಳ್ಳಿ. ಹಾಗೇ ಕುಟುಂಬಸ್ಥರಿಗೂ ಸಮಯ ನೀಡಿ. ವೃತ್ತಿ ಕುಟುಂಬದ ನಡುವೆ ಸಮನ್ವಯತೆ ಕಾಪಾಡಿಕೊಳ್ಳಿ ಎಂದು ಸಲಹೆ ನೀಡಿದರು.

ತೆಲಂಗಾಣ, ಆಂಧ್ರಪ್ರದೇಶ ಸೇರಿದಂತೆ ಇತರೆ ರಾಜ್ಯದಲ್ಲಿ ಪ್ರಶಿಕ್ಷಣಾರ್ಥಿಗಳಿಗೆ ಮಾಸಿಕ ಕೇವಲ 5 ಸಾವಿರ ತರಬೇತಿ ಭತ್ಯೆ ನೀಡಲಾಗುತ್ತಿದೆ. ಕರ್ನಾಟಕ ಸರ್ಕಾರ ನಿಮಗೆ 45,000 ರೂ. ನೀಡುತ್ತಿದೆ. ಅದಕ್ಕಾಗಿ ನೀವು ಈ ನೆಲಕ್ಕೆ ಬದ್ಧರಾಗಿರಬೇಕು. ಬಂದ ಹಣವನ್ನು ದುರುಪಯೋಗ ಮಾಡದೆ, ಉಳಿತಾಯದೊಟ್ಟಿಗೆ ಚೆನ್ನಾಗಿ ತಿಂದುಂಡು ಆರೋಗ್ಯವನ್ನೂ ಕಾಪಾಡಿಕೊಳ್ಳಿ ಎಂದ ಅವರು, ಪ್ರಶಿಕ್ಷಣಾರ್ಥಿಗಳಿಗೆ ವಾರಕ್ಕೆ 2 ಬಾರಿ ಚಿಕನ್ ನೀಡಿ ಎಂದು ಶಾಲೆಯ ಪ್ರಾಂಶುಪಾಲೆ ಗೀತಾ ಅವರಿಗೆ ತಿಳಿಸಿ, ಕ್ರೀಡಾಪಟುಗಳು ತಮ್ಮ ಚಟುವಟಿಕೆ ಮುಂದುವರೆಸಿ ಎಂದರು.

ಸೈಬರ್ ಕ್ರೈಮ್ ಪ್ರಮಾಣ ರಾಜ್ಯದಲ್ಲಿ ಶೇ.10 ಇದ್ದರೆ, ಬೆಂಗಳೂರಿನಲ್ಲಿ ಶೇ.30 ರಷ್ಟು ಪ್ರಮಾಣದಲ್ಲಿ ಸೈಬರ್ ಕ್ರೈಮ್ ಆಗುತ್ತಿದೆ. ಆ ನಿಟ್ಟಿನಲ್ಲಿ ಹೆಚ್ಚಿನ ತರಬೇತಿ ಪಡೆಯಲು ಗಮನ ಕೊಡಿ. ಸರಗಳ್ಳತನ, ದರೋಡೆ ಇತ್ತೀಚಿಗೆ ಕಡಿಮೆ ಆಗುತ್ತಿದ್ದು, ಸೈಬರ್ ಅಪರಾಧ ಹೆಚ್ಚಾಗುತ್ತಿರುವುದರಿಂದ ಅದರ ಬಗ್ಗೆ ತಿಳಿದುಕೊಳ್ಳಬೇಕು. ಅದರೊಂದಿಗೆ ವಿಧಿವಿಜ್ಞಾನ ವಿಷಯವೂ ಕೂಡ ಇಂದು ಆದ್ಯತೆಯ ವಿಷಯವಾಗಿದ್ದು, ಆ ಬಗ್ಗೆ ಕೂಡ ಅರಿವು ಅಗತ್ಯ. ಪುಸ್ತಕದ ವಿಷಯ ಮಾತ್ರವಲ್ಲದೆ, ಇಂಟರ್‌ಯಾಕ್ಟೀವ್ ತರಬೇತಿ ಇರಲಿ. ಬೋಧನಾ ಪ್ರಕ್ರಿಯೆ ಬದಲಾಗಬೇಕು, ಪೊಲೀಸ್ ಲೀಡರ್ ಶಿಪ್ ಬಗ್ಗೆ ಒತ್ತು ನೀಡಿ ಎಂದರು.

ಅನಿವಾರ್ಯ ಪರಿಸ್ಥಿತಿಯಲ್ಲಿ ಗುಂಪು ನಿಯಂತ್ರಣದ ಬಗ್ಗೆ ಅರಿವಿರಬೇಕು. ಪೊಲೀಸರಿಗೆ ಧೈರ್ಯ ಕೂಡ ಮುಖ್ಯ, ಆ ಸಲುವಾಗಿಯೇ ಮೋಟಾರ್ ಸೈಕಲ್ ಓಡಿಸುವ ತರಬೇತಿ ಕೊಡಲಾಗುತ್ತಿದೆ. ಇದೇ ಮೊದಲ ಬಾರಿಗೆ ಪಿಸ್ತೂಲ್ ಫೈರಿಂಗ್ ಮೂಲಕ ತರಬೇತಿ ನೀಡಲಾಗುತ್ತಿದೆ. ಇದರಿಂದಾಗಿ ನಿಮ್ಮ ಸಾಮರ್ಥ್ಯ ಹೆಚ್ಚು ಮಾಡಿಕೊಳ್ಳಿ ಎಂದರು. ವೇದಿಕೆಯಲ್ಲಿ ಮಹಿಳಾ ಪೊಲೀಸ್ ತರಬೇತಿ ಶಾಲೆ ಪ್ರಾಂಶುಪಾಲೆ ಗೀತಾ, ಸೆಸ್ಕ್ ವಿಭಾಗದ ಪೊಲೀಸ್ ವರಿಷ್ಠಾಧಿಕಾರಿ ಸವಿತಾ ಹೂಗಾರ್ ಉಪಸ್ಥಿತರಿದ್ದರು.

### 259 ಮಂದಿ ಪ್ರಶಿಕ್ಷಣಾರ್ಥಿಗಳು

9ನೇ ಬುನಾದಿ ತರಬೇತಿಯಲ್ಲಿ 259 ಪ್ರಶಿಕ್ಷಣಾರ್ಥಿಗಳಿದ್ದು, ಗ್ರಾಮೀಣ ಭಾಗದವರೇ ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. 200 ಮಂದಿ ಗ್ರಾಮೀಣ ಪ್ರದೇಶದವರಾಗಿದ್ದರೆ, 59 ಮಂದಿ ನಗರ ವ್ಯಾಪ್ತಿಯವರಾಗಿದ್ದಾರೆ. ಆ ಪೈಕಿ ಅತಿ ಚಿಕ್ಕ ವಯಸ್ಸಿನ 21 ವರ್ಷದ ಒಬ್ಬರು ಹಾಗೂ ಗರಿಷ್ಠ 32 ವಯಸ್ಸಿನವರೆಗೆ ಆಯ್ಕೆಯಾಗಿದ್ದಾರೆ. ಒಟ್ಟು 259 ಪೈಕಿ 41 ಮಂದಿ ವಿವಾಹಿತರಾಗಿದ್ದರೆ, 218 ಮಂದಿ ಅವಿವಾಹಿತರು.

**ಬಹುತೇಕ ಪದವೀಧರರು:** ಬಿಇ ಪದವಿಯ 20, ಬಿಟೆಕ್ ಪದವಿಯ 1, ಬಿಕಾಂ 55, ಬಿಎ 50, ಬಿಎಸ್ಸಿ 68, ಬಿಎಬಿಇಡಿ 6, ಬಿಬಿಎಂ 2, ಬಿಸಿಎ 5, ಬಿಎಸ್ಸಿ ಬಿಇಡಿ 6, ಬಿಎಸ್‌ಡಬ್ಲ್ಯು 2, ಡಿಪ್ಲೊಮಾ 1, ಎಂಕಾಂ 11, ಎಂಕಾಂ ಬಿಇಡಿ 1, ಎಂಎ 6, ಎಂಎ ಬಿಇಡಿ 3, ಎಂಬಿಎ 3, ಎಂಎಸ್ಸಿ 8 ಹಾಗೂ 11 ಮಂದಿ ಪಿಯುಸಿ ವಿದ್ಯಾಭ್ಯಾಸ ಹೊಂದಿದ್ದಾರೆ.

# ಬೇಸಿಗೆ ಮುನ್ನವೇ ಬಿಸಿಲಿನ ತಾಪಕ್ಕೆ ತತ್ತರಿಸಿ ಹೋಗಿರುವ ಮೈಸೂರಿಗರು

### ಬಸವಳಿಯುತ್ತಿರುವ ಶ್ರಮಿಕ ವರ್ಗ

ಮೈಸೂರು,ಫೆ.19(ಪಿಎಂ)– ಬೇಸಿಗೆ ಮುನ್ನವೇ ಬಿಸಿಲಿನ ತಾಪಕ್ಕೆ ಮೈಸೂರಿಗರ ಮೊಗ ಬಾಡುವಂತಾಗಿದೆ. ಹೌದು, ನಗರದಲ್ಲಿ ಬಿಸಿಲಿನ ತಾಪವು ಕಾಡಲಾರಂಭಿಸಿದೆ. ಸಹಜವಾಗಿ ಮೈಸೂರಿನಲ್ಲಿ ಮಾರ್ಚ್ ಹಾಗೂ ಏಪ್ರಿಲ್‌ನಲ್ಲಿ ಬಿಸಿಲಿನ ತಾಪ ಹೆಚ್ಚಳವಾಗುವುದು ಪ್ರಾಕೃತಿಕ ವಾಡಿಕೆಯಾಗಿದೆ. ಆದರೆ ಈ ವರ್ಷ ಫೆಬ್ರವರಿಯಲ್ಲೇ ತಾಪಮಾನ ಹೆಚ್ಚಳಗೊಂಡು ಬೇಸಿಗೆ ಅನುಭವಕ್ಕೆ ಮೈಸೂರಿಗರು ಕಂಗಲಾಗಿದ್ದಾರೆ.

ಉತ್ತಮ ಹವಾಗುಣದ ಕಾರಣಕ್ಕೆ 'ನಿವೃತ್ತರ ಸ್ವರ್ಗ' ಎಂದೇ ಹೆಸರಾಗಿರುವ ಮೈಸೂರಿನಲ್ಲಿ ಬೇಸಿಗೆ ಆರಂಭಕ್ಕೂ ಮುನ್ನವೇ ಬಿಸಿಲಾಘಾತ ಜನರಲ್ಲಿ ಬೆವರಿಳಿಸುತ್ತಿದೆ. ಹೊರಾಂಗಣ ದುಡಿಮೆಯನ್ನೇ ನಂಬಿರುವ ಶ್ರಮಿಕ ವರ್ಗವು ಬಿಸಿಲಿನ ಝಳದಿಂದ ಬಸವಳಿಯುವಂತಾಗಿದೆ.

ಫೆ.14ರಂದು ಮೈಸೂರಿನಲ್ಲಿ ತಾಪಮಾನವು 34 ಡಿಗ್ರಿ ಸೆಲ್ಸಿಯಸ್ ಮೀರಿದೆ. ಇದು ಇತ್ತೀಚಿನ ವರ್ಷಗಳಲ್ಲಿ ಫೆಬ್ರವರಿಯಲ್ಲಿ ದಾಖಲಾದ ಅತ್ಯಧಿಕ ತಾಪಮಾನ ಎಂದು ವರದಿಯಾಗಿದೆ. ಈ ಮೊದಲು ಫೆಬ್ರವರಿಯಲ್ಲಿ ಸಾಮಾನ್ಯವಾಗಿ 30ರಿಂದ 31 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗುತ್ತಿತ್ತು. ಆದರೆ ಹವಾಮಾನ ವೈಪರಿತ್ಯದಿಂದ ಈ ಭಾರಿ ನಗರದಲ್ಲಿ ಬೇಸಿಗೆ ಮುನ್ನವೇ ಬಿಸಿಲಿನ ಕಾವು ಕಾಡಲಾರಂಭಿಸಿದೆ. ಫೆಬ್ರವರಿ ಆರಂಭವು ಚಳಿಗಾಲವೇ ಆಗಿದೆ. ಆದರೆ ಈ ಸಂದರ್ಭಕ್ಕಾಗಲೇ ಬಿಸಿಲಿನ ತಾಪ ಹೆಚ್ಚಳಗೊಂಡಿದೆ. ಗರಿಷ್ಠ ಉಷ್ಣಾಂಶ ಸರಾಸರಿ 34 ಡಿಗ್ರಿ ಸೆಲ್ಸಿಯಸ್‌ನಿಂದ 35 ಡಿಗ್ರಿ ಸೆಲ್ಸಿಯಸ್ ವರೆಗೆ ದಾಖಲಾಗುತ್ತಿದೆ. ಕನಿಷ್ಠ ಉಷ್ಣಾಂಶ 18 ಡಿಗ್ರಿ ಸೆಲ್ಸಿಯಸ್ ದಾಟಿರುವುದು ದಾಖಲಾಗುತ್ತಿದೆ. ಮಧ್ಯಾಹ್ನದ ವೇಳೆ ಜನರು ಮನೆಯಿಂದ ಹೊರಗೆ ಕಾಲಿಡಲು ನೆತ್ತಿ ಮೇಲಿರುವ ಸೂರ್ಯ ಭಯ ಹುಟ್ಟಿಸುವಂತಾಗಿದೆ.

**ಶೇ.3 ಡಿಗ್ರಿ ಸೆ. ಉಷ್ಣಾಂಶ ಹೆಚ್ಚು:** ನಗರದಲ್ಲಿ ಮಂಗಳವಾರ ಕನಿಷ್ಠ ಉಷ್ಣಾಂಶ 19 ಡಿಗ್ರಿ ಸೆ. ಇದ್ದರೆ, ಗರಿಷ್ಠ 33 ಡಿಗ್ರಿ ಸೆಲ್ಸಿಯಸ್‌ನಷ್ಟಿತ್ತು. ಹವಾಮಾನ ಇಲಾಖೆಯ ಮುನ್ಸೂಚನೆಯಂತೆ ಮುಂದಿನ ಕೆಲವು ದಿನಗಳಲ್ಲಿ ಈ ಪ್ರಮಾಣ 34 ಡಿಗ್ರಿ ದಾಟುವ ನಿರೀಕ್ಷೆ ಇದೆ. ಹಿಂದಿನ ವರ್ಷಗಳ ಈ ಅವಧಿಯಲ್ಲಿನ ಮಾಹಿತಿಯನ್ನು ಪರಿಗಣಿಸಿದರೆ, ವಾಡಿಕೆಗಿಂತಲೂ ಸರಾಸರಿ ಶೇ.3 ಡಿಗ್ರಿ ಸೆಲ್ಸಿಯಸ್ ಹೆಚ್ಚಿನ ಉಷ್ಣಾಂಶ ದಾಖಲಾಗಿದೆ. ಮುಂಜಾನೆ ಮಂಜು ಹಾಗೂ ನಂತರ ಬಿಸಿಲಿನ ಝಳದ ಅನುಭವವಾಗುತ್ತಿದೆ.



ಮಧ್ಯಾಹ್ನದ ಬಿಸಲಿನ ತಾಪಕ್ಕೆ ಕೊಡೆಗಳನ್ನು ಹಿಡಿದು ಸಾಗುತ್ತಿರುವ ಮಹಿಳೆಯರು.

### ಆಹಾರ–ಆರೋಗ್ಯದ ಬಗೆಗಿರಲಿ ಕಾಳಜಿ

ತಾಪ ಹೆಚ್ಚಳದ ಕಾರಣ ಜನರು ತಮ್ಮ ಆಹಾರ–ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು. ಬಿಸಲಿನ ತಾಪ ಹೆಚ್ಚಳದ ಕಾರಣ ಯಥೇಚ್ಛವಾಗಿ ನೀರು ಕುಡಿಯಬೇಕು. ದ್ರವಾಹಾರ ಸೇವನೆಗೆ ಹೆಚ್ಚು ಒತ್ತು ನೀಡಬೇಕು. ತಾಪಮಾನದಿಂದ ಜನರಲ್ಲಿ ಸಾಮಾನ್ಯ ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ. ಬಿಸಿಲು ಹೆಚ್ಚಿದಷ್ಟು ವೈರಾಣು ಜ್ವರ, ವಾಂತಿ–ಭೇದಿಯಂತಹ ಸಮಸ್ಯೆ ಜಾಸ್ತಿಯಾಗುತ್ತಿವೆ. ಹೀಗಾಗಿ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು. ಬಿರು ಬಿಸಿಲಿನಲ್ಲಿ ಓಡಾಡುವುದನ್ನು ತಪ್ಪಿಸುವುದು ಒಳಿತು. ತುಂಬಾ ಬಿಸಿಲು ಇರುವುದರಿಂದಾಗಿ, ಮಕ್ಕಳು, ವೃದ್ಧರು ಹೆಚ್ಚು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು ಎನ್ನುವ ಸಲಹೆ ವೈದ್ಯರದಾಗಿದೆ. ಬಿಸಿಲಿನ ಕಾರಣದಿಂದ ಜನರು ತಂಪು ಪಾನೀಯ, ಐಸ್‌ಕ್ರೀಂ, ಎಳನೀರು ಮೊರೆ ಹೋಗುತ್ತಿದ್ದು, ಎಳನೀರು ಒಂದಕ್ಕೆ 40ರಿಂದ 50 ರೂ.ಗೆ ಮಾರಾಟವಾಗುತ್ತಿದೆ. ಕಲ್ಲಂಗಡಿ ಹಣ್ಣುಗಳತ್ತವೂ ಜನ ಮುಖ ಮಾಡುತ್ತಿದ್ದಾರೆ.

ಮುಂಜಾನೆಯಿಂದಲೇ ಸೂರ್ಯನ ಕಿರಣಗಳು ತಾಪದ ಅನುಭವ ನೀಡುತ್ತಿದ್ದು, ಸೆಕೆಯ ಪ್ರತಾಪಕ್ಕೆ ಬೆವರಿಳಿಯುವಂತಾಗಿದೆ. ಮಧ್ಯಾಹ್ನದ ವೇಳೆ ಬಿಸಿಗಾಳಿ ಸೂಸುವಂತಾಗಿದ್ದು, ರಾತ್ರಿ ವೇಳೆ ಸೆಕೆಯ ಪ್ರಮಾಣ ಈಗಾಗಲೇ ಹೆಚ್ಚಳಗೊಂಡಿದೆ. ವ್ಯಾಪಕ ಬಿಸಲಿನ ಕಾರಣಕ್ಕೆ ಜನರ ಆರೋಗ್ಯದಲ್ಲಿ ವ್ಯತ್ಯಾಸ ಉಂಟಾಗುತ್ತಿರುವುದು ಕಂಡು ಬರುತ್ತಿದೆ.

**ಹವಾಮಾನ ವೈಪರೀತ್ಯದ ಸವಾಲು:** ಹವಾಮಾನ ವೈಪರೀತ್ಯದ ಹಿನ್ನೆಲೆಯಲ್ಲಿ ಪರಿಸರದಲ್ಲಿ ಇಂತಹ ವ್ಯತಿರಿಕ್ತ ವಾತಾವರಣ ಉಂಟಾಗಿದೆ. ಇದೇ ಕಾರಣಕ್ಕೆ ಜಿಲ್ಲೆಯಲ್ಲಿ ಬಿಸಿಲಿನ ಝಳ ಹೆಚ್ಚಾಗಿದೆ. ಹಿಂದೆಲ್ಲಾ ಫೆಬ್ರವರಿಯಲ್ಲಿ ಸರಾಸರಿ 30ರಿಂದ 31 ಡಿಗ್ರಿ ಸೆಲ್ಸಿಯಸ್ ಗರಿಷ್ಠ ತಾಪಮಾನ ಇರುತ್ತಿತ್ತು. ಈಗ ಸರಾಸರಿ 34ರಿಂದ 35 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗುತ್ತಿದೆ. ಮುಂದಿನ ದಿನಗಳಲ್ಲೂ ಇದೇ ಪರಿಸ್ಥಿತಿ ಇರಲಿದೆ ಎಂದು ತಾಲೂಕಿನ ನಾಗನಹಳ್ಳಿ ಕೃಷಿ ಹವಾಮಾನ ಕ್ಷೇತ್ರ ವಿಭಾಗದ ತಾಂತ್ರಿಕ ಅಧಿಕಾರಿ ಜಿ.ವಿ.ಸುಮಂತ್‌ಕುಮಾರ್ ಹೇಳಿದರು. ಹವಾಮಾನ ಇಲಾಖೆ ನೀಡಿರುವ ಮುನ್ಸೂಚನೆಯಂತೆ ಮುಂದಿನ ಐದು ದಿನಗಳಲ್ಲಿ ಜಿಲ್ಲೆಯಲ್ಲಿ ಮಳೆ ಬರುವ ಸಾಧ್ಯತೆ ಇಲ್ಲ. ಗರಿಷ್ಠ ಉಷ್ಣಾಂಶ 33–34.1 ಡಿಗ್ರಿ ಸೆಲ್ಸಿಯಸ್ ಮತ್ತು ಕನಿಷ್ಠ ಉಷ್ಣಾಂಶ 17.6–18.7 ಡಿಗ್ರಿ ಸೆಲ್ಸಿಯಸ್‌ವರೆಗೆ ದಾಖಲಾಗುವ ಸಾಧ್ಯತೆ ಇದೆ. ಬೆಳಿಗಿನ ಗಾಳಿಯ ತೇವಾಂಶ ಶೇ.75–89ರವರೆಗೆ ಮತ್ತು ಮಧ್ಯಾಹ್ನದ ತೇವಾಂಶ ಶೇ.22–30ರವರೆಗೆ ಇರಲಿದೆ. ಗಾಳಿಯು ಗಂಟೆಗೆ 1.5–2.2 ಕಿ.ಮೀ. ವೇಗದಲ್ಲಿ ಬೀಸುವ ಸಾಧ್ಯತೆ ಇದೆ ಎಂದು ಅವರು ಮಾಹಿತಿ ನೀಡಿದರು.

**ಕೃಷಿಕಾರರಿಗೆ ಸಲಹೆ:** ರೈತರು ಬೆಳೆಗಳಿಗೆ ರಕ್ಷಣಾತ್ಮಕ ನೀರಾವರಿ ಪದ್ಧತಿ ಅನುಸರಿಸಬೇಕು. ನೀರು ಹಾಯಿಸಿದ ಬಳಿಕ ಪಾತಿಗಳ ಮೇಲೆ ಹಾಗೂ ಟೊಮೆಟೊ ಮೊದಲಾದ ತೋಟಗಾರಿಕೆ ಅಥವಾ ತರಕಾರಿ ಬೆಳೆಗಳಿಗೆ ಭತ್ತದ ಹುಲ್ಲಿನಿಂದ ಹೊದಿಕೆ ಹಾಕಿ ನೀರು ಆವಿಯಾಗುವುದನ್ನು ನಿಯಂತ್ರಿಸಬೇಕು. ಈ ಸಂದರ್ಭದಲ್ಲಿ ಕೀಟಗಳ ಹಾವಳಿ ಹೆಚ್ಚಿರುತ್ತದೆ. ಅದನ್ನು ನಿವಾರಿಸಲು ರೈತ ಸಂಪರ್ಕ ಕೇಂದ್ರ ಅಥವಾ ಇಲಾಖೆಯ ತಜ್ಞರ ನೆರವು ಪಡೆಯಬೇಕು. ಬಿಸಿಲಿನ ಝಳದಿಂದಾಗಿ ಗಿಡಗಳು ಬೇಗ ಬಾಡುತ್ತವೆ. ಇದನ್ನು ತಪ್ಪಿಸಲು ಆಗಾಗ್ಗೆ ನೀರುಣಿಸುತ್ತಿರಬೇಕು. ನಿಯಮಿತವಾಗಿ ಪರೀಕ್ಷೆ ಮಾಡುತ್ತಿರಬೇಕು ಎಂದು ಸಲಹೆ ನೀಡುತ್ತಾರೆ ತಾಂತ್ರಿಕ ಅಧಿಕಾರಿ ಸುಮಂತ್ ಕುಮಾರ್. ಕೊಯ್ಲು ಮಾಡಿದ ನಂತರ ಶಿಲೀಂಧ್ರ ಹಾಗೂ ಕೀಟಗಳ ಬಾಧೆ ತಡೆಗಟ್ಟಲು ಶೇಖರಣೆಯ ಮೊದಲು ಸರಿಯಾಗಿ ಒಣಗಿಸಬೇಕು ಮತ್ತು ತೇವಾಂಶ ನಿರ್ವಹಣೆಯನ್ನು ಖಚಿತಪಡಿಸಿಕೊಳ್ಳಬೇಕು ಎನ್ನುತ್ತಾರೆ ಬೇಸಾಯ ತಜ್ಞರು. ಜಾನುವಾರುಗಳಿಗೆ ನೆರಳಿನ ವ್ಯವಸ್ಥೆ ಮಾಡಬೇಕು. ಸಾಕಷ್ಟು ಕುಡಿಯುವ ನೀರನ್ನು ಒದಗಿಸಬೇಕು ಎಂಬ ಸಲಹೆಯನ್ನು ಪಶುವೈದ್ಯರು ನೀಡಿದ್ದಾರೆ.

> ಪ್ರಾಕೃತಿಕ ಅಸಮತೋಲನ ಹಾಗೂ ಹವಾಮಾನ ವೈಪರಿತ್ಯದಿಂದ ಈ ಬಾರಿ ಬೇಸಿಗೆಯ ತಾಪಮಾನ ಈಗಲೇ ಹೆಚ್ಚು ಕಂಡು ಬರುತ್ತಿದೆ. ಬಿಸಿಲು ಜಾಸ್ತಿ ಇದೆ. ಕಳೆದ ವರ್ಷದ ಬೇಸಿಗೆಯಲ್ಲಿ 'ಎಲ್‌ನಿನೊ' ಚಂಡಮಾರುತದ ಪರಿಣಾಮದಿಂದ ತಾಪಮಾನ ಹೆಚ್ಚಳವಾಗಿ, 40 ಡಿಗ್ರಿ ಸೆಲ್ಸಿಯಸ್‌ವರೆಗೂ ಮುಟ್ಟಿತ್ತು. ಈ ಬಾರಿ ಆ ಸಾಧ್ಯತೆ ಇಲ್ಲವೆಂದು ಹವಾಮಾನ ಇಲಾಖೆ ಮುನ್ಸೂಚನೆ ಇದೆ.
>
> –ಜಿ.ವಿ.ಸುಮಂತ್‌ಕುಮಾರ್, ತಾಂತ್ರಿಕ ಅಧಿಕಾರಿ, ಕೃಷಿ ಹವಾಮಾನ ಕ್ಷೇತ್ರ ವಿಭಾಗ, ನಾಗನಹಳ್ಳಿ

# ನಾಳೆ ಮೈಸೂರಲ್ಲಿ ಆಗಮ ಘಟಿಕೋತ್ಸವ

### ವಿವಿಧ ಮಠಗಳ ಶ್ರೀಗಳು, ಸಿಎಂ, ಸಚಿವರು ಭಾಗಿ



ಮಹಾರಾಜ ಸಂಸ್ಕೃತ ಕಾಲೇಜಿನ ಪ್ರಾಂಶುಪಾಲ ಪಿ.ಸತ್ಯನಾರಾಯಣ ಮಾತನಾಡಿದರು.

ಮೈಸೂರು,ಫೆ.19(ಜಿಎ)–ರಾಜ್ಯ ಆಗಮ ಶಿಕ್ಷಣ, ಪರೀಕ್ಷಾ ಸಮಿತಿ, ಹಿಂದೂ ಧಾರ್ಮಿಕ ಹಾಗೂ ಧರ್ಮದಾಯ ದತ್ತಿಗಳ ಇಲಾಖೆಯು ಫೆ.21ರಂದು ಬೆಳಿಗ್ಗೆ 11ಕ್ಕೆ ಜಗನ್ಮೋಹನ ಅರಮನೆ ಸಭಾಂಗಣದಲ್ಲಿ ಆಗಮ ಘಟಿಕೋತ್ಸವ ಆಯೋಜಿಸಿದೆ ಎಂದು ಸರ್ಕಾರಿ ಮಹಾರಾಜ ಸಂಸ್ಕೃತ ಕಾಲೇಜಿನ ಪ್ರಾಂಶುಪಾಲ ಪಿ.ಸತ್ಯನಾರಾಯಣ ತಿಳಿಸಿದರು.

ಮೈಸೂರಿನ ಸರ್ಕಾರಿ ಮಹಾರಾಜ ಸಂಸ್ಕೃತ ಕಾಲೇಜಿನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆಗಮ ಪ್ರಸಿದ್ಧ ಪರೀಕ್ಷೆಗಳ ಪ್ರವರ ಮತ್ತು ಪ್ರವೀಣ ವಿಭಾಗಗಳಲ್ಲಿ ಉತ್ತೀರ್ಣತೆ ಹೊಂದಿದ 1,919 ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಲಾಗುವುದು ಎಂದರು.

ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಯದುಗಿರಿ ಯತಿರಾಜ ಮಠದ ನಾರಾಯಣ ಜೀಯರ್ ಸ್ವಾಮೀಜಿ, ಆದಿಚುಂಚನಗಿರಿ ಮಠದ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಉಪಸ್ಥಿತರಿರಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಪಶುಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ್, ಮುಜರಾಯಿ, ಸಾರಿಗೆ ಸಚಿವ ರಾಮಲಿಂಗ ರೆಡ್ಡಿ ಹಾಗೂ ವಿವಿಧ ಕ್ಷೇತ್ರದ ಶಾಸಕರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಸಂಸ್ಕೃತ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಪ್ರೊ.ಭಾಷ್ಯಂ ಸ್ವಾಮೀಜಿ ಘಟಿಕೋತ್ಸವ ಭಾಷಣ ಮಾಡಲಿದ್ದಾರೆ ಎಂದರು.

ಕೋವಿಡ್ ಕಾರಣದಿಂದಾಗಿ 2019–20, 2020–21, 2021–22ನೇ ಸಾಲಿನ ಪರೀಕ್ಷೆ ನಡೆದಿರಲಿಲ್ಲ. ಈ ಸಾಲಿನಲ್ಲಿ ಅರ್ಜಿ ಸಲ್ಲಿಸಿದ್ದ ಎಲ್ಲಾ ವಿದ್ಯಾರ್ಥಿಗಳಿಗೆ 2022ರಲ್ಲಿ ಪರೀಕ್ಷೆ ನಡೆಸಿದ್ದು, ಪ್ರವರ ಪ್ರಸಿದ್ಧ ಪರೀಕ್ಷೆಯಲ್ಲಿ ಭಾಗವಹಿಸಿದ್ದ 2,258 ವಿದ್ಯಾರ್ಥಿಗಳಲ್ಲಿ 936 ವಿದ್ಯಾರ್ಥಿಗಳು, ಪ್ರವೀಣ ಪ್ರಸಿದ್ಧ ಪರೀಕ್ಷೆಯಲ್ಲಿ ಭಾಗವಹಿಸಿದ್ದ 593 ವಿದ್ಯಾರ್ಥಿಗಳಲ್ಲಿ 348 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ' ಎಂದು ತಿಳಿಸಿದರು.

2022–23, 2023–24ನೇ ಸಾಲಿನ ಪ್ರವರ ಪ್ರಸಿದ್ಧ ಪರೀಕ್ಷೆಗೆ 1,245 ವಿದ್ಯಾರ್ಥಿಗಳು ಹಾಜರಾಗಿದ್ದು, 419 ವಿದ್ಯಾರ್ಥಿ ಉತ್ತೀರ್ಣರಾಗಿದ್ದಾರೆ. ಪ್ರವೀಣ ಪ್ರಸಿದ್ಧ ಪರೀಕ್ಷೆಯನ್ನು 462 ಮಂದಿ ಬರೆದಿದ್ದು, 216 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ವಿವಿಧ ವಿಭಾಗದಲ್ಲಿ ಅತೀ ಹೆಚ್ಚು ಅಂಕ ಪಡೆದ 24 ವಿದ್ಯಾರ್ಥಿಗಳಿಗೆ ಸುನಾದ ಫೌಂಡೇಷನ್ 5 ಸಾವಿರ ರೂ. ದತ್ತಿನಿಧಿ ಬಹುಮಾನ ದೊರೆಯಲಿದೆ. 2006ರಿಂದ 2019ರವರೆಗೆ ಪರೀಕ್ಷೆ ಬರೆದವರಿಗೂ ಪ್ರಮಾಣ ಪತ್ರ ವಿತರಣೆ ಬಾಕಿಯಿದ್ದು, ಮುಂದಿನ ಮೂರು ತಿಂಗಳೊಳಗೆ ಘಟಿಕೋತ್ಸವ ನಡೆಸಿ ಪ್ರಮಾಣ ಪತ್ರ ವಿತರಿಸಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ಕಾಲೇಜಿನ ಉಪನ್ಯಾಸಕರಾದ ಎಂ.ಎ.ಆಳ್ವರ್, ಎಸ್.ರಾಜಗೋಪಾಲ್, ಚಕ್ರವರ್ತಿ ಶ್ರೀವತ್ಸ ಕುಮಾರ್ ಭಟ್ ಉಪಸ್ಥಿತರಿದ್ದರು.

# ಯಾವುದೇ ಹೇಳಿಕೆ, ಸುದ್ದಿ ಪ್ರಕಟಿಸುವಾಗ ಮಾಧ್ಯಮಗಳು ಅತ್ಯಂತ ಎಚ್ಚರ ವಹಿಸಬೇಕು

**ನವದೆಹಲಿ:** ಮಾಧ್ಯಮಗಳಲ್ಲಿ ಪ್ರಮುಖ ಹುದ್ದೆಗಳಲ್ಲಿ ಕೆಲಸ ಮಾಡುವ ವ್ಯಕ್ತಿಗಳು, ಯಾವುದೇ ಹೇಳಿಕೆಗಳು, ಸುದ್ದಿಗಳು ಅಥವಾ ಅಭಿಪ್ರಾಯಗಳನ್ನು ಪ್ರಕಟಿಸುವ ಮೊದಲು ಅತ್ಯಂತ ಎಚ್ಚರಿಕೆ ಮತ್ತು ಜವಾಬ್ದಾರಿಯಿಂದ ನಿರ್ವಹಿಸಬೇಕು ಎಂದು ಸುಪ್ರೀಂಕೋರ್ಟ್ ಹೇಳಿದೆ.

ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವಲ್ಲಿ ಮಾಧ್ಯಮದ ಶಕ್ತಿ ಮಹತ್ವದ್ದಾಗಿದೆ. ಸಾರ್ವಜನಿಕ ಭಾವನೆಗಳನ್ನು ಪ್ರಭಾವಿಸುವ ಮತ್ತು ಗಮನಾರ್ಹ ವೇಗದಲ್ಲಿ ಗ್ರಹಿಕೆಗಳನ್ನು ಬದಲಾಯಿಸುವ ಸಾಮರ್ಥ್ಯವನ್ನು ಪತ್ರಿಕೆ ಹೊಂದಿದೆ ಎಂದು ನ್ಯಾಯಮೂರ್ತಿಗಳಾದ ಜೆ.ಬಿ.ಪರ್ದಿವಾಲಾ ಮತ್ತು ಆರ್.ಮಹದೇವನ್ ಅವರ ಪೀಠವು ಪುನರುಚ್ಚರಿಸಿತು.

ಬಿಡ್ ಮತ್ತು ಹ್ಯಾಮರ್ ಹರಾಜಿಗಿಡಲಿರುವ ಕೆಲವು ವರ್ಣಚಿತ್ರಗಳ ದೃಢೀಕರಣದ ಮೇಲೆ ಮಾನನಷ್ಟ ಸಂಬಂಧಿತ ಸುದ್ದಿಯನ್ನು ಪ್ರಕಟಿಸಲಾಗಿದೆ ಎಂದು ಆರೋಪಿಸಿ ಆಂಗ್ಲ ದೈನಿಕ 'ಟೈಮ್ಸ್ ಆಫ್ ಇಂಡಿಯಾ'ದ ಸಂಪಾದಕೀಯ ನಿರ್ದೇಶಕರು ಮತ್ತು ಇತರ ಪತ್ರಕರ್ತರ ವಿರುದ್ಧ



ದಾಖಲಿಸಲಾಗಿದ್ದ ಮಾನನಷ್ಟ ಮೊಕದ್ದಮೆಯನ್ನು ರದ್ದುಗೊಳಿಸುವ ವೇಳೆ ಪೀಠ ಈ ಮಾತುಗಳನ್ನು ಹೇಳಿದೆ.

ಭಾರತದ ಸಂವಿಧಾನದ 19 (1) (ಎ) ಅಡಿಯಲ್ಲಿ ಖಾತರಿಪಡಿಸಿರುವ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕು ಅತ್ಯುನ್ನತವಾಗಿದೆ ಎಂದು ನಾವು ಒತ್ತಿಹೇಳುವುದು ಅಗತ್ಯವಾಗಿದೆ. ಅದೇ ಸಮಯದಲ್ಲಿ, ಮಾಧ್ಯಮದಲ್ಲಿ ಕೆಲಸ ಮಾಡುವವರು, ವಿಶೇಷವಾಗಿ ಪ್ರಮುಖ ಸ್ಥಾನದಲ್ಲಿರುವ ವ್ಯಕ್ತಿಗಳು, ಲೇಖಕರು ಯಾವುದೇ ಹೇಳಿಕೆಗಳನ್ನು ಪ್ರಕಟಿಸುವ ಮೊದಲು ಅತ್ಯಂತ ಎಚ್ಚರಿಕೆ ಮತ್ತು ಜವಾಬ್ದಾರಿಯನ್ನು ವಹಿಸಬೇಕು ಎಂದು ಪೀಠ ಹೇಳಿದೆ.


'ಕತ್ತಿಗಿಂತ ಲೇಖನಿ ಹರಿತವಾದುದು' ಎಂಬ ಆಂಗ್ಲ ಲೇಖಕ ಬುಲ್ವರ್ ಲಿಟ್ಟನ್ ಮಾತುಗಳನ್ನು ನ್ಯಾಯಾಲಯವು ಈ ಸಂದರ್ಭ ಉಲ್ಲೇಖಿಸಿದೆ. ಒಂದು ಲೇಖನ ಅಥವಾ ವರದಿಯು ಲಕ್ಷಾಂತರ ಜನರೊಂದಿಗೆ ಅನುರಣಿಸುತ್ತದೆ. ಅವರ ನಂಬಿಕೆ ಬದಲಿಸುತ್ತದೆ ಮತ್ತು ಅಭಿಪ್ರಾಯಗಳನ್ನು ರೂಪಿಸುತ್ತದೆ ಎಂದು ಕೋರ್ಟ್ ಹೇಳಿದೆ.

ಮಾಧ್ಯಮ ವರದಿಯಲ್ಲಿ ನಿಖರತೆ ಮತ್ತು ನ್ಯಾಯಸಮ್ಮತತೆಯ ನಿರ್ಣಾಯಕ ಅಗತ್ಯವನ್ನು ಈ ವಾಕ್ಯ ಎತ್ತಿ ತೋರಿಸುತ್ತದೆ. ವಿಶೇಷವಾಗಿ, ವ್ಯಕ್ತಿಗಳು ಅಥವಾ ಸಂಸ್ಥೆಗಳ ಸಮಗ್ರತೆಯ ಮೇಲೆ ಪರಿಣಾಮ ಬೀರುವ ಸಾಮರ್ಥ್ಯವನ್ನು ಹೊಂದಿರುವ ಸುದ್ದಿ ಅಥವಾ ಲೇಖನಗಳನ್ನು ಪ್ರಕಟಿಸುವಾಗ ಈ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. ಸಾರ್ವಜನಿಕ ಹಿತಾಸಕ್ತಿ ಗಮನದಲ್ಲಿಟ್ಟುಕೊಂಡು ಸುದ್ದಿ ಪ್ರಕಟಿಸಬೇಕು ಎಂದು ಪೀಠ ಹೇಳಿದೆ. ಮಾನನಷ್ಟ ಮೊಕದ್ದಮೆಯಲ್ಲಿ ತಮ್ಮ ಅರ್ಜಿ ತಿರಸ್ಕರಿಸಿ ಕ್ರಿಮಿನಲ್ ವಿಚಾರಣೆಗೆ ಆದೇಶಿಸಿದ್ದ ಕರ್ನಾಟಕ ಹೈಕೋರ್ಟ್ ಆದೇಶ ಪ್ರಶ್ನಿಸಿ ಪತ್ರಕರ್ತರು ಸುಪ್ರೀಂಕೋರ್ಟ್ ಮೆಟ್ಟಿಲೇರಿದ್ದರು. ಐಪಿಸಿ ಸೆಕ್ಷನ್ 499 (ಮಾನನಷ್ಟ) ಮತ್ತು ಸೆಕ್ಷನ್ 500 (ಮಾನ ಹಾನಿಗೆ ಶಿಕ್ಷೆ) ಅಡಿಯಲ್ಲಿ ಪತ್ರಕರ್ತರ ವಿರುದ್ಧ ಪ್ರಕರಣ ದಾಖಲಾಗಿತ್ತು.

## ದೇಶ - ವಿದೇಶ


### ಅಮೆರಿಕಾದಿಂದ ಗಡಿಪಾರಾದ 300 ಮಂದಿ ಪನಾಮಾ ಸಿಟಿಯಲ್ಲಿ ಬಂಧಿ

**ಪನಾಮ ಸಿಟಿ:** ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ




ನೇತೃತ್ವದಲ್ಲಿ ಗಡಿಪಾರು ಮಾಡಲಾದ ವಿವಿಧ ದೇಶಗಳ ಸುಮಾರು 300 ಜನರನ್ನು ಪನಾಮಾ ಸಿಟಿಯ ಹೋಟೆಲ್‌ನಲ್ಲಿ ಇರಿಸಲಾಗಿದೆ. ಅಂತರರಾಷ್ಟ್ರೀಯ ಅಧಿಕಾರಿಗಳು ತಮ್ಮ ದೇಶಗಳಿಗೆ ಅವರು ಮರಳಲು ವ್ಯವಸ್ಥೆ ಮಾಡುವವರೆಗೆ ವಲಸಿಗರು ಇಲ್ಲಿ ಕಾಯಬೇಕಾದ ಪರಿಸ್ಥಿತಿಯಿದೆ. ಶೇ.40ಕ್ಕಿಂತ ಹೆಚ್ಚು ವಲಸಿಗರು ಸ್ವಯಂಪ್ರೇರಣೆಯಿಂದ ತಮ್ಮ ತಾಯ್ನಾಡಿಗೆ ಹಿಂತಿರುಗುವುದಿಲ್ಲ. ಸಹಾಯ ಮಾಡಿ ಎಂದು ಸ್ಟಿಕ್ಕರ್‌ನಲ್ಲಿ ಬರೆದು ಬಾಗಿಲಿಗೆ ಅಂಟಿಸಿದ್ದು, ನಮ್ಮ ದೇಶದಲ್ಲಿ ನಮ್ಮನ್ನು ಬಚಾವ್ ಮಾಡಲಿಲ್ಲ ಎಂದು ಬರೆದಿದ್ದಾರೆ. ಅಮೆರಿಕಕ್ಕೆ ಅಕ್ರಮವಾಗಿ ಬಂದ ವಲಸಿಗರು ಹೆಚ್ಚಾಗಿ ಇರಾನ್, ಭಾರತ, ನೇಪಾಳ, ಶ್ರೀಲಂಕಾ, ಪಾಕಿಸ್ತಾನ, ಅಫ್ಘಾನಿಸ್ತಾನ, ಚೀನಾ ಸೇರಿದಂತೆ 10 ಏಷ್ಯಾದ ದೇಶಗಳಿಂದ ಬಂದವರಾಗಿದ್ದಾರೆ. ಆ ಕೆಲವು ದೇಶಗಳಿಗೆ ನೇರವಾಗಿ ಗಡಿಪಾರು ಮಾಡಲು ಅಮೆರಿಕಕ್ಕೆ ತೊಂದರೆಯಾಗಿದೆ. ಆದ್ದರಿಂದ ಪನಾಮಾ ಸಿಟಿಯನ್ನು ನಿಲ್ದಾಣವಾಗಿ ಬಳಸಲಾಗುತ್ತಿದೆ. ಇಂದು ಕೋಸ್ಟರಿಕಾಕ್ಕೆ ಸಹ ಈ ರೀತಿ ಗಡಿಪಾರಾದ ವಲಸಿಗರನ್ನು ಹೊತ್ತ ವಿಮಾನ ಬಂದಿಳಿಯಲಿದೆ

### ಮಾಜಿ ಸಚಿವ ಸತ್ಯೇಂದ್ರ ಜೈನ್ ವಿರುದ್ಧ ತನಿಖೆಗೆ ರಾಷ್ಟ್ರಪತಿ ಒಪ್ಪಿಗೆ



**ನವದೆಹಲಿ:** ಭೂ ವ್ಯವಹಾರ, ಹಣ ವರ್ಗಾವಣೆ ಪ್ರಕರಣದಲ್ಲಿ ಎಎಪಿ ನಾಯಕ ಸತ್ಯೇಂದ್ರ ಜೈನ್ ವಿರುದ್ಧ ಮೊಕದ್ದಮೆ ವಿಚಾರಣೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅನುಮತಿ ನೀಡಿದ್ದಾರೆ. ಫೆಬ್ರವರಿ 14ರಂದು ಕೇಂದ್ರ ಗೃಹ ಸಚಿವಾಲಯವು ಈ ವಿಚಾರವಾಗಿ ರಾಷ್ಟ್ರಪತಿಗಳಿಂದ ಅನುಮೋದನೆ ಕೋರಿತ್ತು. ದೆಹಲಿಯ ಮಾಜಿ ಆರೋಗ್ಯ ಸಚಿವ ಜೈನ್ ವಿರುದ್ಧ ಬಿಎನ್‌ಎಸ್ ಸೆಕ್ಷನ್ 218ರ ಅಡಿಯಲ್ಲಿ ಪ್ರಕರಣ ದಾಖಲಿಸಲಾಗುತ್ತದೆ. ಜಾರಿ ನಿರ್ದೇಶನಾಲಯ ಶೀಘ್ರದಲ್ಲೇ ಜೈನ್ ಅವರನ್ನು ಬಂಧಿಸಬಹುದು. 4 ನಕಲಿ ಕಂಪನಿಗಳ ಮೂಲಕ ಹಣ ವರ್ಗಾವಣೆ ಮಾಡಿರುವ ಆರೋಪ ಹೊರಿಸಿರುವ ಇಡಿ, ಸತ್ಯೇಂದ್ರ ತನ್ನೊಂದಿಗೆ ಸಂಪರ್ಕ ಹೊಂದಿರುವ 4 ನಕಲಿ ಕಂಪನಿಗಳ ಮೂಲಕ ಹಣ ವರ್ಗಾವಣೆ ಮಾಡಿದ್ದಾರೆ ಎಂದು ಆರೋಪಿಸಿತ್ತು. ಈ ನಕಲಿ ಕಂಪನಿಗಳ ಮೂಲಕ ಪಡೆದ ಹಣವನ್ನು 2015ರ ಫೆಬ್ರವರಿ 14ರಿಂದ 2017ರ ಮೇ 31ರ ನಡುವೆ ಹಲವಾರು ಜನರ ಹೆಸರಿನಲ್ಲಿ ಚರ ಆಸ್ತಿಗಳನ್ನು ಖರೀದಿಸಲು ಬಳಸಲಾಗಿದೆ. ಇದಲ್ಲದೆ, ದೆಹಲಿ ಮತ್ತು ಸುತ್ತಮುತ್ತಲಿನ ಕೃಷಿ ಭೂಮಿಯನ್ನು ಖರೀದಿಸಲು ಸಾಲವನ್ನು ಮರುಪಾವತಿಸಲು ಸಹ ಇದನ್ನು ಬಳಸಲಾಗುತ್ತಿತ್ತು ಎಂದು ಇಡಿ ಹೇಳಿದೆ.

### ಬಾಂಗ್ಲಾಗೆ ಮರಳುವ ಇಚ್ಛೆ ಹೊರಹಾಕಿದ ಶೇಖ್ ಹಸೀನಾ




**ಢಾಕಾ:** ಭಾರತದಲ್ಲಿ ಆಶ್ರಯ ಪಡೆದಿರುವ ಬಾಂಗ್ಲಾದೇಶದ ಪದಚ್ಯುತ ಪ್ರಧಾನಿ ಶೇಖ್ ಹಸೀನಾ, ತಾವು ಸ್ವದೇಶಕ್ಕೆ ಮರಳುವ ಇಚ್ಛೆ ವ್ಯಕ್ತಪಡಿಸಿದ್ದಾರೆ. ಇದಕ್ಕೆ ತೀಕ್ಷ್ಣ ಪ್ರತಿಕ್ರಿಯೆ ನೀಡಿರುವ ಮುಹಮ್ಮದ್ ಯೂನಸ್ ನೇತೃತ್ವದ ಬಾಂಗ್ಲಾದೇಶದ ಹಂಗಾಮಿ ಸರ್ಕಾರ, ಶೇಖ್ ಹಸೀನಾ ಅವರ ಹಸ್ತಾಂತರ ಪ್ರಕ್ರಿಯೆ ತಮ್ಮ ಸರ್ಕಾರದ ಪ್ರಾಥಮಿಕ ಆದ್ಯತೆ ಎಂದು ಸೂಚ್ಯವಾಗಿ ಹೇಳಿದೆ.

ಕಳೆದ ಜುಲೈನಲ್ಲಿ ನಡೆದ ವಿದ್ಯಾರ್ಥಿ ದಂಗೆಯಲ್ಲಿ ಮೃತಪಟ್ಟ ನಾಲ್ವರು ಪೊಲೀಸರ ವಿಧವಾ ಪತ್ನಿಯರೊಂದಿಗೆ ಜೂಮ್ ಮೀಟಿಂಗ್‌ನಲ್ಲಿ ಮಾತನಾಡಿದ ಶೇಖ್ ಹಸೀನಾ, ಮುಹಮ್ಮದ್ ಯೂನಸ್ ನೇತೃತ್ವದ ಹಂಗಾಮಿ ಸರ್ಕಾರದ ದುರಾಡಳಿತದಿಂದ ಬಾಂಗ್ಲಾದೇಶದ ಜನರನ್ನು ಕಾಪಾಡಲು ಸ್ವದೇಶಕ್ಕೆ ಮರಳುವ ಇಚ್ಛೆ ಇದೆ ಎಂದರು. ನನ್ನನ್ನು ಅಧಿಕಾರದಿಂದ ಕೆಳಗಿಳಿಸಲು ಅವರು ರೂಪಿಸಿದ್ದ ಸೂಕ್ಷ್ಮ ಒಳಸಂಚನ್ನು ಬಾಂಗ್ಲಾದೇಶದ ಜನ ಇದೀಗ ಅರ್ಥ ಮಾಡಿಕೊಂಡಿದ್ದಾರೆ. ನಾನು ನನ್ನ ದೇಶಕ್ಕೆ ಹಿಂತಿರುಗಿ ಈ ಅಮಾನವೀಯ ಸರ್ಕಾರದ ದುರಾಡಳಿತದಿಂದ ನನ್ನ ಜನರನ್ನು ರಕ್ಷಿಸುತ್ತೇನೆ ವಿದ್ಯಾರ್ಥಿ ದಂಗೆಯಲ್ಲಿ ಹುತಾತ್ಮರಾದ ಪೊಲೀಸರ ಸಾವಿಗೆ ಪ್ರತೀಕಾರ ತೀರಿಸಿಕೊಳ್ಳುತ್ತೇನೆ ಎಂದು ಶೇಖ್ ಹಸೀನಾ ಇದೇ ವೇಳೆ ವಾಗ್ದಾನ ಮಾಡಿದರು.

### ಐಐಟಿ ಅಧ್ಯಯನ: ಹಿಮಾಚಲಪ್ರದೇಶದ ಶೇ.40ರಷ್ಟು ಭಾಗ ಭೂ ಕುಸಿತ

**ಚಂಡೀಗಢ:** ಭಾರತೀಯ ತಂತ್ರಜ್ಞಾನ ಸಂಸ್ಥೆ (ಐಐಟಿ)




–ರೋಪರ್ ನಡೆಸಿದ ಇತ್ತೀಚಿನ ಅಧ್ಯಯನದ ಪ್ರಕಾರ ಹಿಮಾಚಲಪ್ರದೇಶದ ಶೇಕಡಾ 49 ಭಾಗವು ಮಧ್ಯಮ ಪ್ರಮಾಣದ ಅಪಾಯವನ್ನು ಹೊಂದಿದ್ದರೆ, ಶೇ. 40ರಷ್ಟು ಪ್ರದೇಶವು ಹೆಚ್ಚಿನ ಪ್ರಾಕೃತಿಕ ವಿಕೋಪಗಳಾದ ಭೂ ಕುಸಿತ, ಪ್ರವಾಹ ಮತ್ತು ಹಿಮಕುಸಿತಕ್ಕೆ ಗುರಿಯಾಗುವ ಸಾಧ್ಯತೆ ಹೆಚ್ಚಾಗಿದೆ. ಕಳೆದ ವಾರ ಐಐಟಿ–ಬಾಂಬೆಯಲ್ಲಿ ನಡೆದ ಇಂಡಿಯನ್ ಕ್ರಯೋಸ್ಪಿಯರ್ ಮೀಟ್ (ICM) ನಲ್ಲಿ ಈ ಬಗ್ಗೆ ಚರ್ಚೆಗಳು ನಡೆದವು.

ಇದರಲ್ಲಿ ಪ್ರಪಂಚದಾದ್ಯಂತದ 80 ಹಿಮನದಿ ಶಾಸ್ತ್ರಜ್ಞರು, ಸಂಶೋಧಕರು, ವಿಜ್ಞಾನಿಗಳು ಮತ್ತು ಇತರ ತಜ್ಞರು ಭಾಗವಹಿಸಿದ್ದರು. ರಾಜ್ಯದ ಮೇಲ್ಭಾಗವು ಹಿಮಕುಸಿತಕ್ಕೆ ಹೆಚ್ಚು ಒಳಗಾಗುತ್ತದೆ, ಮಧ್ಯ ಮತ್ತು ಕೆಳಗಿನ ಭಾಗಗಳು ಪ್ರವಾಹ ಮತ್ತು ಭೂಕುಸಿತಕ್ಕೆ ಹೆಚ್ಚು ಒಳಗಾಗುತ್ತವೆ. ಕಿನ್ನೌರ್ ಮತ್ತು ಲಹೌಲ್ ಸ್ಪಿತಿ ಜಿಲ್ಲೆಗಳಲ್ಲಿನ ಎತ್ತರದ ಪ್ರದೇಶಗಳು ಹಿಮಪಾತಕ್ಕೆ ಹೆಚ್ಚು ಒಳಗಾಗುತ್ತವೆ ಎಂದು ಅಧ್ಯಯನವು ಹೇಳಿದೆ.

### ಡೊನಾಲ್ಡ್ ಟ್ರಂಪ್, ಎಲಾನ್ ಮಸ್ಕ್ ವಿರುದ್ಧ ಕೆಲವೆಡೆ ಪ್ರತಿಭಟನೆ

**ಬೋಸ್ಟನ್:** ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಅವರ



ನೀತಿಗಳ ವಿರುದ್ಧ ಅಮೆರಿಕದ ಕೆಲವೆಡೆ ಪ್ರತಿಭಟನೆ ವ್ಯಕ್ತವಾಗಿದೆ. 'ಪ್ರೆಸಿಡೆಂಟ್ಸ್ ದಿನ'ವಾದ ನಿನ್ನೆ ಬೋಸ್ಟನ್ ಸೇರಿದಂತೆ ಕೆಲವೆಡೆ ಪ್ರತಿಭಟನೆ ನಡೆಸಿದ ಪ್ರತಿಭಟನಾಕಾರರು, ಡೊನಾಲ್ಡ್ ಟ್ರಂಪ್ ಹಾಗೂ ಎಲಾನ್ ಮಸ್ಕ್ ಅವರ ಜನ ವಿರೋಧಿ ನೀತಿಗಳನ್ನು ಖಂಡಿಸಿದರು. ಅಧ್ಯಕ್ಷರ ದಿನದಂದು ರಾಜರಿಲ್ಲ ಎಂದು ಘೋಷಣೆ ಕೂಗಿದ ಪ್ರತಿಭಟನಾಕಾರರು, ಫೆಡರಲ್ ವಲಸೆ ಜಾರಿ ಮಸೂದೆ ವಿರೋಧಿಸಿ ಅರಿಜೋನಾ ಸ್ಟೇಟ್ ಹೌಸ್‌ಗೆ ನುಗ್ಗಲು ಪ್ರಯತ್ನಿಸಿದರು. ಫ್ಲೋರಿಡಾ ಮತ್ತು ಕ್ಯಾಲಿಫೋರ್ನಿಯಾದಲ್ಲಿ ನೂರಾರು ಪ್ರತಿಭಟನಾಕಾರರು 'ನನ್ನ ಅಧ್ಯಕ್ಷರ ದಿನವಲ್ಲ' ಎಂದು ಘೋಷಣೆ ಕೂಗಿ ಪ್ರತಿಭಟನೆ ನಡೆಸಿದ್ದಾಗಿ ಮಾಧ್ಯಮಗಳು ವರದಿ ಮಾಡಿವೆ.

ಎರಡು ವಾರಗಳಲ್ಲಿ ಅಮೆರಿಕದಾದ್ಯಂತ ನಡೆದ ಅತ್ಯಂತ ಎರಡನೇ ದೊಡ್ಡ ಪ್ರತಿಭಟನೆ ಇದಾಗಿದೆ. ಈ ಹಿಂದೆ ಫೆ.5ರಂದು ಇದೇ ರೀತಿಯ ಬೃಹತ್ ಪ್ರತಿಭಟನೆ ನಡೆದಿತ್ತು. ಎರಡೂ ಪ್ರತಿಭಟನೆಗಳಲ್ಲಿ ಡೊನಾಲ್ಡ್ ಟ್ರಂಪ್ ಹಾಗೂ ಎಲಾನ್ ಮಸ್ಕ್ ಅವರ ನೀತಿಗಳನ್ನು ಜನರು ಖಂಡಿಸಿದ್ದಾರೆ.

ಮೈಸೂರು ಮಿತ್ರ ಗುರುವಾರ ೨೦ ಫೆಬ್ರವರಿ ೨೦೨೫

# ಶಾಲಾ ವಿದ್ಯಾರ್ಥಿಗಳಿಂದ ದೈವನರ್ತನ
## ದೈವ ನರ್ತಕರ ಸಂಘ ಆಕ್ರೋಶ



ಮೂರ್ನಾಡು ಸರ್ಕಾರಿ ಪ್ರೌಢಶಾಲೆಯಲ್ಲಿ ನಡೆದ ರಂಗೋತ್ಸವ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ದೈವನರ್ತನ ಪ್ರದರ್ಶಿಸಿರುವುದು.

ಮಡಿಕೇರಿ, ಫೆ.19–ಮೂರ್ನಾಡು ಸರ್ಕಾರಿ ಪ್ರೌಢ ಶಾಲೆಯಲ್ಲಿ ಕಳೆದ ಶನಿವಾರ ನಡೆದ ರಂಗೋತ್ಸವ ಕಾರ್ಯಕ್ರಮದಲ್ಲಿ ಶಾಲಾ ವಿದ್ಯಾರ್ಥಿಗಳು ದೈವಾರಾಧನೆ ವೇಷ ಧರಿಸಿ, ಆವೇಶಭರಿತರಾಗಿ ನರ್ತಿಸಿರುವುದು ದೈವಾರಾಧಕರು ಮತ್ತು ದೈವ ನರ್ತಕರ ಸಂಘದ ಆಕ್ರೋಶಕ್ಕೆ ಕಾರಣವಾಗಿದೆ.

ವಿದ್ಯಾರ್ಥಿಗಳು ದೈವಾರಾಧನೆ ವೇಷ ಧರಿಸಿ, ಆವೇಶಭರಿತರಾಗಿ ನರ್ತಿಸಿರುವ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಈ ಹಿನ್ನೆಲೆಯಲ್ಲಿ ದೈವಾರಾಧಕರು ಮತ್ತು ದೈವ ನರ್ತಕರ ಸಂಘದ ಸ್ಥಾಪಕಾಧ್ಯಕ್ಷ ಪಿ.ಎಂ.ರವಿ, ಅಧ್ಯಕ್ಷ ಸದಾಶಿವ ರೈ ಸೇರಿದಂತೆ ಮತ್ತಿತರರು ಶಾಲೆಗೆ ತೆರಳಿ ಮುಖ್ಯ ಶಿಕ್ಷಕ ಗುರುರಾಜ್ ಬಳಿ ಸ್ಪಷ್ಟನೆ ಕೇಳಿದರು. ಹಿಂದೆ ಹಲವು ಶಾಲೆಗಳಲ್ಲಿ ದೈವಾರಾಧನೆ ವೇಷ ಧರಿಸಿ ನರ್ತಿಸಿದ್ದು, ಆ ಸಂದರ್ಭದಲ್ಲೇ ಇನ್ನು ಎಲ್ಲಿಯೂ ದೈವಾರಾಧನೆ ನರ್ತಿಸದಂತೆ ಸಂಘದಿಂದ ಎಚ್ಚರಿಕೆ ನೀಡಲಾಗಿತ್ತು. ಆದರೂ ಶಾಲೆಯಲ್ಲಿ ಶಿಕ್ಷಕರ ಸಮ್ಮುಖದಲ್ಲೇ ಇಂತಹ ಪ್ರಮಾದ ನಡೆದಿರುವುದು ವಿಷಾದನೀಯವೆಂದು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

ಈ ರೀತಿ ಮಾಡುವುದರಿಂದ ಪುಟ್ಟ ಮಕ್ಕಳಿಗೆ ತೊಂದರೆಯಾಗುವ ಸಾಧ್ಯತೆ ಇದೆ. ಹಿಂದೆ ಹಲವು ಮಕ್ಕಳು ಇದೇ ರೀತಿ ದೈವಾರಾಧನೆ ನಕಲು ಮಾಡಿ ತೊಂದರೆ ಅನುಭವಿಸಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಇದಕ್ಕೆ ಪ್ರತಿಕ್ರಿಯೆ ನೀಡಿದ ಮುಖ್ಯಶಿಕ್ಷಕ ಗುರುರಾಜ್, ನನ್ನ ಅನುಪಸ್ಥಿತಿಯಲ್ಲಿ ಇಂತಹ ಪ್ರಮಾದವಾಗಿದೆ. ಇದಕ್ಕಾಗಿ ನಾನು ಕ್ಷಮೆಯಾಚಿಸುತ್ತೇನೆ. ಮುಂದೆ ಇಂತಹ ಘಟನೆಗಳು ಮರುಕಳಿಸುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ದೈವಾರಾಧಕರು ಮತ್ತು ದೈವ ನರ್ತಕರ ಸಂಘದ ಸ್ಥಾಪಕಾಧ್ಯಕ್ಷ ಪಿ.ಎಂ.ರವಿ ಮಾತನಾಡಿ, ಶಾಲಾ–ಕಾಲೇಜುಗಳಲ್ಲಿ ದೈವನರ್ತನ ಮಾಡಬಾರದೆಂದು 4 ವರ್ಷಗಳ ಹಿಂದೆಯೇ ಸರ್ಕಾರ ಸುತ್ತೋಲೆ ಹೊರಡಿಸಿದೆ. ದೈವನರ್ತನ ಮಾಡಿದ ಮಕ್ಕಳು ತೊಂದರೆ ಅನುಭವಿಸಿದ ಉದಾಹರಣೆಗಳಿವೆ. ಆದ್ದರಿಂದ ಯಾರೂ ದೈವನರ್ತನ ಮಾಡುವ ದುಸ್ಸಾಹಸಕ್ಕೆ ಕೈ ಹಾಕಬಾರದು ಎಂದು ಮನವಿ ಮಾಡಿದರು.

# 252 ಸಂತ್ರಸ್ತ ಕುಟುಂಬಗಳಿಗೆ ಮನೆ ಹಂಚಿಕೆ
## ಜಿಲ್ಲಾಧಿಕಾರಿ ಸಮ್ಮುಖದಲ್ಲಿ ಲಾಟರಿ ಮೂಲಕ ಪಾರದರ್ಶಕವಾಗಿ ಹಂಚಿಕೆ ಕಾರ್ಯ

ಮಡಿಕೇರಿ, ಫೆ.19–ಪ್ರಕೃತಿ ವಿಕೋಪಕ್ಕೆ ತುತ್ತಾಗಿ ಮನೆ ಕಳೆದುಕೊಂಡ 252 ಸಂತ್ರಸ್ತ ಕುಟುಂಬಗಳಿಗೆ ಮನೆ ಹಂಚಿಕೆ ಕಾರ್ಯ ಲಾಟರಿ ಮೂಲಕ ಪಾರದರ್ಶಕವಾಗಿ ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಬುಧವಾರ ನಡೆಯಿತು.

ಜಿಲ್ಲಾಧಿಕಾರಿ ವೆಂಕಟ್ ರಾಜಾ, ಇನ್ಫೋಸಿಸ್ ಸಂಸ್ಥೆಯ ಸುನಿಲ್ ಕುಮಾರ್, ಸಂತೋಷ್ ಹಾಗೂ ಉಪವಿಭಾಗಾಧಿಕಾರಿ ವಿನಾಯಕ ನರ್ವಾಡೆ ಉಪಸ್ಥಿತಿಯಲ್ಲಿ ಲಾಟರಿ ಮೂಲಕ ಮನೆ ಹಂಚಿಕೆ ಕಾರ್ಯ ನಡೆಸಲಾಯಿತು.

ಸೋಮವಾರಪೇಟೆ ತಾಲೂಕಿನ ಜಂಬೂರಿನಲ್ಲಿ ಇನ್ಫೋಸಿಸ್ ಸಂಸ್ಥೆ ವತಿಯಿಂದ ನಿರ್ಮಿಸಿರುವ 200 ಮನೆ ಹಾಗೂ ಇಂಡಿಯನ್ ಹ್ಯಾಬಿಟೇಟ್ ಸಂಸ್ಥೆಯಿಂದ ನಿರ್ಮಾಣವಾಗಿರುವ 4 ಮನೆ, ಮದನಾಡು ಬಳಿ 4, ಕೆ.ನಿಡುಗಣೆ ಬಳಿ 2, ಗಾಳಿಬೀಡು ಬಳಿ 42 ಸೇರಿದಂತೆ ಒಟ್ಟು 252 ಮನೆಗಳ ಹಂಚಿಕೆ ಕಾರ್ಯ ಸಂತ್ರಸ್ತರ ಸಮ್ಮುಖದಲ್ಲಿ ನಡೆಯಿತು. ಲಾಟರಿ ತೆಗೆಯುವ ಮೂಲಕ ಸಂತ್ರಸ್ತರೇ ತಮ್ಮ ಮನೆ ಸಂಖ್ಯೆ ಆಯ್ಕೆ ಮಾಡಿಕೊಂಡರು.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾಧಿಕಾರಿ ವೆಂಕಟ್ ರಾಜಾ, 2018–19ರಲ್ಲಿ ಪ್ರಕೃತಿ ವಿಕೋಪದಿಂದ ಮನೆ ಕಳೆದುಕೊಂಡಿದ್ದ ಕುಟುಂಬದವರಿಗೆ ಮನೆ ಹಂಚಿಕೆ ಮಾಡಲಾಗುತ್ತಿದೆ. ಇನ್ಫೋಸಿಸ್‌ನಿಂದ 200 ಮನೆಗಳು ಸೇರಿದಂತೆ ಹ್ಯಾಬಿಟೇಟ್ ಸಂಸ್ಥೆಯಿಂದ ವಿವಿಧ ಕಡೆಗಳಲ್ಲಿ ನಿರ್ಮಿಸಿರುವ 52 ಮನೆಗಳನ್ನು ಲಾಟರಿ ಮೂಲಕ ಪಾರದರ್ಶಕವಾಗಿ ಹಂಚಿಕೆ ಮಾಡಲಾಗುತ್ತಿದೆ ಎಂದರು.



ಮಡಿಕೇರಿ ಜಿಪಂನಲ್ಲಿ ನಡೆದ ಕಾರ್ಯಕ್ರಮದಲ್ಲಿ ಲಾಟರಿ ತೆಗೆಯುವ ಮೂಲಕ ಸಂತ್ರಸ್ತರೇ ತಮ್ಮ ಮನೆ ಸಂಖ್ಯೆ ಆಯ್ಕೆ ಮಾಡಿಕೊಂಡರು.

ಮನೆ ಹಂಚಿಕೆ ಸಂಬಂಧ ಈಗಾಗಲೇ ಆಕ್ಷೇಪಣೆಗೆ ಅವಕಾಶ ಕಲ್ಪಿಸಲಾಗಿತ್ತು. ಆಕ್ಷೇಪಣೆ ಸಂಬಂಧ ಎಲ್ಲಾ ರೀತಿ ಪರಿಶೀಲಿಸಿ, ಬಾಕಿ ಸಂತ್ರಸ್ತ ಕುಟುಂಬಗಳಿಗೆ ಲಾಟರಿ ಮೂಲಕ ಮನೆ ಹಂಚಿಕೆ ಮಾಡಲಾಗಿದೆ. ಮನೆ ಹಕ್ಕುಪತ್ರವನ್ನು ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು ಶೀಘ್ರ ವಿತರಿಸಲಿದ್ದಾರೆ ಎಂದು ತಿಳಿಸಿದರು.

ಇನ್ಫೋಸಿಸ್ ಸಂಸ್ಥೆಯ ಪ್ರಮುಖರಾದ ಸುನಿಲ್ ಕುಮಾರ್ ಮಾತನಾಡಿ, 2018ರ ಆಗಸ್ಟ್‌ನಲ್ಲಿ ಸಂಭವಿಸಿದ ಅತಿವೃಷ್ಟಿಯಿಂದ ಹಲವು ಕುಟುಂಬಗಳು ಮನೆ ಕಳೆದುಕೊಂಡಿದ್ದವು. ಈ ಹಿನ್ನೆಲೆಯಲ್ಲಿ ಇನ್ಫೋಸಿಸ್ ಸಂಸ್ಥೆ ಸಾಧ್ಯವಾದಷ್ಟು ಸಹಕಾರ ನೀಡಬೇಕು ಎಂಬ ಉದ್ದೇಶದಿಂದ ಜಂಬೂರಿನಲ್ಲಿ 200 ಮನೆಗಳನ್ನು ನಿರ್ಮಿಸಲು ಮುಂದಾಯಿತು. ಆ ನಿಟ್ಟಿನಲ್ಲಿ 34 ಕೋಟಿ ರೂ. ವೆಚ್ಚದಲ್ಲಿ ಮನೆಗಳನ್ನು ನಿರ್ಮಿಸಲಾಗಿದೆ ಎಂದರು.

> ಸಂತ್ರಸ್ತರು ಮೊದಲ ಆದ್ಯತೆಯಲ್ಲಿ ಗಾಳಿಬೀಡು, ಎರಡನೇ ಆದ್ಯತೆಯಲ್ಲಿ ಜಂಬೂರು ಆಯ್ಕೆ ಮಾಡಿದ್ದರು. ಇನ್ಫೋಸಿಸ್ ಸಂಸ್ಥೆಯ 200 ಮನೆಗಳ ಜೊತೆಗೆ ವಿವಿಧ ಪ್ರದೇಶದ 52 ಮನೆಗಳನ್ನು ಪಾರದರ್ಶಕವಾಗಿ ಹಂಚಿಕೆ ಮಾಡಲಾಗುತ್ತಿದೆ.
> –ವಿನಾಯಕ ನರ್ವಾಡೆ, ಉಪವಿಭಾಗಾಧಿಕಾರಿ ಹಾಗೂ ಮನೆ ಹಂಚಿಕೆ ನೋಡಲ್ ಅಧಿಕಾರಿ

ಎರಡು ಬೆಡ್‌ರೂಮ್, ಲೈಟಿಂಗ್ ಸೇರಿದಂತೆ ಹಲವು ಮೂಲಸೌಕರ್ಯಗಳನ್ನು ಮನೆ ಒಳಗೊಂಡಿದೆ. ಸರ್ಕಾರ ಹಾಗೂ ಜಿಲ್ಲಾಡಳಿತದ ನಿರಂತರ ಪರಿಶ್ರಮದಿಂದ ಈ ಕಾರ್ಯ ಆಗಿದೆ ಎಂದರು.

ಇನ್ಫೋಸಿಸ್ ಸಂಸ್ಥೆಯ ಪ್ರತಿನಿಧಿ ಸಂತೋಷ್ ಮಾತನಾಡಿ, ಪ್ರತಿಯೊಬ್ಬರ ಬದುಕಿನಲ್ಲಿ ವಸತಿ ಅವಶ್ಯಕ. ಆ ನಿಟ್ಟಿನಲ್ಲಿ ಸಂತ್ರಸ್ತರ ನೆಮ್ಮದಿಗೆ ಇನ್ಫೋಸಿಸ್ ಸಂಸ್ಥೆ ಸರ್ಕಾರದ ಜೊತೆ ಕೈಜೋಡಿಸಿದೆ. ಪ್ರತಿಯೊಬ್ಬರಿಗೂ ನೆಮ್ಮದಿಯ ಬದುಕು ಅತ್ಯಗತ್ಯ ಎಂದರು.

# ಮಾದಕ ವಸ್ತು ಮಾರಾಟಕ್ಕೆ ಯತ್ನಿಸುತ್ತಿದ್ದ ಇಬ್ಬರ ಬಂಧನ



ಅಜರುದ್ದೀನ್ ಮೊಹಮದ್ ಮುಸ್ತಾಕ್

ಮಡಿಕೇರಿ, ಫೆ.19–ಮಾದಕ ವಸ್ತು (ಎಂಡಿಎಂಎ) ಮಾರಾಟಕ್ಕೆ ಯತ್ನಿಸುತ್ತಿದ್ದ ಇಬ್ಬರು ಆರೋಪಿಗಳನ್ನು ಮಾಲು ಸಹಿತ ಕುಶಾಲನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕುಶಾಲನಗರದ ಮದಲಾಪುರ ಗ್ರಾಮದ ಅಜರುದ್ದೀನ್ (29) ಹಾಗೂ ಗುಮ್ಮನಕೊಲ್ಲಿಯ ಮೊಹಮದ್ ಮುಸ್ತಾಕ್(29) ಬಂಧಿತರು. ಇವರಿಂದ 13 ಗ್ರಾಂ ಮಾದಕ ವಸ್ತು, 1 ದ್ವಿಚಕ್ರ ವಾಹನ ಮತ್ತು 3 ಮೊಬೈಲ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ.

ಈ ಇಬ್ಬರು ಗುಮ್ಮನಕೊಲ್ಲಿಯಲ್ಲಿ ಮಾದಕ ವಸ್ತು ಮಾರಾಟಕ್ಕೆ ಯತ್ನಿಸುತ್ತಿದ್ದಾಗ ಪೊಲೀಸರು ದಾಳಿ ನಡೆಸಿ ಬಂಧಿಸಿದ್ದಾರೆ. ಸೋಮವಾರಪೇಟೆ ಡಿವೈಎಸ್‌ಪಿ ಗಂಗಾಧರಪ್ಪ ಆರ್.ವಿ, ಕುಶಾಲನಗರ ವೃತ್ತ ನಿರೀಕ್ಷಕ ರಾಜೇಶ್.ಕೆ, ಠಾಣಾಧಿಕಾರಿ ಗೀತಾ ಹಾಗೂ ಸಿಬ್ಬಂದಿ ಕಾರ್ಯಾಚರಣೆ ನಡೆಸಿದ್ದಾರೆ.

ಮಾದಕ ವಸ್ತು ಸೇವನೆ, ಮಾರಾಟ ಮಾಡುವ ವ್ಯಕ್ತಿಗಳು ಕಂಡು ಬಂದಲ್ಲಿ ಸ್ಥಳೀಯ ಪೊಲೀಸ್ ಠಾಣೆ ಹಾಗೂ ಕೆಎಸ್‌ಪಿ ತಂತ್ರಾಂಶದ ಮೂಲಕ ಸಾರ್ವಜನಿಕರು ಮಾಹಿತಿ ನೀಡಬಹುದು. ಮಾದಕ ವಸ್ತು ಚಟುವಟಿಕೆಗಳ ಮಾಹಿತಿ ನೀಡುವವರ ವಿವರಗಳನ್ನು ಗುಪ್ತವಾಗಿಡಲಾಗುವುದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ತಿಳಿಸಿದ್ದಾರೆ.

### ವಿರಾಜಪೇಟೆ ಪುರಸಭೆ ಬಜೆಟ್ ಪೂರ್ವಭಾವಿ ಸಭೆ
# ಮೂಲಸೌಕರ್ಯಕ್ಕೆ ಹೆಚ್ಚು ಅನುದಾನ ನೀಡಲು ತೀರ್ಮಾನ



ವಿ.ಪೇಟೆ ಪುರಭವನದಲ್ಲಿ ನಡೆದ ಪುರಸಭೆ ಬಜೆಟ್ ಪೂರ್ವಭಾವಿ ಸಭೆಯಲ್ಲಿ ಅಧ್ಯಕ್ಷೆ ದೇಚಮ್ಮ ಮಾತನಾಡಿದರು.

ವಿರಾಜಪೇಟೆ, ಫೆ19–ಪುರಸಭೆ ವ್ಯಾಪ್ತಿ ಕುಡಿಯುವ ನೀರು, ಬೀದಿ ದೀಪ, ಚರಂಡಿ ಸ್ವಚ್ಛತೆ, ಪಟ್ಟಣದ ರಸ್ತೆಗಳ ಅಭಿವೃದ್ಧಿಗೆ ಈ ಬಾರಿಯ ಪುರಸಭೆ ಬಜೆಟ್‌ನಲ್ಲಿ ಹೆಚ್ಚು ಅನುದಾನ ನೀಡಲು ಪೂರ್ವಭಾವಿ ಸಭೆಯಲ್ಲಿ ತೀರ್ಮಾನಿಸಲಾಯಿತು.

ಪಟ್ಟಣದ ಪುರಭವನದಲ್ಲಿ ಪುರಸಭೆ ಅಧ್ಯಕ್ಷೆ ಎಂ.ಕೆ.ದೇಚಮ್ಮ ಅಧ್ಯಕ್ಷತೆಯಲ್ಲಿ ನಡೆದ ಬಜೆಟ್ ಪೂರ್ವಭಾವಿ ಸಭೆಯಲ್ಲಿ ನಿವೃತ್ತ ಶಿಕ್ಷಕ ಎ.ವಿ. ಮಂಜುನಾಥ್ ಮಾತನಾಡಿ, ಶಾಸಕರ ಅನುದಾನ ಬಳಸಿಕೊಂಡು ರಸ್ತೆಗಳ ಸಮಗ್ರ ಅಭಿವೃದ್ಧಿಗೆ ಕಾರ್ಯಯೋಜನೆ ರೂಪಿಸಬೇಕು. ಕುಡಿಯುವ ನೀರಿನ ಬೇತ್ರಿ ಯೋಜನೆ 2ನೇ ಹಂತದ ಪೈಪ್‌ಲೈನ್ ಅಳವಡಿಕೆಗೆ ಅಗೆದಿರುವ ರಸ್ತೆಗಳ ಗುಂಡಿ ಮುಚ್ಚಲು ಅನುದಾನ ಒದಗಿಸಬೇಕು. ತೆರಿಗೆ ಸಂಗ್ರಹಕ್ಕೆ ಒತ್ತು ನೀಡಿ, ಆದಾಯ ಹೆಚ್ಚಿಸಲು ಕ್ರಮ ಕೈಗೊಳ್ಳಬೇಕು. ಉದ್ಯಾನ ಮತ್ತು ಅಗತ್ಯವಿರುವ ಕಡೆ ಬಸ್ ತಂಗುದಾಣ ನಿರ್ಮಾಣ, ಬೀದಿ ದೀಪಗಳ ನಿರ್ವಹಣೆ ಹಾಗೂ ಗಡಿನಾಡು ವಿರಾಜಪೇಟೆಯಲ್ಲಿ ಕನ್ನಡ ಸಾಹಿತ್ಯ ಭವನ ನಿರ್ಮಿಸಲು ಬಜೆಟ್‌ನಲ್ಲಿ ಹೆಚ್ಚು ಅನುದಾನ ಮೀಸಲಿಡಬೇಕು ಎಂದು ಒತ್ತಾಯಿಸಿದರು.

ಜೈ ಭಾರತ್ ಆಟೋ ಚಾಲಕರ ಸಂಘದ ಅಧ್ಯಕ್ಷ ಬೆಳ್ಯಪ್ಪ ಮಾತನಾಡಿ, ಪಟ್ಟಣದ ಕಾರು ನಿಲ್ದಾಣ ಡಾಂಬರೀಕರಣಕ್ಕೆ ಬಜೆಟ್‌ನಲ್ಲಿ ಅನುದಾನ ಮೀಸಲಿಡುವಂತೆ ಮನವಿ ಮಾಡಿದರು. ಮಾಜಿ ಸೈನಿಕರ ಸಂಘದ ಅಧ್ಯಕ್ಷ ಚಪ್ಪಂಡ ಹರೀಶ್ ಮಾತನಾಡಿ, ತಾಲೂಕು ಕಚೇರಿ ಎದುರಿನ ಯೋಧರ ಸ್ಮಾರಕ ನಿರ್ವಹಣೆಗೆ ಅಗತ್ಯ ಅನುದಾನ ನೀಡುವಂತೆ ಪ್ರಸ್ತಾಪಿಸಿದಾಗ ಸಭೆ ಒಪ್ಪಿಗೆ ನೀಡಿತು.

ಹಿರಿಯ ನಾಗರಿಕರ ವೇದಿಕೆ ಅಧ್ಯಕ್ಷ ಶಂಕರಿ ಪೊನ್ನಪ್ಪ ಮಾತನಾಡಿ, ಪುರಭವನ ರಿಪೇರಿಗೆ ಅನುದಾನ ಮೀಸಲಿಡಬೇಕು ಹಾಗೂ ಸುಣ್ಣದ ಬೀದಿಯಲ್ಲಿ ಏಕಮುಖ ವಾಹನ ನಿಲುಗಡೆ ನಿಷೇಧಿಸಿ, ಸಿಗ್ನಲ್ ಲೈಟ್ ಅಳವಡಿಸಬೇಕು. ಗಡಿಯಾರ ಕಂಬದ ಗಡಿಯಾರವನ್ನು ಕೂಡಲೇ ರಿಪೇರಿ ಮಾಡಿಸಬೇಕು. ಹಿರಿಯ ನಾಗರಿಕರ ಭವನಕ್ಕೆ ಅನುದಾನ ನೀಡುವಂತೆ ಮನವಿ ಮಾಡಿದರು.

ಪುರಸಭೆ ಸದಸ್ಯರಾದ ಮಹದೇವ ಮತ್ತು ಜೂನಾ ಮಾತನಾಡಿ, ಎರಡು ವರ್ಷದಿಂದ ಪಟ್ಟಣದಲ್ಲಿ ಮಳಿಗೆ ಹರಾಜು ಆಗದಿರುವ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಿದರು. ಪುರಸಭೆ ಮುಖ್ಯಾಧಿಕಾರಿ ನಾಚಪ್ಪ ಸಮಜಾಯಿಸಿಕೆ ನೀಡಿದರು.

ಅಧ್ಯಕ್ಷೆ ದೇಚಮ್ಮ ಮಾತನಾಡಿ, ಈ ಬಾರಿ ಪುರಸಭೆಗೆ ಪಟ್ಟಣದ ಸುತ್ತಲಿನ ಕೆಲ ಗ್ರಾಮಗಳು ಸೇರಿವೆ. ಇಂದಿನ ಸ್ಥಿತಿಗತಿಗಳಿಗೆ ಅನುಗುಣವಾಗಿ ವೈಜ್ಞಾನಿಕವಾಗಿ ಕೆಲಸ ಮಾಡಬೇಕು. ಅನುದಾನ, ತೆರಿಗೆಗಳನ್ನು ಸಮಗ್ರವಾಗಿ ಬಳಸಿ ಅಭಿವೃದ್ಧಿಗೊಳಿಸಲಾಗುವುದು ಎಂದರು.

ಸಭೆಯಲ್ಲಿ ಪುರಸಭೆ ಉಪಾಧ್ಯಕ್ಷೆ ತಬ್ಸಂ, ಸದಸ್ಯರಾದ ಮಹ್ಮದ್ ರಫಿ, ಸಿ.ಕೆ.ಪೃಥ್ವಿನಾಥ್, ಹಿರಿಯರಾದ ಶಂಕರಿ ಪೊನ್ನಪ್ಪ, ಮಾಜಿ ಯೋಧ ಹೆಚ್.ಕೆ.ಗಣೇಶ್ ಮತ್ತಿತರರು ಹಾಜರಿದ್ದರು.

# ಗಾಂಜಾ ಸಾಗಿಸುತ್ತಿದ್ದ ಇಬ್ಬರ ಬಂಧನ



ಹೇಮಂತ್ ರಮೇಶ್

ಮಡಿಕೇರಿ, ಫೆ.19–ಗಾಂಜಾ ಸಾಗಿಸುತ್ತಿದ್ದ ಇಬ್ಬರನ್ನು ಸುಂಟಿಕೊಪ್ಪ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಹೇರೂರು ಗ್ರಾಮದ ಹೇಮಂತ್ (23) ಮತ್ತು ರಮೇಶ್ (34) ಬಂಧಿತರು. ಈ ಇಬ್ಬರು ಸುಂಟಿಕೊಪ್ಪ–ಮಾದಾಪುರ ರಸ್ತೆಯ ಸ್ಮಶಾನ ಬಳಿ ಗಾಂಜಾ ಸಾಗಿಸುತ್ತಿದ್ದಾಗ ದಾಳಿ ನಡೆಸಿದ ಪೊಲೀಸರು ಬಂಧಿಸಿದ್ದಾರೆ. ಆರೋಪಿಗಳನ್ನು ನ್ಯಾಯಾಂಗ ವಶಕ್ಕೆ ನೀಡಲಾಗಿದೆ.

ಸೋಮವಾರಪೇಟೆ ಡಿವೈಎಸ್‌ಪಿ ಆರ್.ವಿ.ಗಂಗಾಧರಪ್ಪ, ಕುಶಾಲನಗರ ವೃತ್ತ ನಿರೀಕ್ಷಕ ಕೆ.ರಾಜೇಶ್, ಸುಂಟಿಕೊಪ್ಪ ಠಾಣಾಧಿಕಾರಿ ಜಗದೀಶ್ ಮತ್ತು ಸಿಬ್ಬಂದಿ ಕಾರ್ಯಾಚರಣೆ ನಡೆಸಿದ್ದಾರೆ.

# ದೌರ್ಜನ್ಯ ವಿರುದ್ಧ ಹೋರಾಟ ಸಾಮಾಜಿಕ ಜವಾಬ್ದಾರಿ
- ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಮುನಿರಾಜು ಅಭಿಮತ
- ನಾಗರಿಕ ಹಕ್ಕುಗಳ ಸಂರಕ್ಷಣೆ ಕುರಿತು ವಿಚಾರ ಸಂಕಿರಣ

ಚಾಮರಾಜನಗರ, ಫೆ.19–ಸಮಾಜದಲ್ಲಿ ಯಾವುದೇ ಶೋಷಣೆ, ದೌರ್ಜನ್ಯ, ಅನ್ಯಾಯ ಎಸಗುವುದು ಕಂಡು ಬಂದಾಗ ಪ್ರಶ್ನಿಸಿ, ನೊಂದವರ ಪರ ನಿಲ್ಲುವುದು ಸಾಮಾಜಿಕ ಜವಾಬ್ದಾರಿಯಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಎನ್.ಮುನಿರಾಜು ತಿಳಿಸಿದರು.

ನಗರದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಬುಧವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಸಮಾಜ ಕಲ್ಯಾಣ ಇಲಾಖೆ, ಜನಹಿತಾಸಕ್ತಿ ಹೋರಾಟ ವೇದಿಕೆ ವತಿಯಿಂದ ಆಯೋಜಿಸಿದ್ದ ನಾಗರಿಕ ಹಕ್ಕುಗಳ ಸಂರಕ್ಷಣೆ ಮತ್ತು ಪರಿಶಿಷ್ಟ ಜಾತಿ, ವರ್ಗಗಳ (ದೌರ್ಜನ್ಯ ಪ್ರತಿಬಂಧ) ಅಧಿನಿಯಮ ಕುರಿತು ವಿಚಾರ ಸಂಕಿರಣ ಹಾಗೂ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಅನ್ಯಾಯ, ಶೋಷಣೆ ನೋಡಿಕೊಂಡು ಸುಮ್ಮನಿರಬಾರದು. ದೌರ್ಜನ್ಯ, ತಾರತಮ್ಯ ಮಾಡುವುದು ಕಂಡು ಬಂದಲ್ಲಿ ಪ್ರಶ್ನಿಸುವುದು ನಾಗರಿಕ ಹಕ್ಕು. ಯಾವುದೇ ಅನ್ಯಾಯವಾದಾಗ ನೋವು ಅನುಭವಿಸಿದವರ ಪರ ನಿಂತು ನೆರವಿಗೆ ಬರಬೇಕು. ಶೋಷಿತರ ರಕ್ಷಣೆಗೆ ಮುಂದಾಗಬೇಕು ಎಂದು ಹೇಳಿದರು.

ಸಂವಿಧಾನ ಪ್ರತಿಯೊಬ್ಬರಿಗೂ ಹಕ್ಕುಗಳನ್ನು ನೀಡಿದೆ. ಹಕ್ಕುಗಳ ಉಲ್ಲಂಘನೆಯಾದಾಗ ಪ್ರಶ್ನಿಸಿ ಸಂರಕ್ಷಿಸಲು ಕಾಯ್ದೆಗಳು ಇವೆ. ನಾಗರಿಕ ಹಕ್ಕು ಸಂರಕ್ಷಣಾ ಅಧಿನಿಯಮ 1955 ಮತ್ತು ಪರಿಶಿಷ್ಟ ಜಾತಿ, ವರ್ಗಗಳ ಅಧಿನಿಯಮ 1989 ಹಕ್ಕು ನೊಂದವರ ರಕ್ಷಣೆಗೆ ಇದೆ. ಇಂತಹ ಹಕ್ಕುಗಳ ಬಗ್ಗೆ ತಿಳಿವಳಿಕೆ ನೀಡಲು ವಿಚಾರಸಂಕಿರಣ ಆಯೋಜಿಸಲಾಗಿದೆ ಎಂದರು.



ಚಾಮರಾಜನಗರದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ನಡೆದ ಕಾರ್ಯಾಗಾರದಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಾಯಿತು.

ದೂರದೃಷ್ಟಿಯುಳ್ಳವರಾಗಿದ್ದ ಅಂಬೇಡ್ಕರ್ ಅವರು ವಿಶ್ವದಲ್ಲೇ ಶ್ರೇಷ್ಠ ಸಂವಿಧಾನವನ್ನು ದೇಶಕ್ಕೆ ನೀಡಿದ್ದಾರೆ. ಎಲ್ಲಾ ವರ್ಗಗಳನ್ನು ಗಮನದಲ್ಲಿಟ್ಟುಕೊಂಡು ರಚಿಸಿರುವ ಸಂವಿಧಾನ ಉತ್ಕೃಷ್ಟವಾಗಿದೆ. ದೇಶದ ಭವಿಷ್ಯ ವಿದ್ಯಾರ್ಥಿಗಳ ಮೇಲೆ ನಿಂತಿದೆ. ರಾಷ್ಟ್ರದ ಅಭಿವೃದ್ಧಿ, ಆರೋಗ್ಯ, ಪ್ರಕೃತಿ ಸೇರಿದಂತೆ ಪ್ರತಿಯೊಂದು ಕ್ಷೇತ್ರದ ಬೆಳವಣಿಗೆಗೆ ಯುವ ಜನರು ಕೊಡುಗೆ ನೀಡಬೇಕು ಎಂದರು.

ಹಿರಿಯ ಸಾಹಿತಿ ಸೋಮಶೇಖರ ಬಿಸಲವಾಡಿ ಮಾತನಾಡಿ, ಸಂವಿಧಾನ ಮೂಲಭೂತ ಹಕ್ಕುಗಳನ್ನು ನೀಡಿದೆ. ಸಮಾನತೆಯ ಹಕ್ಕು ಪರಿಚ್ಛೇದದ ಅಡಿ ಅಸ್ಪೃಶ್ಯತೆ ಹಾಗೂ ದೌರ್ಜನ್ಯ ಪ್ರತಿಬಂಧಕ ಕಾಯ್ದೆ ಅಧಿನಿಯಮಗಳನ್ನು ತರಲಾಗಿದೆ. ಸಮಾನತೆ ಸ್ವಾತಂತ್ರ್ಯ ಪ್ರತಿಯೊಬ್ಬರಿಗೂ ಇದೆ. ಮೇಲು ಕೀಳು ಭಾವನೆಯಿಂದ ನೋಡುವುದು ಸಲ್ಲದು. ದಬ್ಬಾಳಿಕೆ ತಾರತಮ್ಯ ಮಾಡುವಂತಿಲ್ಲ ಎಂದರು.

> ಅಂಕಗಳ ಶಿಕ್ಷಣದ ಜೊತೆಗೆ ನೈತಿಕ ಶಿಕ್ಷಣವು ಮುಖ್ಯ. ಸಂವಿಧಾನಾತ್ಮಕ ಹಕ್ಕು, ಕರ್ತವ್ಯಗಳ ಬಗ್ಗೆ ತಿಳಿದುಕೊಳ್ಳಬೇಕು. ದೌರ್ಜನ್ಯ ಪ್ರತಿಬಂಧ ಕಾಯ್ದೆಗಳ ಬಗ್ಗೆ ಹೆಚ್ಚು ಅರಿವು ಹೊಂದಿದಾಗ ದೌರ್ಜನ್ಯ ಪ್ರಕರಣ ಕಡಿಮೆಯಾಗಲಿದೆ. ಸಂವಿಧಾನ, ಕಾನೂನುಗಳ ಬಗ್ಗೆ ನಡೆಯುವ ಸಂವಾದ, ವಿಚಾರಣಸಂಕಿರಣಗಳಲ್ಲಿ ಹೆಚ್ಚು ಭಾಗವಹಿಸಿ ಜಾಗೃತರಾಗಬೇಕು.
> –ಅರಕಲವಾಡಿ ನಾಗೇಂದ್ರ, ಸಂವಿಧಾನಾತ್ಮಕ ಹಕ್ಕುಗಳ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ

ಜನಹಿತಾಸಕ್ತಿ ಹೋರಾಟ ವೇದಿಕೆ ಜಿಲ್ಲಾಧ್ಯಕ್ಷ ರಾಮಸಮುದ್ರ ಸುರೇಶ್ ಮಾತನಾಡಿ, ತಮ್ಮ ವೇದಿಕೆ ಸಮಾಜಮುಖಿ ಕಾರ್ಯಗಳಲ್ಲಿ ಭಾಗವಹಿಸುತ್ತಿದೆ. ಸರ್ಕಾರದ ಇಲಾಖೆಗಳೊಂದಿಗೆ ಜೊತೆಗೂಡಿ ಅನೇಕ ಕಾರ್ಯಾಗಾರಗಳನ್ನು ಆಯೋಜಿಸಲಾಗುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ಆರಂಭದಲ್ಲಿ ಸಂವಿಧಾನ ಪೀಠಿಕೆ ವಾಚಿಸಲಾಯಿತು. ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನ ಪ್ರಾಂಶುಪಾಲ ಹೆಚ್.ಜಿ.ಲೋಕೇಶ್, ಕಲಾವಿದ ಮಹದೇವು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಎ.ರಮೇಶ್ ಇತರರು ಉಪಸ್ಥಿತರಿದ್ದರು.

# ನಗರದಲ್ಲಿ ಛತ್ರಪತಿ ಶಿವಾಜಿ ಜಯಂತಿ ಆಚರಣೆ



ಚಾಮರಾಜನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಿವಾಜಿ ಭಾವಚಿತ್ರಕ್ಕೆ ಚುಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನಾ ಪುಷ್ಪಾರ್ಚನೆ ಸಲ್ಲಿಸಿದರು.

**ಚಾಮರಾಜನಗರ:** ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಛತ್ರಪತಿ ಶಿವಾಜಿ ಜಯಂತಿಯನ್ನು ಬುಧವಾರ ನಗರದಲ್ಲಿ ಆಚರಿಸಲಾಯಿತು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ಸರಳ ಕಾರ್ಯಕ್ರಮದಲ್ಲಿ ಚುಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನಾ, ಶಿವಾಜಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿದರು. ನಂತರ ಮಾತನಾಡಿದ ಅವರು, ಶಿವಾಜಿ ದೇಶ ಕಂಡ ಮಹಾನ್ ಹೋರಾಟಗಾರರು. ಶಿವಾಜಿ ಕೊಡುಗೆ ಅಪಾರವಾಗಿದೆ. ಶೌರ್ಯದಿಂದ ಸೇನೆಯನ್ನು ಮುನ್ನಡೆಸಿ ದೇಶಕ್ಕಾಗಿ ಹೋರಾಟ ನಡೆಸಿದ್ದಾರೆ ಎಂದರು.

ಅಪರ ಜಿಲ್ಲಾಧಿಕಾರಿ ಗೀತಾ ಹುಡೇದಾ ಮಾತನಾಡಿ, ದೇಶ ಪ್ರೇಮ ಸಾಹಸಕ್ಕೆ ಮತ್ತೊಂದು ಹೆಸರೇ ಶಿವಾಜಿ. ಅವರು 15ನೇ ವಯಸ್ಸಿನಲ್ಲೇ ಯುದ್ಧ ಮಾಡಿದವರು ಎಂದು ಇತಿಹಾಸ ತಿಳಿಸುತ್ತದೆ. ಬ್ರಿಟಿಷರು ಆಳ್ವಿಕೆ ನಡೆಸುತ್ತಿದ್ದ ಸಂದರ್ಭದಲ್ಲಿ ಶಿವಾಜಿ ಕಡಿಮೆ ಸೈನ್ಯದಿಂದ ವೀರಸೇನೆ ಕಟ್ಟಿದರು ಎಂದು ತಿಳಿಸಿದರು.

ಶಿವಾಜಿ ಅವರ ಯುದ್ಧದ ತಂತ್ರಗಾರಿಕೆ, ಸ್ವಾಭಿಮಾನ, ದೇಶಭಕ್ತಿ, ಕೌಶಲದಿಂದ ಹೆಸರಾಗಿದ್ದಾರೆ. ಅವರ ಸಾಹಸ ಎಲ್ಲರಿಗೂ ಪ್ರೇರಣೆಯಾಗಿದೆ. ಶಿವಾಜಿ ಸಾಮ್ರಾಜ್ಯವನ್ನು ಕಟ್ಟಲು ಅವರ ತಾಯಿ ಪ್ರೇರಣೆಯಾಗಿದ್ದರು. ಮಕ್ಕಳಲ್ಲಿ ಚಿಕ್ಕ ವಯಸ್ಸಿನಲ್ಲೇ ಸ್ವಾಭಿಮಾನ, ರಾಷ್ಟ್ರಪ್ರೇಮ ಬೆಳಸಬೇಕು ಎಂದರು.

ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಉದಯ್ ಕುಮಾರ್, ಸಮುದಾಯದ ಮುಖಂಡರು ಉಪಸ್ಥಿತರಿದ್ದರು.

# ಎಸ್ಸಿ, ಎಸ್ಟಿ ಹಿತರಕ್ಷಣಾ ಸಮಿತಿ ಸಭೆ ಮುಂದೂಡಿಕೆ

ಚಾಮರಾಜನಗರ, ಫೆ.19–ತಹಸೀಲ್ದಾರ್ ಅಧ್ಯಕ್ಷತೆಯಲ್ಲಿ ಫೆ.20ರಂದು ನಿಗದಿಯಾಗಿದ್ದ ತಾಲೂಕು ಮಟ್ಟದ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಹಿತರಕ್ಷಣಾ ಸಮಿತಿ ಸಭೆಯನ್ನು ಕಾರಣಾಂತರಗಳಿಂದ ಮುಂದೂಡಲಾಗಿದೆ ಎಂದು ತಾಲೂಕು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜಯಶಂಕರ ನಿಧನ



ಚಾಮರಾಜನಗರ, ಫೆ.19–ನಗರದ ರಾಮಸಮುದ್ರ ಬಡಾವಣೆಯ ದುರ್ಗಿ ಬೀದಿ ನಿವಾಸಿ ಹಾಗೂ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನ ಸೂಪರಿಡೆಂಟ್ ಜಯಶಂಕರ(38) ಅನಾರೋಗ್ಯದಿಂದ ಬುಧವಾರ ನಿಧನರಾದರು.

ಮೃತರು ತಾಯಿ, ಪತ್ನಿ, ಪುತ್ರಿ ಹಾಗೂ ಇಬ್ಬರು ಸಹೋದರರನ್ನು ಅಗಲಿದ್ದಾರೆ. ಗುರುವಾರ ಮಧ್ಯಾಹ್ನ ರಾಮಸಮುದ್ರದ ವೀರಶೈವ–ಲಿಂಗಾಯತ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

# ಬಸವಣ್ಣ ಪುತ್ಥಳಿ ಸ್ಥಳಾಂತರಕ್ಕೆ ಒತ್ತಾಯಿಸಿ ಪ್ರತಿಭಟನೆ

ಚಾಮರಾಜನಗರ, ಫೆ.19–ಜಿಲ್ಲಾಡಳಿತ ಭವನದ ಆವರಣದಲ್ಲಿ ನಿರ್ಮಾಣಗೊಳ್ಳುತ್ತಿರುವ ಬಸವಣ್ಣನವರ ಪುತ್ಥಳಿಯನ್ನು ಮೂಲ ಸ್ಥಳಕ್ಕೆ ಸ್ಥಳಾಂತರಿಸಬೇಕು ಎಂದು ಒತ್ತಾಯಿಸಿ ನಗರದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಸ್ವಾಭಿಮಾನಿ ಹೋರಾಟ ಸಮಿತಿಯಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ಚಾಮರಾಜೇಶ್ವರ ದೇವಸ್ಥಾನ ಮುಂಭಾಗ ಸಮಾವೇಶಗೊಂಡ ಪ್ರತಿಭಟನಾಕಾರರು, ಅಲ್ಲಿಂದ ಭುವನೇಶ್ವರಿ ವೃತ್ತ, ಬಿ.ರಾಚಯ್ಯ ಜೋಡಿರಸ್ತೆ ಮೂಲಕ ಜಿಲ್ಲಾಡಳಿ ಭವನದ ಪ್ರವೇಶ ದ್ವಾರದವರೆಗೆ ಮೆರವಣಿಗೆ ನಡೆಸಿದರು. ನಂತರ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದರು.

ಸಮಿತಿಯ ಸಿ.ಎಂ.ಕೃಷ್ಣ ಮಾತನಾಡಿ, ಜಿಲ್ಲಾಡಳಿತ ಭವನ ಆವರಣದ ಅಂಬೇಡ್ಕರ್ ಪುತ್ಥಳಿ ಎದುರು ರಾಜಪ್ರಭುತ್ವ ವಿನ್ಯಾಸದ ಬಸವಣ್ಣನವರ ಪುತ್ಥಳಿ ಸ್ಥಾಪಿಸಿರುವುದು ಕಾನೂನು ಬಾಹಿರವಾಗಿದೆ. ಬಸವಣ್ಣರವರ ಪುತ್ಥಳಿ ಅನಾವರಣಗೊಳಿಸದೆ, ಮೂಲ ಸ್ಥಾನಕ್ಕೆ ಸ್ಥಳಾಂತರಗೊಳಿಸಬೇಕು ಹಾಗೂ ರಾತ್ರೋರಾತ್ರಿ ಅತಿಕ್ರಮಣ ಪ್ರವೇಶ ಮಾಡಿರುವವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಜಿಲ್ಲಾ ರಂಗಮಂದಿರ ಮುಂಭಾಗ ಬಸವಣ್ಣನವರ ಪುತ್ಥಳಿ ನಿರ್ಮಿಸಲು ನಿರ್ಣಯಿಸಿ, ಅಂದಿನ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ವಿ.ಸೋಮಣ್ಣ ಅವರು 2023ರ ಜನವರಿಯಲ್ಲಿ ಗುದ್ದಲಿ ಪೂಜೆ ಮತ್ತು ಶಿಲಾನ್ಯಾಸ ನೆರವೇರಿಸಿದ್ದರು. ಆ ಸ್ಥಳದಲ್ಲೇ ಬಸವಣ್ಣನವರ ಪುತ್ಥಳಿ ಸ್ಥಾಪಿಸಬೇಕು. ಇದಕ್ಕೆ ನಮ್ಮ ವಿರೋಧವಿಲ್ಲ ಎಂದರು.



ಚಾಮರಾಜನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿ ನಿರ್ಮಿಸುತ್ತಿರುವ ಬಸವಣ್ಣನವರ ಪುತ್ಥಳಿಯನ್ನು ಮೂಲ ಸ್ಥಳಕ್ಕೆ ಸ್ಥಳಾಂತರಿಸಬೇಕು ಎಂದು ಒತ್ತಾಯಿಸಿ ಡಾ.ಬಿ.ಆರ್.ಅಂಬೇಡ್ಕರ್ ಸ್ವಾಭಿಮಾನಿ ಹೋರಾಟ ಸಮಿತಿಯಿಂದ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನೆಯಲ್ಲಿ ಕದಂಬ ಅಂಬರೀಶ್, ಹೊಂಗನೂರು ನಟರಾಜ್, ಭೋಗಾಪುರ ನಾಗೇಶ್, ಕೆಂಪರಾಜು ಹೊಂಗನೂರು, ರಂಗಸ್ವಾಮಿ ಕಾಗಲವಾಡಿ ಇತರರು ಭಾಗವಹಿಸಿದ್ದರು.

# ಪಾರ್ವತಿ ಬೆಟ್ಟದಲ್ಲಿ ಅಪರಿಚಿತ ಶವ ಪತ್ತೆ

ಚಾಮರಾಜನಗರ, ಫೆ.19–ಹನೂರು ತಾಲೂಕಿನ ಚಂಗವಾಡಿ ಗ್ರಾಮದ ಪಾರ್ವತಿ ಬೆಟ್ಟದ ದೇವಸ್ಥಾನ ಹಿಂಭಾಗ ಮರದ ಬಳಿ ಅಪರಿಚಿತ ಪುರುಷನ ಶವ ಪತ್ತೆಯಾಗಿದೆ.

ಮೃತ ವ್ಯಕ್ತಿಗೆ ಸುಮಾರು 30 ರಿಂದ 40 ವರ್ಷವಾಗಿದ್ದು, ಶವದ ಎರಡು ಕಾಲುಗಳನ್ನು ಶಬರಿಮಲೆ ಮಾಲಾಧಾರಿಗಳು ಧರಿಸುವ ಕಪ್ಪು ಬಟ್ಟೆಯಿಂದ ಕಟ್ಟಲಾಗಿದೆ. ಕಡುನೀಲಿ ಮತ್ತು ಬ್ರೌನ್ ಮಿಶ್ರಿತ ಬಣ್ಣದ ಚೆಕ್ಸ್ ಶರ್ಟ್ ಹಾಗೂ ನೀಲಿ ಬಣ್ಣದ ಶೇಡೆಡ್ ಜೀನ್ಸ್ ಧರಿಸಿದ್ದು, ವಾರಸುದಾರರು ಇದ್ದಲ್ಲಿ ಹನೂರು ಪೊಲೀಸ್ ಠಾಣೆ ಅಥವಾ ದೂ.ಸಂ: 08224–268803 ಅನ್ನು ಸಂಪರ್ಕಿಸುವಂತೆ ಠಾಣೆ ಆರಕ್ಷಕ ನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕೆಸ್ತೂರು ಸರ್ಕಾರಿ ಶಾಲೆಯಲ್ಲಿ ವಿಜ್ಞಾನ ವಸ್ತುಪ್ರದರ್ಶನ

ಯಳಂದೂರು: ತಾಲೂಕಿನ ಕೆಸ್ತೂರು ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ವಿಜ್ಞಾನ ವಸ್ತು ಪ್ರದರ್ಶನ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಸಮೀಪದ ಕಟ್ನವಾಡಿ, ಕೆ.ಹೊಸೂರು, ಬಸವಪುರ, ಮಲ್ಲಿಹಳ್ಳಿ, ಕೆಸ್ತೂರು 1 ಮತ್ತು 2ನೇ ಶಾಲೆಯ ವಿದ್ಯಾರ್ಥಿಗಳು ಆಗಮಿಸಿ, ವಸ್ತು ಪ್ರದರ್ಶನದಲ್ಲಿ ಮಾದರಿ ವಿಜ್ಞಾನ ವಸ್ತುಗಳ ಬಗ್ಗೆ ಮಾಹಿತಿ ಪಡೆದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಎಸ್‌ಡಿಎಂಸಿ ಅಧ್ಯಕ್ಷ ಸಿದ್ದರಾಜು, ಕೆಸ್ತೂರು ಸರ್ಕಾರಿ ಪ್ರೌಢಶಾಲೆ ತಾಲೂಕಿನಲ್ಲೇ ಮಾದರಿಯಾಗಿದೆ. ಈ ಶಾಲೆಗೆ ಪ್ರತಿವರ್ಷ ಉತ್ತಮ ಫಲಿತಾಂಶ ಬರುತ್ತಿದೆ. ಗುಣಮಟ್ಟ ಶಿಕ್ಷಣದ ಜೊತೆಗೆ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವನೆ ಬೆಳಸುವಂತಹ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ. ವಿದ್ಯಾರ್ಥಿಗಳು ಇಂತಹ ವಸ್ತು ಪ್ರದರ್ಶನದಲ್ಲಿ ತಮ್ಮ ಪ್ರತಿಭೆಗಳನ್ನು ಪ್ರದರ್ಶಿಸಬೇಕು ಎಂದರು.

ಇಂದಿನ ತಾಂತ್ರಿಕ ಹಾಗೂ ಸ್ಪರ್ಧಾತ್ಮಕ ಯುಗದಲ್ಲಿ ಕೇವಲ ಅಕ್ಷರಾಭ್ಯಾಸ ಇದ್ದರೆ ಸಲ್ಲದು, ಜೊತೆಗೆ ವಿಜ್ಞಾನದ ಅವಶ್ಯಕತೆ ಬೇಕು. ಅದರಲ್ಲೂ ಪ್ರಾಥಮಿಕ ಹಾಗೂ ಪ್ರೌಢಶಾಲೆ ಹಂತದಲ್ಲೇ ಮಕ್ಕಳಿಗೆ ವಿಜ್ಞಾನ ಶಿಕ್ಷಣದ ಬಗ್ಗೆ ಅಭಿರುಚಿ ಬೆಳೆಸುವುದು ಸೂಕ್ತ. ವಿದ್ಯಾರ್ಥಿಗಳು ಸಾಧನೆ ಮಾಡಿದರೆ ಸಮಾಜದಲ್ಲಿ ಗೌರವ ಹೆಚ್ಚಾಗುತ್ತದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಎಸ್‌ಡಿಎಂಸಿ ಉಪಾಧ್ಯಕ್ಷ ಕುಮಾರ್, ಶಾಲೆ ಮುಖ್ಯ ಶಿಕ್ಷಕ ಉಮಶಂಕರ್, ಎಸ್‌ಡಿಎಂಸಿ ಸದಸ್ಯ ಪರಶಿವಮೂರ್ತಿ, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.



ಕೆಸ್ತೂರು ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ನಡೆದ ವಸ್ತು ಪ್ರದರ್ಶನದಲ್ಲಿ ವಿದ್ಯಾರ್ಥಿಗಳು ವಿವಿಧ ವಿಜ್ಞಾನ ಮಾದರಿಗಳನ್ನು ಪ್ರದರ್ಶಿಸಿದರು.

# ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

---

**ಬೇಕಾಗಿದ್ದಾರೆ**
ಕನ್ನಡ, ಇಂಗ್ಲಿಷ್ ಟೈಪಿಸ್ಟ್ / ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ. (PUC Pass or Fail Two Wheeler must.)
DTP Operators ಬೇಕಾಗಿದ್ದಾರೆ
Office Supervisor ಬೇಕಾಗಿದ್ದಾರೆ
Telecaller ಬೇಕಾಗಿದ್ದಾರೆ.
9606975013
Whatsapp 7349057709

**Looking for 40x60 or 50x80 commercial property in Mysore**
for immediate registration. Property should be within and nearby ring road. Preferably on NEW KANTHARAJ URS road ...near christ school
8884616461
8792235466

**ಬೇಕಾಗಿದ್ದಾರೆ**
ಮೊಬೈಲ್ ಫೋನ್ ಶೋರೂಮ್‌ಗೆ ಕೆಲಸಕ್ಕೆ ಬೇಕಾಗಿದ್ದಾರೆ.
ಆಸಕ್ತರು ಸಂಪರ್ಕಿಸಿ.
9886409722

**ಸುವರ್ಣಾ ಯಾತ್ರಾ**
9 ದಿನಗಳ ನೇಪಾಳ ಪ್ರವಾಸ 15/3/25, 9 ದಿನಗಳ ವೈಷ್ಣೋದೇವಿ ಮತ್ತು ಕಾಶ್ಮೀರ ಪ್ರವಾಸ 1/4/25, 14 ದಿನಗಳ ಚಾರ್ ಧಾಮ್ ಪ್ರವಾಸ 2/5/25
9019462508
6360146483

**ಬೇಕಾಗಿದ್ದಾರೆ**
Xerox ಅಂಗಡಿಯಲ್ಲಿ ಕೆಲಸ ಮಾಡಲು Computer Knowledge ಇರುವವರು ಬೇಕಾಗಿದ್ದಾರೆ. (Lady)
9972258425

**ಸೋಲಾರ್ ವಾಟರ್ ಹೀಟರ್ Solar Water Heater**
ಸೇಲ್ಸ್, ಸರ್ವೀಸ್ ರಿಪೇರಿ, ಎಕ್ಸ್‌ಚೇಂಜ್ ಹಾಗೂ ಬಿಡಿ ಭಾಗಗಳಿಗಾಗಿ ಸಂಪರ್ಕಿಸಿ
Vinaykrishna
9611648636

**ಬಾಡಿಗೆಗೆ ದೊರೆಯುತ್ತದೆ**
100x40, 1st ಫ್ಲೋರ್ ಕಮರ್ಷಿಯಲ್ ಜಾಗ, ಲಕ್ಷ್ಮೀಪುರಂ, ಮೈಸೂರು.
Mob: 8892835885

---

**REQUIRED**
Finance EXECUTIVE For HUNSURU AND MYSORE
Qualification: Any Degree
E-mail: su.ravi1011@gmail.com
AND VISIT STAR BAJAJ SHOWROOM HUNSUR AND MYSORE
7975797947

**REQUIRED**
SALES EXECUTIVE FIELD-4 NO (M)
SALES RECEPTIONIST (FEMALE) 1 NO
(FRESHERS CAN ALSO APPLY)
Drop your resume to vijoysankar@gmail.com
STAR BAJAJ
Authorised Main Dealer for Bajaj Auto Ltd., V V Mohalla Temple Road Mysore-570002
9980751999

**GOKULAM RESTAURANT**
Most Affordable VEG & Non Veg Restaurant in Vontikoppal and Gokulam
38/3, 1st main, VV Mohalla Opp. Nirmala Convent.
Speciality in Cakes, Since 1988
7899729892

**ಉಚಿತ ಕಣ್ಣಿನ ತಪಾಸಣಾ ಶಿಬಿರ ಮೈಸೂರು ರೆಟಿನಾ ಕೇರ್**
ದಿನಾಂಕ:– 24/02/2025
ಸಮಯ:– ಸೋಮವಾರ
ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 2 ಗಂಟೆವರೆಗೆ
ನೋಂದಣಿಗಾಗಿ ಸಂಪರ್ಕಿಸಿ:–
0821-2543244
7338369364
ಬಸ್ ಸಂಖ್ಯೆ:– 69D, 69A, 91B

**ಬೋಳು ತಲೆಯ ಸಮಸ್ಯೆಯೇ?**



SMART HAIR FIXING
# 574, 9th Cross, Anikethana Road, kuvempunagar, Mysuru
MYSURU 9611028523 BANGALORE 9343142258

**rapido BIKE TAXI — ಬೇಕಾಗಿದ್ದಾರೆ**
ರ್‍ಯಾಪಿಡೋ ಬೈಕ್ ಟ್ಯಾಕ್ಸಿ ಕ್ಯಾಪ್ಟನ್ ಆಗಿ ಸೇರಿ ದಿನಕ್ಕೆ 1000/– ವರೆಗೆ ಗಳಿಸಿ
ಅಗತ್ಯವಿರುವ ದಾಖಲೆಗಳು RC, DL, Android ಮೊಬೈಲ್ ಆಧಾರ್/ Pan ಕಾರ್ಡ್, ಸಂಪರ್ಕಿಸಿ:
04048937617

**ಉಚಿತ ತರಬೇತಿ**
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

---

**ಛತ್ರ ಖಾಲಿ ಇದೆ**
8 ಮತ್ತು 9ನೇ ಮಾರ್ಚ್ 2025
GLN Convention Hall Bogadi, Mysuru
9845129666
7411250999

**ಮನೆ ಮಾರಾಟಕ್ಕಿದೆ**
1312, SF
35 ಸಾವಿರ ಬಾಡಿಗೆ ಬರುತ್ತದೆ. 3ನೇ ಕ್ರಾಸ್, 4ನೇ ಮೇನ್, ವಿದ್ಯಾರಣ್ಯಪುರಂ
9739848333

**ಕೇವಲ 2000 ರೂಪಾಯಿಗೆ**
ದಪ್ಪನೆಯ Double ಹಾಸಿಗೆ 2 ದಿಂಬು ಸಹ ಒಂದು ಬೆಡ್‌ಶೀಟ್ ಮತ್ತು 2 ದಿಂಬಿನ ಕವರ್ ಮತ್ತು ಒಂದು ಸೂಟ್‌ಕೇಸ್ ರಗ್ಗು ಸೇರಿ.
8884179981

**ಸಂಪು ಮತ್ತು ಟ್ಯಾಂಕ್**
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

**R.V. CONSTRUCTIONS**
Rate starts from Rs. 1690 per sq.ft.
No advance
Billing on stage by stage completion.
Office: 7975110915
D. Subbaiah Road, Mysore
Assist Major Bank Loans

**ಸಂಪು ಮತ್ತು ಟ್ಯಾಂಕ್**
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7975101020

**OFFICE SPACE FOR RENT 600 SQ.FT**
Address: Laxman Tower, 1049, 2nd Floor, 2nd Main Road, SHJ Road, Vidyaranyapuram, Mysore.
SPACE 600 SQ.FT.
9880142573, 9945351266

---

**ಮಳಿಗೆ ಖಾಲಿಯಿದೆ**
1200 ಅಡಿ Commercial ಜಾಗ Ground Floor ಹಾಗೂ 1st Floor ಬಾಡಿಗೆಗೆ ಲಭ್ಯವಿದೆ.
ಆಸಕ್ತರು ಸಂಪರ್ಕಿಸಿ:
9902356334
ಸ್ಥಳ: ನಾರಾಯಣಶಾಸ್ತ್ರಿ ರಸ್ತೆ, ಯೂನಿಯನ್ ಬ್ಯಾಂಕ್ ಹತ್ತಿರ, ದೇವರಾಜ ಮೊಹಲ್ಲಾ, ಮೈಸೂರು

**ಬೇಕಾಗಿದ್ದಾರೆ**
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಕ್ಯಾಷಿಯರ್ ಬೇಕಾಗಿದ್ದಾರೆ. ಇಚ್ಛೆಯುಳ್ಳವರು ಸಂಪರ್ಕಿಸಿ:
ವಿಳಾಸ: ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್ ಕರ್ನಾಟಕ ಬ್ಯಾಂಕ್ ಹತ್ತಿರ, ನಜರ್‌ಬಾದ್, ಮೈಸೂರು

**ಮಾರುತಿ ಟ್ಯೂಬ್ ವೆಲ್ಸ್ (ರಿ)**
ಕರ್ನಾಟಕ ಅಂತರ್ಜಲ ಪ್ರಾಧಿಕಾರದಲ್ಲಿ ನೋಂದಾಯಿಸಲಾಗಿದೆ ನೇರವಾಗಿ ಮಾಲೀಕರಿಂದ
ಬೋರ್‌ವೆಲ್ ಡ್ರಿಲ್ಲಿಂಗ್ @
ಸಿಟಿ - ₹75/- ಸೈಟ್ ಬೋರ್‌ವೆಲ್
ಗ್ರಾಮೀಣ - ₹85/- ಕೃಷಿ ಬೋರ್‌ವೆಲ್
• ಬ್ರೋಕರ್ ಇಲ್ಲ • ಕಮಿಷನ್ ಇಲ್ಲ
8184000444

**ಬೇಕಾಗಿದ್ದಾರೆ**
ಪೆಟ್ರೋಲ್‌ಬಂಕ್‌ನಲ್ಲಿ ಹೆಲ್ಪರ್ ಮತ್ತು ಕ್ಯಾಷಿಯರ್ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
ಸ್ಥಳ: ವಿಜಯನಗರ ವಾಟರ್ ಟ್ಯಾಂಕ್ ಹತ್ತಿರ, ಮೈಸೂರು ನಗರ
6364748485

**ಸ್ಕಂದ ಪ್ರಾಪರ್ಟೀಸ್ SKANDA PROPERTIES**
Building Construction • Online Plan Approval
Building Plan & Design • Bank Loan Assistance
Site Supervision • Real Estate (Buy/Sale: House, Land & Site)
Ph : 9379888558

**HOUSE FOR SALE**
20x30 fully renovated 3 BHK duplex house Dattagalli 3rd Stage.
Rs. 73 Lakhs (Nego.)
Mob: 8147706492

**ಸಂಪು ಮತ್ತು ಟ್ಯಾಂಕ್**
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

---

**WANTED FOR PART TIME JOB FEMALES ONLY**
As Customer Consultant at MNC Company No Target No Investment Walk in Interview at CH 9/2 (Old Number 2661/74) 2nd Main, 5th Cross, Mahendra Arcade Near Devi Annex Ist Floor, Saraswathipuram, Mysore-09

**ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ**
ಸಗಟು ಔಷದ ವ್ಯಾಪಾರ (Pharmaceutical Distributor ಮಳಿಗೆಯಲ್ಲಿ ಕೆಲಸ ಮಾಡಲು 30 ವರ್ಷದ ಒಳಗಿನ ಹುಡುಗರು ಬೇಕಾಗಿದ್ದಾರೆ. ತಿಂಗಳಿಗೆ 10,000/– ಸಂಬಳ ಅವಶ್ಯಕತೆ ಇರುವವರು/ದೂರವಾಣಿ ಸಂಪರ್ಕಿಸಿ:
9902356334
9902356331

**ತಕ್ಷಣ ಬೇಕಾಗಿದ್ದಾರೆ - Wanted**
Sri Sapthagiri Builders & Developers
TELECALLERS - 2
MARKETING HEAD - 3
Mob: 9980524644, 9591828444, 8095856607

**REQUIRED**
Teachers for the reputed CBSE School in Mysore City. Residential, Non-Residential for all the subject & PE Teachers. Contact:
7676522224, 8495983613

**WANTED**
Teaching staff for reputed institution (Experience Preferred) for all subjects. Transport facilities available.
Drop your resume through WhatsApp Contact No.
8971577685, 9980631121

**ಸಂಪು ಮತ್ತು ಟ್ಯಾಂಕ್**
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8296341145

**WANTED**
Truck Drivers for 24 feet CNG vehicles and 11-10 container vehicles for Mysore local and Bangalore, PF and ESI facility available. Above 50 years age person can apply.
Mob: 9341623350

---

**ವಧು ಬೇಕಾಗಿದ್ದಾರೆ**
ST Group ಜಾತಿ ಭೇದವಿಲ್ಲ 30 ವರ್ಷದ ಹುಡುಗಿ ಬೇಕಾಗಿದ್ದಾರೆ.
8660976051

**ಕಂಕಣ ಭಾಗ್ಯ**
ಒಕ್ಕಲಿಗ, ಕುರುಬ, ಲಿಂಗಾಯತ್, ನಾಯಕ, SC ನಮ್ಮಲ್ಲಿ ಎಲ್ಲಾ ಜಾತಿಯ ವಧು–ವರರು, ವಿಚ್ಛೇದಿತರು, ವಿಧುರ–ವಿಧವೆಯರು ತಕ್ಷಣ ಸಂಪರ್ಕಿಸಿ:
9071577131

**ಬೇಕಾಗಿದ್ದಾರೆ**
ಮೇಟಗಳ್ಳಿ ಬಸವೇಶ್ವರನಗರ ಹೋಟೆಲ್ ಕೆಲಸಕ್ಕೆ ಮಹಿಳೆಯರು ಮತ್ತು ಪುರುಷರು ಹಾಗೂ ವಿಜಯನಗರ ಹಾಸ್ಪಿಟಲ್‌ಗೆ ಹೌಸ್ ಕೀಪಿಂಗ್ & ಸೆಕ್ಯೂರಿಟಿ ಸೂಪರ್‌ವೈಸರ್ ಮಹಿಳೆಯರು ಮತ್ತು ಪುರುಷರು & ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
9353646312
9606701359

**MUDA APPROVED Site for Sale**
40x60 West Facing Commercial Site, 60ft Road
URS Layout Shrirampura Mysore
Just 300 Meter From Ring Road
Ready to Register
Bank Loan Available
Call for More Details
☎-9620349543

**JCB ಡ್ರೈವರ್ ಬೇಕಾಗಿದ್ದಾರೆ**
ನಂಜನಗೂಡಿನಲ್ಲಿ ಜೆ.ಸಿ.ಬಿ. ಹಾಗೂ ಟ್ರ್ಯಾಕ್ಟರ್ ಓಡಿಸಲು ಚಾಲಕರು ಬೇಕಾಗಿದ್ದಾರೆ. ವಸತಿ ಮತ್ತು ಊಟದ ಸೌಲಭ್ಯವಿರುತ್ತದೆ.
9880059793

**ಉದ್ಯೋಗ ಅವಕಾಶ**
ಒಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ / ಯುವತಿಯರು ಬೇಕಾಗಿದ್ದಾರೆ. ESI / PF ಸೌಲಭ್ಯ ಉಂಟು, ವೇತನ – ರೂ. 15200 – 86,100
7337645977, 7892046990

**ಬೇಕಾಗಿದ್ದಾರೆ**
ವಯಸ್ಸಾದವರನ್ನು ನೋಡಿಕೊಳ್ಳಲು ಅನುಭವ ಇರುವ, ಇಲ್ಲದೆ ಇರುವ ಹುಡುಗ ಹುಡುಗಿಯರು ಬೇಕಾಗಿದ್ದಾರೆ. ವಯಸ್ಸು 18 ರಿಂದ 50 ವರ್ಷ ಒಳಗೆ, ನಮ್ಮ ಸಂಸ್ಥೆಯಲ್ಲಿ ಉಳಿದುಕೊಂಡು ಕೆಲಸ ಮಾಡುವವರಿಗೆ ಮೊದಲು ಆದ್ಯತೆ ಮೈಸೂರು.
Mob: 9513203333

---

**ಉಚಿತ ಕಣ್ಣು ತಪಾಸಣೆ ಉಚಿತ ಕನ್ನಡಕ ವಿತರಣೆ**
23/02/25 ರಂದು ಮೈಸೂರಿನ ಪುರಭವನದಲ್ಲಿ ಕಣ್ಣು ತಪಾಸಣೆ
ಕಸ್ತೂರಿಚಂದ್ರ ಸಾಹಿತ್ಯ ಪರಿಷತ್ತು
88676=88676

**FOR RENT**
Commercial Space Suitable for Industrial/Godown
Power : 27HP
1500 Sqft
Near BB Mill, Bannimantap
8904134763

**Solar Water Heaters**





SUNZONE SOLAR SYSTEM
VM Double Road, Kuvempunagar, Mysuru
9845175443

**ಬೇಕಾಗಿದ್ದಾರೆ**
ಶ್ರೀರಂಗಪಟ್ಟಣದ ಸಾಯಿಬಾಬಾ ಮಂದಿರ ಬಳಿ ಗಿಡಗಳಿಗೆ ನೀರು ಹಾಕಲು, ಡ್ರೈವರ್ ಹಾಗೂ ಮನೆ ಕೆಲಸಕ್ಕೆ ಸಹಾಯ ಮಾಡುವ ಜನರ ಅಗತ್ಯವಿದೆ. ಸೇವಾ ಮನೋಭಾವ ಹೊಂದಿದವರು ಸಂಪರ್ಕಿಸಿ.
+91 89515 17993

**FOR SALE**
32x40 Fourplex N+E Corner House For Sale
BEML Layout Srirampura 2nd Stage Mysore
9845995584

**ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ**
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

**PRAKRUTHI PROPERTIES**
SITES FOR SALE
40x60 Commercial Site Nr Bramharamba Chltry,
40x60 Properties @ Ramakrishna Nagar
20x45 House @ Kuvempu Ngr
20x30, 30x40 Sites & House @ Dattagalli, Jayanagar, RK Ngr
30x50 Nr Mookambika Lyt,HD Kote Rd
Sites also available Near RT Nagar, Bogadi in & around Mysore
95386 90359, 90359 90359

---

**PREMIUM SITE FOR SALE**
30X40 W/F & S/W CORNER in Lakshmipuram, Vasan Eye Care Back Side
8792207164
9986300002

**ಫ್ಲೋರ್ ಮಿಲ್ ವಹಿಸಿಕೊಂಡು ನಡೆಸುವವರು ಬೇಕಾಗಿದ್ದಾರೆ**
ಫ್ಲೋರ್ ಮಿಲ್‌ನಲ್ಲಿ ಉತ್ತಮ ಆದಾಯ ವಿರುವ ಫ್ಲೋರ್‌ಮಿಲ್ ವಹಿಸಿಕೊಂಡು ನಡೆಸುವವರು ಬೇಕಾಗಿದ್ದಾರೆ. ಸಂಪರ್ಕಿಸಿ:
9740677338

**ಗನವ ಫೌಂಡೇಶನ್ (ರಿ.)**
ವಯಸ್ಸಾದ ವೃದ್ಧರನ್ನು ನಮ್ಮ ಸುಸಜ್ಜಿತವಾದ ಆಶ್ರಮದಲ್ಲಿ ಮೆಡಿಕಲ್ ಸೌಲಭ್ಯದೊಂದಿಗೆ ರುಚಿಯಾದ ಮತ್ತು ಶುಚಿಯಾದ ಸಸ್ಯಾಹಾರಿ ಆಹಾರವನ್ನು ನೀಡಿ ನೋಡಿಕೊಳ್ಳುತ್ತೇವೆ.
ಸ್ಥಳ: ನಾಯ್ಡು ನಗರ, ಮೈಸೂರು
Mob: 9916905188

**Mahendra Developers MUDA APPROVED**
SITE / SITE WITH HOME
WE BUILD AS PER YOUR REQUIREMENT.
Close to st Joseph School, Mysuru
20x40 30x50 60x40
7411817999 / 8123387555

**COMMERCIAL SITE FOR SALE**
40x55 South Gaddige Road, Bogadi
Call: 9880273834

**ಹೊಸ ಮನೆ ಮಾರಾಟಕ್ಕಿದೆ**
20x30 N/F, ground, ಇಲವಾಲ, ವಿನಾಯಕ ಗಾರ್ಡನ್ ಸಿಟಿ, Near Kala Bharathi School.
9611517389, 9019500928

**JOBNET**
ಮೊಬೈಲ್‌ನಲ್ಲಿ ಕೆಲಸ
ಮನೆಯಲ್ಲೇ ಕುಳಿತು ಮೊಬೈಲ್ ಮೂಲಕ ಫಾರಂ ಫಿಲ್ಲಿಂಗ್ ಮಾಡಿ ಪ್ರತಿ ತಿಂಗಳಿಗೆ 10,000 ದಿಂದ 20,000 ಸಂಪಾದಿಸಿ.
Mob: 9731891409

---

**ಕಛೇರಿ ಕೆಲಸಕ್ಕೆ ಬೇಕಾಗಿದ್ದಾರೆ**
ವಯಸ್ಸು: 22 to 30
ವಿದ್ಯಾಭ್ಯಾಸ: ಯಾವುದೇ ಪದವಿ MBA/M.Com
ಸಂಬಳ: 15000 to 25000
ಹುದ್ದೆಗಳು: ನುರಿತ ಟೆಲಿಕಾಲರ್ –04 (Female)
Data Manager-02 (Male)
Office Incharge -02 (Male & Female)
ಸ್ಥಳ: ಮೈಸೂರು
7411122619

**ಬಾಡಿಗೆಗೆ/ಭೋಗ್ಯಕ್ಕೆ**
ಆರ್.ಸಿ.ಸಿ. ಮನೆ (ಸಣ್ಣ ಕುಟುಂಬಕ್ಕೆ) ಆದ್ಯತೆ 1ನೇ ಮಹಡಿ, 4ನೇ ಮೇನ್, ಚಾಮುಂಡಿಪುರಂ, (ಅಪೂರ್ವ ಹೋಟೆಲ್ ಎದುರು) ಮೈಸೂರು
8971220695

**SITE FOR SALE**
DTCP approved N/W Corner 40x23, 934 sq.ft. at Thalur Bus Stand, Hullahalli Main Road (Taluru-Jayapura Hobli).
Rate: Rs. 18 Lakhs.
9845797577, 9900549140

**ಮನೆ ಮಾರಾಟಕ್ಕಿದೆ**
20x30 ಅಳತೆಯ ಸಾತಗಳ್ಳಿ ಲೇಔಟ್, ಡಾ॥ ರಾಜ್‌ಕುಮಾರ್ ರಸ್ತೆ, 4ನೇ ಮುಖ್ಯ ರಸ್ತೆ, 4ನೇ ಅಡ್ಡರಸ್ತೆ, ಮನೆ ನಂ. 697, GF / FF ಹಳೆ ಮನೆ ಮಾರಾಟಕ್ಕಿರುತ್ತದೆ. ಆಸಕ್ತರು ಸಂಪರ್ಕಿಸಿ:
Mob: 9448738645

**Change of Name**
I, Sowmya K.S., residing at Avarthi Village, Periyapatna Taluk, Mysore district, declare that my name was previously known as Sowmya Rakesh in my old passport, however, my Aadhar card and 10th grade marks card list my name as Sowmya K.S. Therefore we wish to officially recognise my name as Sowmya K.S. going forward.
Sd/- Sowmya K.S.

**WANTED**
For wholesale Pharma /Distributor Male staff office work cum collection - 3
Driving cum distributors work - 1 (4 wheeler goods auto)
SSLC / PUC pass / fail. with / without experience.
9986108208, 9739377827

**WANTED**
1. Computer Operator
2. Accountant (Tally Prime) (Minimum 2 Year Experience)
3. Driver 4. Officer Boy
(Attractive Salary with ESI and EPF)
#17/2, 1st Floor, 5th Main, 8th Cross, Saraswathipuram, Mysore
9164608888
9844299888

---

**ತಕ್ಷಣವೇ ಸೈಟ್ ಬೇಕಾಗಿದೆ**
ಮೈಸೂರಿನ ಕೃಷ್ಣಮೂರ್ತಿಪುರಂ, ಲಕ್ಷ್ಮೀಪುರಂ ಹಾಗೂ ಕುವೆಂಪುನಗರದ ಸುತ್ತಾಮುತ್ತಾ ತಕ್ಷಣವೇ ನೋಂದಣಿಗೆ ಸಿದ್ಧವಿರುವ 30x40 ಅಳತೆಯ ಉತ್ತರ ಅಥವಾ ಪೂರ್ವ ದಿಕ್ಕಿನ ನಿವೇಶನವು ತಕ್ಷಣವೇ ಬೇಕಾಗಿದೆ.
6360633036

**ಮಾರಾಟಕ್ಕಿದೆ**
ಹೊಸ ಆರ್.ಟಿ.ನಗರದ ಹತ್ತಿರ 40x60 ಸೈಟ್=60, ಹೊಸ ಆರ್.ಟಿ.ನಗರದ ಹತ್ತಿರ 30x40 =28, ದಟ್ಟಗಳ್ಳಿ 50x80 ಸೈಟ್ ಹೊಸಮನೆ ಹಳೇಮನೆ ಸೈಟ್ ಮಾರುವವರು ಕೊಳ್ಳುವವರು
9945042875

**ಸೌಮ್ಯ ಫ್ಯಾಷನ್ ಟೈಲರಿಂಗ್ ಕೋಚಿಂಗ್ ಸೆಂಟರ್**
ಉಚಿತ ಟೈಲರಿಂಗ್ ತರಬೇತಿ
* 30 ದಿನಗಳ ಉಚಿತ ಟೈಲರಿಂಗ್ ತರಬೇತಿ
* ನುರಿತ ಬೋಧಕರಿಂದ ತರಬೇತಿ
* ಆಸಕ್ತರಿಗೆ ಉದ್ಯೋಗ ಮತ್ತು ಸಾಲ ದೊರಕಿಸಿಕೊಡಲಾಗುವುದು.
* ಸರ್ಟಿಫಿಕೇಟ್ ಶುಲ್ಕ ರೂ.1500/– ಮಾತ್ರ
* ಪ್ರವೇಶಾತಿ ಪ್ರಾರಂಭವಾಗಿದೆ.
24 Hours ಅಲ್ಲಿ ಬ್ಲೌಸ್ ಸ್ಟಿಚ್ ಮಾಡಿಕೊಡಲಾಗುವುದು
ಸ್ಥಳ: #6, ಬಿ.ಎಸ್.ಎನ್.ಎಲ್ ಆಫೀಸ್ ಹಿಂಭಾಗ, ಬೆಮೆಲ್ ನಗರ, ಲಾಸ್ಟ್ ಸ್ಟಾಪ್, ಶ್ರೀರಾಂಪುರ 2ನೇ ಹಂತ, ಮೈಸೂರು–23
ಸೌಮ್ಯ 8310855102





SUNSTAR SOLAR SYSTEM SALES & SERVICE
9900609977, 9972036774, 9916457118

**ಬಾಡಿಗೆಗೆ**
ನಂಜನಗೂಡು ಬಜಾರ್ ರಸ್ತೆಯಲ್ಲಿ ವಾಣಿಜ್ಯ ಮಳಿಗೆ ಬಾಡಿಗೆಗೆ ಇದೆ ಮೊದಲ ಅಂತಸ್ತು 18x100
9448189090

**SITE FOR SALE**
30X40, 30X50 READY TO REGISTER
SRI RAMPURA RING ROAD MYSORE
8050345574

**ತಕ್ಷಣ ಬೇಕಾಗಿದ್ದಾರೆ**
ಸೆಕ್ಯೂರಿಟಿ ಗಾರ್ಡ್ ಮತ್ತು ಸೂಪರ್‌ವೈಸರ್ 12 ಗಂಟೆ ಪಾಳಿ 16000 ತಿಂಗಳಿಗೆ ಮತ್ತು ವೆಲ್ಡರ್‌ಗಳು ಬೇಕಾಗಿದ್ದಾರೆ.
9035367083
8123769346

---

**ಕಡಿಮೆ ಕಂತುಗಳಲ್ಲಿ, ಮುಡಾ ಸೈಟ್**
ಹುಣಸೂರು ರಸ್ತೆ, ಇಲವಾಲದಲ್ಲಿ ಅತಿ ಕಡಿಮೆ ಬೆಲೆಗೆ ಸುಲಭ ಕಂತುಗಳಲ್ಲಿ ಮುಡಾ ಸೈಟ್‌ಗಳು ದೊರೆಯುತ್ತದೆ.
7760591291

**NAME OF CONSIDER**
CHANDRU .C, S/o Late. CHALUVARAJU Address: # 27/3, Tyaobald Road, Rana Teras Compound Nazarbad Mysore-570010, Karnataka, I have changed by My name from C. CHANDAN to CHANDRU.C Vide Affidavit sworn before Notary Rajendrakumar. K.M., Advocate And Notary. Date : 19/02/025

**SITE FOR SALE**
N/E Corner 60x70
Suvarna Nagara Bhogadi Road
8050821108

**ಬೇವಿನ ಹಿಂಡಿ**
ಉತ್ತಮ ದರ್ಜೆಯ ಬೇವಿನ ಹಿಂಡಿ ರಖಂ ದರಲದಲ್ಲಿ ದೊರೆಯುತ್ತದೆ.
ಶ್ರೀ ಕಾಮಾಕ್ಷಿ ಬಯೋ ನೀಮ್ #203 ಬನ್ನಿಮಂಟಪ ಬಡಾವಣೆ, ಮೈಸೂರು–570015
8088887802

**ಬೇಕಾಗಿದ್ದಾರೆ**
(Consultancy ಅಲ್ಲ) ಮೈಸೂರಿನಲ್ಲಿರುವ A.W.Pvt Limited ಕಂಪನಿಯಲ್ಲಿರುವ 224 ಹುದ್ದೆಗಳಿಗೆ Freshers+Experience ಆದ ಅಭ್ಯರ್ಥಿಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ SSLC/ Pass, PUC, ITI, Dip, Any Degree ವಯೋಮಿತಿ: 18-31 Years, ತಿಂಗಳಿಗೆ: 20000–26500, (ಉಚಿತ ಊಟ +ವಸತಿ ಸೌಲಭ್ಯವಿದೆ.)
ದಯಾನ: 7090212014
7349699460

**ಮೈಸೂರು ಮಿತ್ರ — ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

# ಹೆಚ್.ಡಿ.ಕೋಟೆ ಪುರಸಭೆಗೆ ಜೆಡಿಎಸ್‌ನ ಶಿವಮ್ಮ ಅಧ್ಯಕ್ಷೆ

## ಉಪಾಧ್ಯಕ್ಷರಾಗಿ ಕಾಂಗ್ರೆಸ್ಸಿನ ಆಸಿಫ್ ಇಕ್ಬಾಲ್ ಆಯ್ಕೆ



ಹೆಚ್.ಡಿ.ಕೋಟೆ ಪುರಸಭೆಗೆ ನೂತನವಾಗಿ ಆಯ್ಕೆಯಾದ ಪುರಸಭಾ ಅಧ್ಯಕ್ಷೆ ಶಿವಮ್ಮ ಚಾಕಹಳ್ಳಿ ಕೃಷ್ಣ ಹಾಗೂ ಉಪಾಧ್ಯಕ್ಷ ಆಸಿಫ್ ಇಕ್ಬಾಲ್ ಅವರನ್ನು ಸದಸ್ಯರು, ಕಾರ್ಯಕರ್ತರು, ಮುಖಂಡರುಗಳು ಅಭಿನಂದಿಸಿದರು.

ಹೆಚ್.ಡಿ.ಕೋಟೆ, ಫೆ.19– ಹೆಚ್.ಡಿ. ಕೋಟೆ ಪುರಸಭೆಗೆ ಅಧ್ಯಕ್ಷರಾಗಿ ಜೆಡಿಎಸ್ ಅಭ್ಯರ್ಥಿ ಶಿವಮ್ಮ ಚಾಕಳ್ಳಿ ಕೃಷ್ಣ, ಉಪಾಧ್ಯಕ್ಷರಾಗಿ ಕಾಂಗ್ರೆಸ್ ಅಭ್ಯರ್ಥಿ ಆಸಿಫ್ ಇಕ್ಬಾಲ್ ಆಯ್ಕೆಯಾಗಿದ್ದಾರೆ.

ಪಟ್ಟಣದ ಪುರಸಭಾ ಕಾರ್ಯಾಲಯದ ಸಭಾಂಗಣದಲ್ಲಿ ಚುನಾವಣಾಧಿಕಾರಿ ತಹಸೀಲ್ದಾರ್ ಶ್ರೀನಿವಾಸ್ ನೇತೃತ್ವದಲ್ಲಿ ಏಳು ತಿಂಗಳ ಅವಧಿಗೆ ನಡೆದ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿ ಶಿವಮ್ಮ ಚಾಕಹಳ್ಳಿ ಕೃಷ್ಣ ಅಧ್ಯಕ್ಷೆಯಾಗಿ ಅವಿರೋಧವಾಗಿ ಹಾಗೂ ಮೂರು ಮತಗಳ ಅಂತರದಲ್ಲಿ ಕಾಂಗ್ರೆಸ್ಸಿನ ಆಸಿಫ್ ಇಕ್ಬಾಲ್ ಕೈ ಎತ್ತುವುದರ ಮೂಲಕ ಉಪಾಧ್ಯಕ್ಷರಾಗಿ ಆಯ್ಕೆಯಾದರು. ಉಪಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧೆ ಮಾಡಿದ್ದ ಜೆಡಿಎಸ್‌ನ ಹರೀಶ್‌ಗೌಡ ಮೂರು ಮತಗಳ ಅಂತರದಲ್ಲಿ ಪರಾಭವಗೊಂಡರು.

ಅಧ್ಯಕ್ಷ ಸ್ಥಾನ ಪರಿಶಿಷ್ಟ ವರ್ಗ ಮಹಿಳೆಗೆ ಮೀಸಲಾಗಿದ್ದು, ಕಾಂಗ್ರೆಸ್‌ನಲ್ಲಿ ಅಭ್ಯರ್ಥಿ ಇಲ್ಲದ ಕಾರಣ ಜೆಡಿಎಸ್ ಪಕ್ಷದ ಶಿವಮ್ಮ ಚಾಕಹಳ್ಳಿ ಕೃಷ್ಣ ಒಬ್ಬರೆ ನಾಮಪತ್ರ ಸಲ್ಲಿಸಿದ್ದರು. ಉಪಾಧ್ಯಕ್ಷ ಸ್ಥಾನ ಸಾಮಾನ್ಯ ವರ್ಗಕ್ಕೆ ಮೀಸಲಾಗಿದ್ದು, ಕಾಂಗ್ರೆಸ್ ಪಕ್ಷದ ಆಸಿಫ್ ಇಕ್ಬಾಲ್ ಹಾಗೂ ಜೆಡಿಎಸ್ ಪಕ್ಷದ ಹರೀಶ್ ಗೌಡ ನಾಮಪತ್ರ ಸಲ್ಲಿಸಿದ್ದರು. ಕೈ ಎತ್ತುವ ಮೂಲಕ ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಸಲಾಯಿತು.

ಪುರಸಭೆಯಲ್ಲಿ ಒಟ್ಟು 23 ಸದಸ್ಯರಿದ್ದು, ಕಾಂಗ್ರೆಸ್‌ನ 11 ಸದಸ್ಯರು, ಜೆಡಿಎಸ್‌ನ 8, ಬಿಜೆಪಿ 1, ಬಿಎಸ್ಪಿ 1 ಹಾಗೂ ಪಕ್ಷೇತರ ಎರಡು ಸದಸ್ಯರಿದ್ದು, ಪಕ್ಷೇತರ ಇಬ್ಬರು ಸದಸ್ಯರು ಕಾಂಗ್ರೆಸ್ ಪಕ್ಷ ಬೆಂಬಲಿಸಿದರೆ, ಬಿಎಸ್ಪಿ ಹಾಗೂ ಕಾಂಗ್ರೆಸ್ ಪಕ್ಷದ ಒಬ್ಬರು ಜೆಡಿಎಸ್ ಪಕ್ಷಕ್ಕೆ ಬೆಂಬಲಿಸಿದ್ದರಿಂದ ಉಪಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧೆ ಮಾಡಿದ್ದ ಹರೀಶ್ ಗೌಡ ಅವರಿಗೆ ಹತ್ತು ಮತಗಳು ಬಂದವು, ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಆಸಿಫ್ ಇಕ್ಬಾಲ್ ಅವರಿಗೆ 13 ಮತಗಳು ಬಂದು ಜಯಗಳಿಸಿದರು.

ನೂತನ ಪುರಸಭಾ ಅಧ್ಯಕ್ಷೆ ಶಿವಮ್ಮ ಚಾಕಹಳ್ಳಿ ಕೃಷ್ಣ ಮಾತನಾಡಿ, ಶಾಸಕ ಅನಿಲ್ ಚಿಕ್ಕಮಾದು, ಸಂಸದ ಸುನಿಲ್ ಬೋಸ್ ಅವರ ಸಹಕಾರದೊಂದಿಗೆ, ಪುರಸಭೆ ವ್ಯಾಪ್ತಿಯಲ್ಲಿ ಯಾವುದೇ ಪಕ್ಷ ಭೇದ ಮಾಡದೆ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದರು.

ಮೊದಲಿಗೆ ಪಟ್ಟಣದ ಜನರಿಗೆ ಶುದ್ಧ ಕುಡಿಯುವ ನೀರನ್ನು ಎಲ್ಲಾ ವಾರ್ಡ್‌ಗಳಿಗೆ ಒದಗಿಸಲಾಗುವುದು. ಬೇಸಿಗೆ ಕಾಲ ಹತ್ತಿರವಿರುವುದರಿಂದ ಸಾಂಕ್ರಾಮಿಕ ರೋಗಗಳು ಜನರನ್ನು ಕಾಡುವುದರಿಂದ ಪಟ್ಟಣದಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಲಾಗುವುದು. ವಾರ್ಡ್‌ಗಳಲ್ಲಿ ದೀಪ ಸೇರಿದಂತೆ ಮೂಲಸೌಕರ್ಯಕ್ಕೆ ಹೆಚ್ಚು ಒತ್ತು ನೀಡಲಾಗುತ್ತದೆ ಎಂದರು. ಸಿವಿಲ್ ಕಾಮಗಾರಿ ಮಾಡಲು ಪುರಸಭೆಯಲ್ಲಿ ಇಂಜಿನಿಯರ್ ಇಲ್ಲದೆ ಇರುವುದರಿಂದ ಟೆಂಡರ್ ತೆರೆಯಲು ಸಾಧ್ಯವಾಗುತ್ತಿಲ್ಲ ಹಾಗಾಗಿ ಈ ಬಗ್ಗೆ ಜಿಲ್ಲಾಧಿಕಾರಿಗಳ ಗಮನಕ್ಕೆ ತಂದು ಕ್ರಮ ವಹಿಸಲಾಗುತ್ತದೆ ಎಂದು ಅವರು ತಿಳಿಸಿದರು.

ನೂತನ ಉಪಾಧ್ಯಕ್ಷ ಆಸಿಫ್ ಇಕ್ಬಾಲ್ ಮಾತನಾಡಿ, ಕಳೆದ ಏಳು ಎಂಟು ತಿಂಗಳಿನಿಂದ ಪುರಸಭೆಯಲ್ಲಿ ಆಡಳಿತ ಮಂಡಳಿ ಇಲ್ಲದಿದ್ದ ಕಾರಣ ಮೂಲ ಸೌಕರ್ಯಗಳಿಲ್ಲದೆ ಅಭಿವೃದ್ಧಿ ಕೆಲಸಗಳು ಸಮರ್ಪಕವಾಗಿ ನಡೆದಿಲ್ಲ. ಹಾಗಾಗಿ ಶಾಸಕರು ಮತ್ತು ಸಂಸದರ ಸಹಕಾರದೊಂದಿಗೆ ಎಲ್ಲಾ ಸದಸ್ಯರ ನಿರ್ದೇಶನದೊಂದಿಗೆ ಪುರಸಭೆ 23 ವಾರ್ಡ್‌ಗಳಲ್ಲೂ ಮೂಲ ಸೌಕರ್ಯಗಳನ್ನು ಒದಗಿಸುವ ಕೆಲಸ ಮಾಡಲಾಗುವುದು ಎಂದರು.

ಜೆಡಿಎಸ್ ಪಕ್ಷದ ಬೆಂಬಲಿತರು ಹಾಗೂ ಕಾಂಗ್ರೆಸ್ ಪಕ್ಷದ ಬೆಂಬಲಿತರು ಪಟಾಕಿ ಸಿಡಿಸಿ ಸಿಹಿ ಹಂಚಿ ಸಂಭ್ರಮಿಸಿದರು. ಇದೇ ಸಂದರ್ಭದಲ್ಲಿ ಪುರಸಭಾ ಮುಖ್ಯಾಧಿಕಾರಿ ಸುರೇಶ, ಪುರಸಭಾ ಸದಸ್ಯರಾದ ಎಚ್.ಸಿ. ನರಸಿಂಹಮೂರ್ತಿ, ದರ್ಶಿನಿ ಯಶ್ವಂತ್, ನಂದಿನಿ, ಶಾಂತಮ್ಮ, ಸರೋಜಮ್ಮ, ನಾಗಮ್ಮ, ಸುಹಾಸಿನಿ, ಕವಿತಾ, ಗೀತಾ, ಸಾಹಿರಾಬಾನು, ಅನಿತಾ, ಐಡಿಯಾ ವೆಂಕಟೇಶ್, ಮಧುಕುಮಾರ್, ರಾಜು ವಿಶ್ವಕರ್ಮ, ಲೋಕೇಶ್, ನಂಜಪ್ಪ, ಪ್ರೇಮ್ ಸಾಗರ್, ಪುಟ್ಟಬಸವನಾಯಕ, ಮಿಲ್ ನಾಗರಾಜು ಸೇರಿದಂತೆ ಅನೇಕ ಮುಖಂಡರುಗಳು ಇದ್ದರು.

**ಜೆಡಿಎಸ್ ಅಭಿನಂದನೆ:** ಜೆಡಿಎಸ್ ಕಚೇರಿಯಲ್ಲಿ ನೂತನ ಅಧ್ಯಕ್ಷೆ ಶಿವಮ್ಮ ಚಾಕಳ್ಳಿ ಕೃಷ್ಣ ಅವರಿಗೆ, ಕೋಟೆ, ಸರಗೂರು, ತಾಲೂಕು ಜೆಡಿಎಸ್ ಅಧ್ಯಕ್ಷ ರಾಜೇಂದ್ರ ಗೋಪಾಲಸ್ವಾಮಿ ಮುಖಂಡರುಗಳಾದ ಎಮ್.ಸಿ. ದೊಡ್ಡನಾಯಕ, ನರಸಿಂಹಗೌಡ, ಸುರೇಂದ್ರ ಡಿ ಗೌಡ, ನಾರಾಯಣಗೌಡ, ಗೋಪಾಲ್ ಶೆಟ್ಟಿ ನಾಗರಾಜ ಶೆಟ್ಟಿ ಮೆಕಾನಿಕ್ ಸೂರಿ, ಯಶವಂತ್ ಇನ್ನು ಹಲವು ಕಾರ್ಯಕರ್ತರು, ಮುಖಂಡರು ಅಭಿನಂದಿಸಿದರು.

**ಕಾಂಗ್ರೆಸ್ ಅಭಿನಂದನೆ:** ಕಾಂಗ್ರೆಸ್ ಕಚೇರಿಯಲ್ಲಿ ನೂತನ ಉಪಾಧ್ಯಕ್ಷರಾದ ಆಸಿಫ್ ಇಕ್ಬಾಲ್ ಅವರಿಗೆ ಕೋಟೆ, ಸರಗೂರು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರುಗಳಾದ ಏಜಾದ್ ಪಾಷಾ, ಮಾದಪ್ಪ, ಯೂಥ್ ಕಾಂಗ್ರೆಸ್ ಅಧ್ಯಕ್ಷ ಅಜಾರ್, ಅಲ್ಪಸಂಖ್ಯಾತರ ಅಧ್ಯಕ್ಷ ಶಫಿ, ಮೈಮುಲ್ ನಿರ್ದೇಶಕ ಈರೇಗೌಡ, ಜಿಪಂ ಮಾಜಿ ಸದಸ್ಯರುಗಳಾದ ಎಚ್.ಸಿ. ಮಂಜುನಾಥ್, ನರಸೀಪುರ ರವಿ, ಮುಖಂಡರುಗಳಾದ ಚಾಮರಾಜು, ಅನ್ಸರ್, ಸೌಮ್ಯ, ಪ್ರಕಾಶ್, ಸುರೇಶ್, ಕಾರ್ಯಕರ್ತರು, ಮುಖಂಡರುಗಳು ಅಭಿನಂದಿಸಿದರು.

## ಇಂದು ಶ್ರೀ ಗುರುಮಲ್ಲೇಶ್ವರ ಭವನ ಉದ್ಘಾಟನೆ

ತಿ.ನರಸೀಪುರ, ಫೆ.19– ತಾಲೂಕಿನ ಬಿಲಿಗೆರೆಹುಂಡಿ ಗ್ರಾಮದಲ್ಲಿರುವ ಶ್ರೀ ಗುರುಮಲ್ಲೇಶ್ವರ ದಾಸೋಹ ಮಠದಲ್ಲಿ ನಾಳೆ (ಫೆ.20) ಶ್ರೀ ಮಠದ ಕಟ್ಟಡದ ಜೀರ್ಣೋದ್ಧಾರ ಹಾಗೂ ಶ್ರೀ ಗುರುಮಲ್ಲೇಶ್ವರ ಭವನ ಉದ್ಘಾಟನೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಬೆಳಗ್ಗೆ 10 ಗಂಟೆಗೆ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹಾಗೂ ಸಿದ್ದಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ ಧಾರ್ಮಿಕ ಸಭೆ ನಡೆಯಲಿದ್ದು, ದೇಗುಲ ಮಠದ ಡಾ.ಮುಮ್ಮಡಿ ನಿರ್ವಾಣ ಸ್ವಾಮೀಜಿ, ದೇವನೂರು ಮಠದ ಮಹಾಂತ ಸ್ವಾಮೀಜಿ, ವಾಟಾಳು ಮಠದ ಡಾ. ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ, ಚನ್ನಬಸವ ಸ್ವಾಮೀಜಿ, ಮೃತ್ಯುಂಜಯ ಸ್ವಾಮೀಜಿ, ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ಚಿದಾನಂದ ಸ್ವಾಮೀಜಿ, ಮಾಡ್ರಳ್ಳಿ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ಹಾಗೂ ಷಡಕ್ಷರಿ ದೇಶಿಕೇಂದ್ರ ಸ್ವಾಮೀಜಿ ಭಾಗವಹಿಸುವರು.

ದಾಸೋಹ ಭವನವನ್ನು ಸಿಎಂ ಸಿದ್ದರಾಮಯ್ಯ ಉದ್ಘಾಟಿಸಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಧ್ಯಕ್ಷತೆ ವಹಿಸುವರು. ಕೇಂದ್ರ ಸಚಿವ ವಿ.ಸೋಮಣ್ಣ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನಪರಿಷತ್ ಸದಸ್ಯರಾದ ಡಾ.ಯತೀಂದ್ರ, ಡಾ.ಡಿ.ತಿಮ್ಮಯ್ಯ, ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸುನೀಲ್ ಬೋಸ್, ಶಾಸಕರಾದ ಹೆಚ್.ಎಂ.ಗಣೇಶ್‌ಪ್ರಸಾದ್, ಜಿ.ಡಿ.ಹರೀಶ್‌ಗೌಡ, ಮಾಜಿ ಶಾಸಕ ಎಂ.ಅಶ್ವಿನ್ ಕುಮಾರ್, ವೀರಶೈವ ಮಹಾಸಭಾ ಜಿಲ್ಲಾಧ್ಯಕ್ಷ ಹೆಚ್.ವಿ.ಬಸವರಾಜು, ತಾಲೂಕು ಅಧ್ಯಕ್ಷ ಸಿ.ಎಂ.ಪ್ರಕಾಶ್, ಜಿಪಂ ಮಾಜಿ ಸದಸ್ಯ ಸದಾನಂದ, ಯುವ ಅಧ್ಯಕ್ಷ ಕೆ.ಎನ್. ಅಶೋಕ್, ಶರಣ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ ಹಾಗೂ ತಾಲೂಕು ಅಧ್ಯಕ್ಷ ಸೋಮಶೇಖರಪ್ಪ ಭಾಗವಹಿಸುವರು.

## ಪುರಸಭೆಗೆ ಪ್ರಕಾಶ್‌ಸಿಂಗ್ ಅಧ್ಯಕ್ಷ, ಸುವರ್ಣ ಉಪಾಧ್ಯಕ್ಷೆ



ಪಿರಿಯಾಪಟ್ಟಣ ಪುರಸಭೆಯ ಅಧ್ಯಕ್ಷರಾಗಿ ಪ್ರಕಾಶ್‌ಸಿಂಗ್, ಉಪಾಧ್ಯಕ್ಷರಾಗಿ ಸುವರ್ಣ ರವಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಪಿರಿಯಾಪಟ್ಟಣ, ಫೆ.19– ಪಿರಿಯಾಪಟ್ಟಣ ಪುರಸಭೆಯ ನೂತನ ಅಧ್ಯಕ್ಷರಾಗಿ ಜೆಡಿಎಸ್‌ನ ಪ್ರಕಾಶ್‌ಸಿಂಗ್ ಮತ್ತು ಉಪಾಧ್ಯಕ್ಷರಾಗಿ ಸುವರ್ಣ ರವಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಬುಧವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಪ್ರಕಾಶ್ ಸಿಂಗ್ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಸುವರ್ಣ ಮಾತ್ರ ನಾಮಪತ್ರ ಸಲ್ಲಿಸಿದರು. ಚುನಾವಣಾಧಿಕಾರಿಯಾಗಿದ್ದ ತಹಸೀಲ್ದಾರ್ ನಿಸರ್ಗ ಪ್ರಿಯಾ ಅವರು ಅವಿರೋಧ ಆಯ್ಕೆಯು ಘೋಷಣೆ ಮಾಡಿದರು ಮತ್ತು ಚುನಾವಣೆಯಲ್ಲಿ 19 ಜನ ಸದಸ್ಯರು ಹಾಜರಿದ್ದು, 4 ಸದಸ್ಯರು ಗೈರು ಹಾಜರಾಗಿದ್ದರು.

ಈ ಸಂದರ್ಭದಲ್ಲಿ ಅಭ್ಯರ್ಥಿಗಳನ್ನು ಅಭಿನಂದಿಸಿ ಮಾತನಾಡಿದ ಮಾಜಿ ಶಾಸಕ ಕೆ.ಮಹದೇವ್, ಸ್ಥಳೀಯ ಸಂಸ್ಥೆಗಳಲ್ಲಿನ ಮೀಸಲಾತಿ ವರ್ಗೀಕರಣ ವಿಚಾರದಲ್ಲಿ ಹಸ್ತಕ್ಷೇಪ ಮಾಡಿ ಚುನಾಯಿತ ಪ್ರತಿನಿಧಿಗಳ ಅಧಿಕಾರವನ್ನು ಮೊಟಕುಗೊಳಿಸುವ ಕಾರ್ಯವನ್ನು ರಾಜ್ಯ ಸರ್ಕಾರ ಮಾಡುತ್ತಿದೆ. ಇದು ಚುನಾಯಿತ ಪ್ರತಿನಿಧಿಗಳ ಅಧಿಕಾರಕ್ಕೆ ಧಕ್ಕೆ ತರುವಂತ ಸಂಗತಿಯಾಗಿದೆ ಎಂದರು. ಈ ಸಂದರ್ಭದಲ್ಲಿ ಮೈಮುಲ್ ಮಾಜಿ ಅಧ್ಯಕ್ಷ ಪಿ.ಎಂ.ಪ್ರಸನ್ನ, ಪುರಸಭೆ ಸದಸ್ಯರಾದ ವಿನೋದ್ ಪಿ.ಎನ್, ಮಂಜುನಾಥ್ ಸಿಂಗ್, ಪ್ರಕಾಶ್, ರವಿ, ಮಂಜುನಾಥ್, ಶ್ಯಾಮ್, ಭಾರತಿ, ಆಶಾ, ನಾಗರತ್ನ, ಪುಷ್ಪ, ಪಿ.ಸಿ. ಕೃಷ್ಣ, ರೇವತಿ, ನಿರಂಜನ್, ಕೆ.ಮಹೇಶ್, ಶ್ವೇತಾಕುಮಾರ್, ಅಬ್ದುಲ್ ಹರ್ಷದ್, ನೂರ್‌ಜಾನ್, ಮುಖ್ಯಾಧಿಕಾರಿ ಕೊಟ್ಟು ಕತ್ತೀರಾ ಮುತ್ತಪ್ಪ, ಅಭಿಯಂತರಾದ ವನಿತಾ, ವೈಶಾಲಿ, ಮುಖಂಡರಾದ ರಾಮು ಐಲಾಪುರ, ವಿದ್ಯಾಶಂಕರ್, ಸಿ.ಎನ್.ರವಿ, ಸಿಬ್ಬಂದಿ ಪ್ರದೀಪ್ ಸೇರಿದಂತೆ ಇತರರು ಹಾಜರಿದ್ದರು.

## ಅಭಿನಂದನೆ



ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರಾಗಿ ನೇಮಕಗೊಂಡ ಎಂ.ಕೆ.ಸವಿತಾ ಅವರನ್ನು ತಿ.ನರಸೀಪುರ ಪುರಸಭಾ ಸದಸ್ಯ ಬಾದಾಮಿ ಮಂಜು ಅಭಿನಂದಿಸಿದರು. ಈ ವೇಳೆ ಮುಖಂಡರಾದ ನಾಗರಾಜು, ಪಿಂಕ ಸೇರಿದಂತೆ ಇತರರಿದ್ದರು.

## ಕಳಲೆ ಹಾಲು ಉತ್ಪಾದಕರ ಸಂಘಕ್ಕೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಕಳಲೆ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ಶಿವರಾಮ್, ಉಪಾಧ್ಯಕ್ಷರಾಗಿ ಹರೀಶ್ ಅವಿರೋಧವಾಗಿ ಆಯ್ಕೆಯಾದರು.

ನಂಜನಗೂಡು, ಫೆ.19– ತಾಲೂಕಿನ ಕಳಲೆ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಶಿವರಾಮ್, ಉಪಾಧ್ಯಕ್ಷರಾಗಿ ಹರೀಶ್ ಅವಿರೋಧವಾಗಿ ಆಯ್ಕೆಯಾದರು.

12 ಸದಸ್ಯರ ಕಳಲೆ ಹಾಲು ಉತ್ಪಾದಕರ ಸಹಕಾರ ಸಂಘದ ಕಚೇರಿಯಲ್ಲಿ ಮಂಗಳವಾರ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಸಲಾಯಿತು. ಅಧ್ಯಕ್ಷ ಸ್ಥಾನಕ್ಕೆ ಶಿವರಾಮ್ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಹರೀಶ್ ಹೊರತುಪಡಿಸಿ ಯಾರೊಬ್ಬರೂ ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿಯಾಗಿದ್ದ ರಘು ಅವಿರೋಧ ಆಯ್ಕೆಯನ್ನು ಘೋಷಿಸಿದರು.

ನೂತನ ಅಧ್ಯಕ್ಷ ಶಿವರಾಮ್ ಮಾತನಾಡಿ, ಸುತ್ತಮುತ್ತಲ ಗ್ರಾಮದ ಗ್ರಾಮಸ್ಥರಲ್ಲಿ ಹೈನುಗಾರಿಕೆಯನ್ನು ಅನುಸರಿಸುವಂತೆ ಮನವೊಲಿಸಿ ಹಾಲು ಉತ್ಪಾದನೆಯನ್ನು ಹೆಚ್ಚಿಸುವ ಮೂಲಕ ಸಂಘವನ್ನು ಉನ್ನತ ಸ್ಥಾನಕ್ಕೆ ಕೊಂಡೊಯ್ಯುವ ಜೊತೆಗೆ ಸರ್ಕಾರದಿಂದ ಬರುವ ಸವಲತ್ತು ರೈತರಿಗೆ ನೇರವಾಗಿ ತಲುಪಿಸಲು ಶ್ರಮಿಸುತ್ತೇನೆ ಎಂದರು.

ಸಹಕಾರ ಸಂಘದ ನಿರ್ದೇಶಕರಾದ ಸಿದ್ದರಾಜು ನಾಗನಾಯಕ, ಮಲ್ಲಣ್ಣ, ನಿಂಗನಾಯಕ, ಮಾದೇವಮ್ಮ, ಮಹದೇವಸ್ವಾಮಿ, ಮಹದೇವನಾಯಕ, ನೀಲಮ್ಮ, ಮಾದೇವಮ್ಮ, ರಾಜು.ಟಿ, ನಾಮನಿರ್ದೇಶಕ ಚಂದ್ರಕುಮಾರ್ ಮುಖಂಡರಾದ ಕಳಲೆ ಮಹೇಶ್ ಸೇರಿದಂತೆ ಹಲವಾರು ಪ್ರಮುಖರು ಉಪಸ್ಥಿತರಿದ್ದರು.

## ಮಕ್ಕಳ ಪ್ರತಿಭೆಗೆ ಕಲಿಕಾ ಹಬ್ಬ ಪೂರಕ



ಕಲಿಕಾ ಹಬ್ಬ ಕಾರ್ಯಕ್ರಮವನ್ನು ಅಧಿಕಾರಿಗಳು ಉದ್ಘಾಟಿಸಿದರು.

ಕುಪ್ಪಲಾಪುರ, ಫೆ.19– ಮಕ್ಕಳಲ್ಲಿ ಅಡಗಿರುವ ಸುಪ್ತ ಪ್ರತಿಭೆ ಹೊರಹೊಮ್ಮಲು ಇಂತಹ ಕಲಿಕಾ ಹಬ್ಬ ಕಾರ್ಯಕ್ರಮಗಳು ಪೂರಕ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ರವಿಪ್ರಸನ್ನ ಅಭಿಪ್ರಾಯಪಟ್ಟರು.

ಇಲ್ಲಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಿದ್ದ ಕ್ಲಸ್ಟರ್ ಮಟ್ಟದ ಎಫ್‌ಎಲ್‌ಎನ್ ಕಲಿಕಾ ಹಬ್ಬ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಸರ್ಕಾರ ಜಾರಿಗೊಳಿಸಿರುವ ಕಲಿಕಾ ಹಬ್ಬ ಕಾರ್ಯಕ್ರಮಗಳು ಸರ್ಕಾರಿ ಶಾಲೆ ಮಕ್ಕಳ ಸ್ಫೂರ್ತಿಯ ಚಿಲುಮೆ ಉಕ್ಕುವಂತೆ ಮಾಡುತ್ತದೆ. ಮಕ್ಕಳಿಗೆ ಪ್ರೇರಣಾ ಕಥೆ, ಸಾಹಿತ್ಯ, ಕ್ರೀಡೆ, ನಲಿಕಲಿ, ಓದು ಎಲ್ಲವನ್ನೂ ಹಮ್ಮಿಕೊಂಡು ಮಕ್ಕಳ ಎಲೆ ಮರೆ ಕಾಯಿಯಂತಿರುವ ಪ್ರತಿಭೆಗಳನ್ನು ಹೊರತರಲು ಸಹಕಾರಿಯಾಗುತ್ತವೆ ಎಂದರು. ಎಂ.ಆರ್. ನೋಬೆಲ್ ಶಾಲೆ ವತಿಯಿಂದ ಬಿಇಒ ರವಿಪ್ರಸನ್ನರವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಇಸಿಒ ಗಣೇಶ್, ಸಿಆರ್.ಪಿ ಸುದರ್ಶನ್, ಮುಖ್ಯ ಶಿಕ್ಷಕ ಕೃಷ್ಣಕುಮಾರ್ ಸೇರಿದಂತೆ ಕ್ಲಸ್ಟರ್‌ನ ಎಲ್ಲಾ ಶಾಲೆಗಳ ಮುಖ್ಯಶಿಕ್ಷಕ, ಶಿಕ್ಷಕಿಯರು ಹಾಜರಿದ್ದರು.

# ಇಂಗ್ಲಿಷ್ ಶಾಲೆಗೆ ಅನುಮತಿ; ಕನ್ನಡ ಶಾಲೆಗಳು ಮುಚ್ಚುವ ಸ್ಥಿತಿಗೆ

## ಕಲಿಕಾ ಹಬ್ಬದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಮಹದೇವ ವಿಷಾದ



ಕಲಿಕಾ ಹಬ್ಬ ಕಾರ್ಯಕ್ರಮದಲ್ಲಿ ಹಲವರನ್ನು ಸನ್ಮಾನಿಸಲಾಯಿತು.

ಹುಣಸೂರು, ಫೆ.19– ಸರ್ಕಾರಿ ಶಾಲೆಗಳಲ್ಲಿ ಮಕ್ಕಳಿಗೆ ಉತ್ತಮ ಶಿಕ್ಷಣ ಲಭಿಸುತ್ತಿದ್ದು, ಪೋಷಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಲ್ಲಿ ಓದಿಸಬೇಕು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಪಿ. ಮಹದೇವ ಅಭಿಪ್ರಾಯಪಟ್ಟರು.

ತಾಲೂಕಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ತಿಪ್ಪಲಾಪುರದಲ್ಲಿ ನಡೆದ ಕೊತ್ತೇಗಾಲ ಕ್ಲಸ್ಟರಿನ ಕಲಿಕಾ ಹಬ್ಬವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಇಂದು ಸರ್ಕಾರಿ ಶಾಲೆಗಳಲ್ಲಿ ತರಬೇತಿ ಪಡೆದ ಶಿಕ್ಷಕರಿದ್ದಾರೆ. ಸರ್ಕಾರವು ಉಚಿತ ಶಿಕ್ಷಣ ನೀಡಿ ಪೋಷಕರ ಹೊರೆಯನ್ನು ಕಡಿಮೆ ಮಾಡಿದೆ. ಗುಣಮಟ್ಟದ ಶಿಕ್ಷಣವನ್ನು ನೀಡಲು ಆದ್ಯತೆ ನೀಡಲಾಗಿದೆ. ಆದರೆ ಆಂಗ್ಲ ಮಾಧ್ಯಮ ಶಾಲೆಗಳಿಗೆ ಅನುಮತಿ ನೀಡುತ್ತಿರುವುದರಿಂದ ಕನ್ನಡ ಶಾಲೆಗಳು ಮುಚ್ಚುವಂತಾಗಿದೆ ಎಂದರು.

ಮಕ್ಕಳಿಗೆ ನಿಗದಿಪಡಿಸಿದ ಪಠ್ಯದ ಜೊತೆಗೆ ಕೌಶಲ ಅಭಿವೃದ್ಧಿ ಆಗುವಂತೆ ಮಾಡಬೇಕು. ಮಕ್ಕಳ ಕಲಿಕೆಗೆ ಶಿಕ್ಷಕರು ವಿಶೇಷ ಗಮನ ಹರಿಸಿ ಸ್ಪಷ್ಟ ಓದು, ಶುದ್ಧ ಬರಹ, ಸುಲಭ ಲೆಕ್ಕಾಚಾರ ಬರುವಂತೆ ಮಾಡಿ ಸಂತಸದಾಯಕ ಕಲಿಕೆ ಆಗುವಂತೆ ಮಕ್ಕಳನ್ನು ಪ್ರೇರೇಪಿಸಬೇಕು. ಶಿಕ್ಷಣ ಇಲಾಖೆಯು 'ಕಲಿಕಾ ಹಬ್ಬ' ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ಗಟ್ಟಿ ಓದು, ಕಥೆ ಹೇಳುವುದು, ಕೈಬರಹ, ಸಂತೋಷದಾಯಕ ಗಣಿತ, ಮೆಮೊರಿ ಪರೀಕ್ಷೆ, ರಸಪ್ರಶ್ನೆ, ಪೋಷಕರು ಮತ್ತು ಮಕ್ಕಳ ಸಂಬಂಧಕ್ಕೆ ಸಂಬಂಧಿಸಿದ ಸ್ಪರ್ಧಾ ಚಟುವಟಿಕೆಗಳು ಇವೆ. ಮಕ್ಕಳ ಕಲಿಕೆಯನ್ನು ತಿಳಿಯುವ ಮಹತ್ವಾಕಾಂಕ್ಷೆಯ ಕಾರ್ಯಕ್ರಮ ಕಲಿಕಾ ಹಬ್ಬವಾಗಿದೆ. ವಿದ್ಯಾರ್ಥಿಗಳು ಸದಾ ಅಧ್ಯಯನಶೀಲರಾಗಿರಬೇಕು. ಆಗ ಮಾತ್ರ ಸಾಧನೆ ಸಾಧ್ಯ ಎಂದರು.

ಮಕ್ಕಳಿಗೆ ಚಿಕ್ಕಂದಿನಿಂದ ಕನ್ನಡ ಭಾಷೆ ಜೊತೆಗೆ ಹಿಂದಿ, ಇಂಗ್ಲಿಷ್ ಕಲಿಸಬೇಕು. ಆಗ ಮಾತ್ರ ಭವಿಷ್ಯದಲ್ಲಿ ದೇಶದ ಯಾವುದೇ ಸ್ಥಳದಲ್ಲಾದರೂ ಕೆಲಸಕ್ಕೆ ಸೇರಬಹುದು. ಬಾಲ್ಯದ ದಿನಗಳಲ್ಲೇ ಸಾಧನೆ ಮಾಡಲು ಪ್ರೋತ್ಸಾಹ ನೀಡಬೇಕು. ಸಾಧನೆ ಮಾಡಿದ ವರನ್ನು ಮಾದರಿಯಾಗಿ ತೆಗೆದುಕೊಂಡು ವಿದ್ಯಾರ್ಥಿಗಳು ಅಧ್ಯಯನಶೀಲರಾಗಬೇಕು. ಮಕ್ಕಳಿಗೆ ಸ್ಪರ್ಧೆಗಳನ್ನು ನಡೆಸುವಾಗ ಯಾವುದೇ ತಾರತಮ್ಯ ಇಲ್ಲದಂತೆ ನೋಡಿಕೊಳ್ಳಬೇಕು. ಸರ್ಕಾರಿ ಶಾಲೆಗಳು ಉಳಿಯಬೇಕು; ಬೆಳೆಯಬೇಕು. ನಾವೆಲ್ಲರೂ ಕಂಕಣಬದ್ಧರಾಗಿ ಸರ್ಕಾರಿ ಶಾಲೆಗಳನ್ನು ಉಳಿಸೋಣ ಎಂದರು.

ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಕೆ.ಬಿ. ಶಶಿಕುಮಾರ್ ಮಾತನಾಡಿ, ಕಲಿಕಾ ಹಬ್ಬವು ವಿದ್ಯಾರ್ಥಿಗಳ ಕಲಿಕೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಸರ್ಕಾರ ಆಯೋಜಿಸಿದ ಕಾರ್ಯಕ್ರಮವಾಗಿದೆ. ಮಕ್ಕಳಲ್ಲಿ ಸ್ಪರ್ಧಾ ಮನೋಭಾವನೆಯನ್ನು ಬೆಳೆಸುವ ಸಲುವಾಗಿ ಏಳು ವಿಭಾಗಗಳಲ್ಲಿ ಸ್ಪರ್ಧೆ ನಡೆಸಲಾಗುತ್ತಿದೆ. ವಿದ್ಯಾರ್ಥಿಗಳು ತಾವು ಕಲಿತಿರುವುದನ್ನು ಇತರರೊಂದಿಗೆ ಸ್ಪರ್ಧಿಸಿ ತಮ್ಮ ಕಲಿಕೆಯನ್ನು ಉತ್ತಮವಾಗಿಸುವ ಅವಕಾಶ ಇದೆ. ಮಕ್ಕಳ ಕಲಿಕೆಯನ್ನು ಅಳೆಯಲು ಉತ್ತಮ ವೇದಿಕೆ ಇದಾಗಿದೆ ಎಂದು ತಿಳಿಸಿದರು.

ಗ್ರಾಮದ ಯಜಮಾನರು, ಎಸ್‌ಡಿಎಂಸಿಯವರು, ಹಳೆಯ ವಿದ್ಯಾರ್ಥಿ ಸಂಘದವರು, ಗ್ರಾಮಸ್ಥರು ತಳಿರು ತೋರಣಗಳನ್ನು ಕಟ್ಟಿ ಸಿದ್ಧತೆ ಮಾಡಿದ್ದರು. ಕಾರ್ಯಕ್ರಮಕ್ಕೂ ಮುನ್ನ ಪೂರ್ಣಕುಂಭ ಸ್ವಾಗತ ಕೋರಲಾಯಿತು. ಯುಪಿಎಸ್‌ಸಿ ಪರೀಕ್ಷೆ ಸಾಧಕ ಲೇಖನ್, ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಮಾರುತಿ, ಶಿಕ್ಷಕರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಸ್ವಾಮಿ, ಸರ್ಕಾರಿ ನೌಕರ ಸಂಘದ ಪ್ರಧಾನ ಕಾರ್ಯದರ್ಶಿ ಗಿರೀಶ್ ಕುಮಾರ್, ಶಿಕ್ಷಕರ ಸಂಘದ ಪ್ರಧಾನ ಕಾರ್ಯದರ್ಶಿ ವಿ.ಸಿ. ಪ್ರಸನ್ನ, ಕ್ಷೇತ್ರ ಸಮನ್ವಯಾಧಿಕಾರಿ ಹೇಮಲತ, ಶಿಕ್ಷಣ ಸಂಯೋಜಕಿ ಜ್ಯೋತಿ, ಸಹಕಾರ ಸಂಘದ ನಿರ್ದೇಶಕ ಟಿ.ಲೋಕೇಶ್, ಗ್ರಾಮದ ಯಜಮಾನ ಮಹೇಶ್, ಎಸ್‌ಡಿ ಎಂಸಿ ಅಧ್ಯಕ್ಷ ಶಂಕರ್, ಉಪಾಧ್ಯಕ್ಷೆ ಶಿಲ್ಪ, ಚಲನಚಿತ್ರ ನಟ ಕುಮಾರ್ ಅರಸೇಗೌಡ, ಗ್ರಾಪಂ ಅಧ್ಯಕ್ಷ ರವಿಕುಮಾರ್, ಕಸಾಪ ಅಧ್ಯಕ್ಷ ಹರವೆ ಮಹದೇವ್, ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಬೋರೇಗೌಡ, ರಾಜ ಶೇಖರ್, ರಾಜೇಶ್, ದೈಹಿಕ ಶಿಕ್ಷಣ ಪರಿವೀಕ್ಷಕ ಲೋಕೇಶ್, ದೈಹಿಕ ಶಿಕ್ಷಕರ ಸಂಘದ ಅಧ್ಯಕ್ಷ ಎಲ್.ಕೆ. ಜಗದೀಶ್, ಸಿಆರ್.ಪಿ ದಿವಾಕರ್, ಹರೀಶ್, ಮಂಜುನಾಥ್, ಶ್ರೀನಿವಾಸ್ ಮೂರ್ತಿ, ಮುಖ್ಯ ಶಿಕ್ಷಕರಾದ ಲೀಲಾಂಬ, ಜಯಶೀಲ, ರಾಜಶೇಖರ್, ಸ್ವಾಮಿ, ಸಹ ಶಿಕ್ಷಕರಾದ ಪ್ರಸನ್ನ ಕುಮಾರ್, ವಿದ್ಯಾಶ್ರೀ, ಅನಿಲ್ ಉಪಸ್ಥಿತರಿದ್ದರು. ಕಲಿಕಾ ಹಬ್ಬದ ಸೆಲ್ಫಿ ಕಾರ್ನರ್ ಹಾಗೂ ಕಲಿಕಾ ವಾತಾವರಣದ ವೇದಿಕೆ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

## ಸಣ್ಣೇಗೌಡ ನಿಧನ



ಬೆಟ್ಟದಪುರ, ಫೆ.19– ದಾಖಲೆ ಅರಳಿ ಮರದ ಕೊಪ್ಪಲು ಗ್ರಾಮದ ಸಣ್ಣೇಗೌಡ (70) ಬುಧವಾರ ಹೃದಯಾಘಾತದಿಂದ ನಿಧನರಾಗಿದ್ದಾರೆ. ದಿವಂಗತರು ಮಾಜಿ ಗ್ರಾಪಂ ಅಧ್ಯಕ್ಷೆ ಮಂಜುಳಾ ಚಂದ್ರೇಗೌಡ, ಗ್ರಾಪಂ ನೌಕರ ಪರಶುರಾಮ್, ತಾಲೂಕು ರೈತ ಸಂಘದ ಉಪಾಧ್ಯಕ್ಷ ಯೋಗೇಶ್ ಸೇರಿದಂತೆ ಇಬ್ಬರು ಪುತ್ರರು, ಓರ್ವ ಪುತ್ರಿ, ಇಬ್ಬರು ಸಹೋದರರು, ಓರ್ವ ಸಹೋದರಿ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಇಂದು ಸಂಜೆ ಅವರ ಜಮೀನಿನಲ್ಲಿ ನೆರವೇರಿಸಲಾಯಿತು.

## ಇಂದು ಹೃದ್ರೋಗ, ಕ್ಯಾನ್ಸರ್ ಉಚಿತ ತಪಾಸಣಾ ಶಿಬಿರ



ತಿ. ನರಸೀಪುರ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಆಡಳಿತಾಧಿಕಾರಿ ಡಾ.ಅಭಿಲಾಷ್ ಮಾತನಾಡಿದರು

ತಿ.ನರಸೀಪುರ, ಫೆ.19– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ವೋಲ್ವೋ ವೆಲ್‌ನೆಸ್ ಆನ್ ವೀಲ್ ಕಮ್ಯೂನಿಟಿ ಕ್ಲಿನಿಕ್ ಮತ್ತು ನಾರಾಯಣ ಹೃದಯಾಲಯ ಆಸ್ಪತ್ರೆ ಸಹಭಾಗಿತ್ವದಲ್ಲಿ ತಿ.ನರಸೀಪುರ ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಮುಂಭಾಗದಲ್ಲಿ ಫೆ.20 ಗುರುವಾರ ಹೃದ್ರೋಗ ಹಾಗೂ ಕ್ಯಾನ್ಸರ್ ಉಚಿತ ಸ್ಕ್ರೀನಿಂಗ್ ತಪಾಸಣೆಯನ್ನು ಮಾಡಲಾಗುವುದು ಎಂದು ಸಾರ್ವಜನಿಕರ ಆಸ್ಪತ್ರೆಯ ಆಡಳಿತಾಧಿಕಾರಿ ಡಾ.ಅಭಿಲಾಷ್ ತಿಳಿಸಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆಯ ತಮ್ಮ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹೃದಯ ಹಾಗೂ ಕ್ಯಾನ್ಸರ್ ಕಾಯಿಲೆ ಪತ್ತೆ ಹಚ್ಚುವ ಕಾರ್ಯಕ್ರಮವನ್ನು ಬೆಳಗ್ಗೆ 10 ರಿಂದ ಸಂಜೆ 4 ಗಂಟೆಯವರೆಗೆ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು. ಮೈಸೂರು ಜಿಲ್ಲೆಯ ತಿ.ನರಸೀಪುರ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಮೊದಲ ತಪಾಸಣಾ ಶಿಬಿರ ಉದ್ಘಾಟನೆಯಾಗುತ್ತಿದ್ದು, ನಾರಾಯಣ ಹೃದಯಾಲಯದಿಂದ ತಜ್ಞ ವೈದ್ಯರು ಹೃದಯ ಹಾಗೂ ಕ್ಯಾನ್ಸರ್ ಸಂಬಂಧಿ ಕಾಯಿಲೆಯನ್ನು ಪತ್ತೆ ಹಂಚುವ ಕಾರ್ಯಕ್ರಮವಾಗಿದೆ. ಸಾರ್ವಜನಿಕರು ಇದರ ಸದುಪಯೋಗವನ್ನು ಪಡೆದುಕೊಳ್ಳುವಂತೆ ಹೇಳಿದರು.

ಗೋಷ್ಠಿಯಲ್ಲಿ ಡಾ.ನಾಗೇಶ್‌ರಾವ್, ಡಾ.ದಯಾನಂದ್ ಬಾಬು, ಡಾ.ವೆಂಕಟೇಶ್, ನೇತ್ರ ತಜ್ಞ ಉಮೇಶ್ ಇತರರು ಹಾಜರಿದ್ದರು.

ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿವಿಯಿಂದ ಮಹಾಶಿವರಾತ್ರಿ ಪ್ರಯುಕ್ತ

# ಜ್ಞಾನ ವಿಜ್ಞಾನ ದಿವ್ಯದರ್ಶನ ಮೇಳಕ್ಕೆ ಚಾಲನೆ



ತ್ರಿಮೂರ್ತಿ ಶಿವಜಯಂತಿ ಮಹೋತ್ಸವ ಪ್ರಯುಕ್ತ ಇಂದಿ(ಬುಧವಾರ)ನಿಂದ ಮಾ.2ರವರೆಗೆ ನಡೆಯುವ 'ಜ್ಞಾನ ವಿಜ್ಞಾನ ದಿವ್ಯ ದರ್ಶನ ಮೇಳ'ಕ್ಕೆ ಕಸಾಪ ರಾಜ್ಯಾಧ್ಯಕ್ಷ ಡಾ.ಮಹೇಶ್ ಜೋಶಿ ಚಾಲನೆ ನೀಡಿದರು.

"'ಜ್ಞಾನ–ವಿಜ್ಞಾನ ದಿವ್ಯ ದರ್ಶನ ಮೇಳ'ಕ್ಕೆ ಇಂದಿ(ಬುಧವಾರ)ನಿಂದ ಮಾ.2ರವರೆಗೆ ಪ್ರತಿದಿನ ಬೆಳಗ್ಗೆ 8ರಿಂದ ರಾತ್ರಿ 9ರವರೆಗೆ ಪ್ರಸಿದ್ಧ ಕಾಶಿವಿಶ್ವನಾಥ ದರ್ಶನ, 12 ಜ್ಯೋತಿರ್ಲಿಂಗ ದರ್ಶನಕ್ಕೆ ಸಾರ್ವಜನಿಕರಿಗೆ ಉಚಿತ ಪ್ರವೇಶ ಇರಲಿದ್ದು, ನಾಳೆ(ಫೆ.20) ಸಂಜೆ 6.45ರಿಂದ 7.45ರವರೆಗೆ ಮಾಜಿ ಲೋಕಾಯುಕ್ತ, ನಿವೃತ್ತ ನ್ಯಾಯಮೂರ್ತಿ ಎನ್. ಸಂತೋಷ ಹೆಗ್ಡೆ ಅವರು 'ಮೌಲ್ಯಾಧಾರಿತ ಜೀವನದ ಒಳಗುಟ್ಟು' ವಿಷಯ ಕುರಿತು ವಿಶೇಷ ಉಪನ್ಯಾಸ ನೀಡಲಿದ್ದಾರೆ.



ಯುವಕರು ವ್ಯಸನಗಳಿಂದ ಮುಕ್ತರಾಗುವಂತೆ ಅರಿವು ಮೂಡಿಸುವ ನಿದ್ರಾವಸ್ಥೆಯಲ್ಲಿರುವ ಕುಂಭಕರ್ಣನ ಪ್ರತಿಮೆ



ನವಚೈತನ್ಯ ಗೆಳೆಯರ ದರ್ಶನದ ದೃಶ್ಯ

ಮೈಸೂರು, ಫೆ.19(ಎಸ್‌ಪಿಎನ್)– ಮೈಸೂರು–ಹುಣಸೂರು ರಸ್ತೆಯ ಭಾರತೀಯ ವಿದ್ಯಾಭವನ ಮುಂಭಾಗದಲ್ಲಿ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾನಿಲಯ ಮೈಸೂರು ಘಟಕದ ವತಿಯಿಂದ ತ್ರಿಮೂರ್ತಿ ಶಿವಜಯಂತಿ ಮಹೋತ್ಸವ ಪ್ರಯುಕ್ತ ಇಂದಿ(ಬುಧವಾರ)ನಿಂದ ಮಾ.2ರವರೆಗೆ ನಡೆಯುವ 'ಜ್ಞಾನ ವಿಜ್ಞಾನ ದಿವ್ಯ ದರ್ಶನ ಮೇಳ'ಕ್ಕೆ ಕನ್ನಡ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ, ನಾಡೋಜ ಡಾ.ಮಹೇಶ್ ಜೋಶಿ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಕತ್ತಲೆಯಿಂದ ಬೆಳಕಿನೆಡೆಗೆ ತರುವ, ಅಜ್ಞಾನದಿಂದ ಸುಜ್ಞಾನದೆಡೆ ಕೊಂಡೊಯ್ಯುವ ಮಹಾಶಿವರಾತ್ರಿ ಪ್ರಯುಕ್ತ 'ಜ್ಞಾನ–ವಿಜ್ಞಾನ ದಿವ್ಯದರ್ಶನ ಮೇಳ'ವನ್ನು ಆಯೋಜಿಸಿರುವುದು ಉತ್ತಮ ಸಂಗತಿ. ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿವಿಯಿಂದ ಆಯೋಜಿಸಿರುವ 12 ದಿನಗಳ ಈ ಮೇಳದಲ್ಲಿ 'ಸತ್ಯಂ ಶಿವಂ ಸುಂದರಂ' ಘೋಷವಾಕ್ಯಕ್ಕೆ ತಕ್ಕಂತೆ ಈ ಮೇಳ ಆಯೋಜನೆಗೊಂಡಿದೆ ಎಂದು ಬಣ್ಣಿಸಿದರು.

ಪ್ರಜಾಪಿತ ಈಶ್ವರೀಯ ವಿವಿಯಲ್ಲಿ ಧ್ಯಾನ, ಯೋಗ, ಪರಮಾತ್ಮ ದಿವ್ಯ ದರ್ಶನ ಸೇರಿದಂತೆ ಆಧ್ಯಾತ್ಮವಾಗಿ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಇಂತಹ ಸಂಘಟನೆಯಲ್ಲಿ ಮಹಿಳೆಯರೇ ಮುಂದೆ ನಿಂತು ಆಧ್ಯಾತ್ಮ ಸಂಘಟನೆ ಮಾಡುತ್ತಿರುವುದು ಉತ್ತಮ ಸಂಗತಿ. ಅಲ್ಲದೆ, ಈ ಮೇಳದಲ್ಲಿ ಶಿವರಾತ್ರಿ ಪ್ರಯುಕ್ತ 150 ಅಡಿ ಉದ್ದ ಮತ್ತು 50 ಅಡಿ ಎತ್ತರದ ಕಾಶಿವಿಶ್ವನಾಥ ಮಂದಿರದ ಪ್ರತಿರೂಪವನ್ನು ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿವಿಯಿಂದ ಸ್ಥಾಪನೆ ಮಾಡಿ, ಮೈಸೂರಿನ ಜನತೆ ಶಿವನ ವಿವಿಧ ರೂಪ ದರ್ಶನ ಮಾಡಿಸುತ್ತಿರುವುದು ವಿಶೇಷ ಸಂಗತಿ ಎಂದರು. ಪ್ರಸ್ತುತ ಸಂದರ್ಭದಲ್ಲಿ ಸ್ತ್ರೀ ಸಮಾನತೆ, ಮಹಿಳಾ ಸಬಲೀಕರಣ ಕುರಿತು ಚರ್ಚಿಸುತ್ತೇವೆ. ಆದರೆ, ಪುರಾಣದಲ್ಲಿ ಈಶ್ವರನ ತಲೆ ಮೇಲೆ ಗಂಗೆಗೆ ಸ್ಥಾನ ನೀಡಿ, ಗೌರವಿಸಲಾಗಿದೆ. ಬೆಂಕಿ ಮತ್ತು ನೀರು ಒಂದೆಡೆ ಇರಲು ಸಾಧ್ಯವೇ ಇಲ್ಲ. ಆದರೆ, ಶಿವನ ಮೂರನೇ ಕಣ್ಣಿನಲ್ಲಿ ಬೆಂಕಿ, ತಲೆಮೇಲೆ ಗಂಗೆ ಇಟ್ಟು ಎಲ್ಲದಕ್ಕೂ ಸಮಾನತೆ ಕಲ್ಪಿಸುವ ಸ್ಥಾನದಲ್ಲಿ ಶಿವನಲ್ಲಿ ಕಾಣಬಹುದಾಗಿದೆ ಎಂದರು.

ಈ ಮೇಳದಲ್ಲಿ 21 ಅಡಿ ಎತ್ತರದ ರೂಬಿ ಕಲ್ಲಿನ ಶಿವಲಿಂಗ, ವಿವಿಧ ರಾಜ್ಯದಲ್ಲಿರುವ 12 ಜ್ಯೋತಿರ್ಲಿಂಗಗಳಾದ ರಾಮೇಶ್ವರಂ, ಸೋಮ ನಾಥ, ನಾಗೇಶ್ವರ, ಓಂಕಾರೇಶ್ವರ, ಗೃಷ್ಣೇಶ್ವರ, ಮಲ್ಲಿಕಾರ್ಜುನ, ಮಹಾಕಾಳೇಶ್ವರ, ವೈದ್ಯನಾಥೇಶ್ವರ ಜ್ಯೋತಿರ್ಲಿಂಗ ಸೇರಿದಂತೆ ಇತರೆ ಜ್ಯೋತಿರ್ಲಿಂಗ ಗಳನ್ನು ಸ್ಥಾಪಿಸಿ, ಭಕ್ತರ ದರ್ಶನಕ್ಕೆ ಅನುಕೂಲ ಮಾಡಿರುವುದು ಸಂತೋಷದ ಸಂಗತಿ. ಈ ಲಿಂಗ ಗಳು ಇರುವ ಕಡೆ ಹೋಗಿ, ನೋಡಲು ಸಾಧ್ಯ ವಿಲ್ಲದ ಭಕ್ತರಿಗೆ ಒಂದೆಡೆ ದರ್ಶನ ಮಾಡಲು ಈ ಮೇಳ ಅವಕಾಶ ಕಲ್ಪಿಸಿರುವುದು ಉತ್ತಮ ಕಾರ್ಯ ಎಂದರು.

ರಾಮಾಯಣದಲ್ಲಿ ಬರುವ ನಿದ್ರಿಸುತ್ತಿರುವ ಕುಂಭಕರ್ಣನ ಪ್ರತಿಮೆಯನ್ನು ಸ್ಥಾಪಿಸಿ, ಮಾದಕ ವ್ಯಸನಿಗಳ ವಿರುದ್ಧ ಧಾರ್ಮಿಕವಾಗಿಯೂ ಜಾಗೃತಿ ಮೂಡಿಸಬಹುದು ಎಂದು ಪ್ರಜಾಪಿತ ಬ್ರಹ್ಮಕುಮಾರಿ ಸಂಸ್ಥೆ ತೋರಿಸಿಕೊಟ್ಟಿದೆ. ಅಲ್ಲದೆ, ಮನಸ್ಸಿನ ಮಸಾಜು ಮಾಡುವ ಐದು ನಿಮಿಷಗಳ ಕಂಪ್ಯೂಟರ್ ಪ್ರೋಗ್ರಾಂ, ಗೃಹಸ್ಥ ಜೀವನದಲ್ಲಿ ಸಾಮರಸ್ಯದಿಂದಿರುವ ಪ್ರಾಯೋಗಿಕ ಚಿತ್ರ ಪ್ರದರ್ಶನ, ವಿದ್ಯಾರ್ಥಿಗಳಲ್ಲಿ ಏಕಾಗ್ರತೆ ಮತ್ತು ಗುರಿ ಸಾಧಿಸುವ ಕುರಿತು ಚರ್ಚೆ, ಮೌಲ್ಯಗಳ ಪ್ರಯೋಗ ವಿವರಿಸುವ ವಿವಿಧ ಮಾದರಿ ಆಟಗಳು (ಗೇಮ್ಸ್) ಹಾಗೂ ಪ್ರತಿ ಸಂಜೆ ವಿಶೇಷ ಉಪನ್ಯಾಸ, ಸಾಂಸ್ಕೃತಿಕ ಕಾರ್ಯಕ್ರಮ, ಚಿಂತನೆ, ಧ್ಯಾನ ಕಾರ್ಯಕ್ರಮಗಳನ್ನು ಆಯೋಜಿಸಿ, ಸಮಾಜದಲ್ಲಿ ಸ್ವಾಸ್ಥ್ಯ ಕಾಪಾಡಲು ಮುಂದಾಗಿರುವ ಪ್ರಜಾಪಿತ ಈಶ್ವರೀಯ ವಿವಿಯ ಕಾರ್ಯ ಶ್ಲಾಘನೀಯ ಎಂದರು.

ಈ ವೇಳೆ ಕುಂದೂರು ಮಠದ ಡಾ.ಶರಚ್ಚಂದ್ರ ಸ್ವಾಮೀಜಿ, ಶ್ರೀ ಯೋಗಾನರಸಿಂಹ ಸ್ವಾಮಿ ದೇವಸ್ಥಾನದ ನಾಡೋಜ ಪ್ರೊ.ಭಾಷ್ಯಂ ಸ್ವಾಮೀಜಿ, ಈಶ್ವರೀಯ ವಿವಿಯ ಮೈಸೂರು ಉಪವಲಯದ ರಾಜಯೋಗಿನಿ ಬ್ರಹ್ಮಕುಮಾರಿ ಲಕ್ಷ್ಮೀಜಿ, ಮೈಸೂರು ನಗರಪಾಲಿಕೆ ಮಾಜಿ ಸದಸ್ಯ ಮಾ.ರಾಮಪ್ರಸಾದ್, ಮಂಜುನಾಥ್, ಸಂಪತ್‌ಕುಮಾರ್, ಎಲ್.ಕೆ.ಪಾಟೀಲ, ಶ್ರೀ ಚೈತನ್ಯ ಸ್ವಾಮೀಜಿ, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಸೇರಿದಂತೆ ಹಲವರು ಉಪಸ್ಥಿತರಿದ್ದರು. ನೃತ್ಯಪಟು ಬೃಂದಾ ನಂಜುಂಡಸ್ವಾಮಿ ಅವರಿಂದ ನೃತ್ಯಪ್ರದರ್ಶನ ನೀಡಿದರು. ಜಾನಪದ ಗಾಯಕ ಅಮ್ಮ ಶ್ರೀರಾಮಚಂದ್ರ ಅವರು ಭಕ್ತಿಗೀತೆಗಳನ್ನು ಹಾಡಿದರು.

## ಮೈಸೂರು ಚಿತ್ರಮಂದಿರಗಳಲ್ಲಿ

| | |
|---|---|
| **ಪದ್ಮ ಚಿತ್ರಮಂದಿರ** | (ದೂ: 2521923) |
| ತಂಡೆಲ್ (ತೆ) | 4 ಪ್ರದರ್ಶನಗಳು |
| **ವುಡ್‌ಲ್ಯಾಂಡ್ಸ್ ಚಿತ್ರಮಂದಿರ** | (ದೂ: 2422871) |
| ರಾಜು ಜೇಮ್ಸ್ ಬಾಂಡ್ (ಕ) | 4 ಪ್ರದರ್ಶನಗಳು |
| **ಬಾಲಾಜಿ ಚಿತ್ರಮಂದಿರ** | (ದೂ: 2497199) |
| ಸನಮ್ ತೇರಿ ಕಸಮ್ (ಹಿಂ) | 4 ಪ್ರದರ್ಶನಗಳು |
| **ಮಹದೇಶ್ವರ ಚಿತ್ರಮಂದಿರ** | (ಮೊ:9900820093) |
| ರಾಜು ಜೇಮ್ಸ್ ಬಾಂಡ್ (ಕ) | 4 ಪ್ರದರ್ಶನಗಳು |
| **ಗಾಯಿತ್ರಿ** | |
| ಸಿದ್ಲಿಂಗು–2 (ಕ) | 4 ಪ್ರದರ್ಶನಗಳು |
| **ರಾಜಕಮಲ್** | |
| ವಿದಾಮುಯರ್ಚಿ (ತ) | 4 ಪ್ರದರ್ಶನಗಳು |
| **ಸಂಗಂ** | |
| ಛಾವಾ (ಹಿ) | 4 ಪ್ರದರ್ಶನಗಳು |
| **ಲಿಡೋ** | |
| ಭುವನಂ ಗಗನಂ (ಕ) | 4 ಪ್ರದರ್ಶನಗಳು |
| **ತಿಬ್ಬಾದೇವಿ** | |
| ಮ್ಯಾಕ್ಸ್ (ಕ) | 4 ಪ್ರದರ್ಶನಗಳು |
| **ಪ್ರಭಾ** | |
| ಭಗೀರಥ (ಕ) | 4 ಪ್ರದರ್ಶನಗಳು |

**ಡಿಆರ್‌ಸಿ ಸಿನಿಮಾಸ್** ದೂ : 4240422/4241800

| | |
|---|---|
| ಸ್ಕ್ರೀನ್ 1 | ವಿದ್ದಾಮುಯರ್ಚಿ (ತ): ಬೆ.6.55ಕ್ಕೆ, ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.15ಕ್ಕೆ, ರಾ.10.24ಕ್ಕೆ. |
| ಸ್ಕ್ರೀನ್ 2 | ಅಧಿಪತ್ರ (ಕ): ಬೆ.10.10ಕ್ಕೆ, ನೋಡಿದವರು ಏನಂತಾರೆ (ಕ): ಮ.1.15ಕ್ಕೆ, ರುದ್ರ ಗರುಡ ಪುರಾಣ (ಕ): ಸಂ.4.10ಕ್ಕೆ, ಬಡಾಸ್ ರವಿಕುಮಾರ್ (ಹಿಂ): ರಾ.7.10ಕ್ಕೆ, ನರೇ ಅನೀಂಟೆ ಮೂನನ್‌ಮಕ್ಕಲ್ (ಮ): ರಾ.10.10ಕ್ಕೆ. |
| ಸ್ಕ್ರೀನ್ 3 | ಮಿ.ರಾಣಿ (ಕ): ಬೆ.10.30ಕ್ಕೆ, ಲವಯಪಾ (ಹಿಂ): ಮ.1.15ಕ್ಕೆ, ರಾ.7.05ಕ್ಕೆ, ರಾ.10ಕ್ಕೆ, ಭಗೀರಥ (ಕ): ಸಂ.4.10ಕ್ಕೆ. |
| ಸ್ಕ್ರೀನ್ 4 | ಅನ್‌ಲಾಕ್ ರಾಘವ (ಕ): ಬೆ.10.25ಕ್ಕೆ, ಸ್ಕೈಫೋರ್ಸ್ (ಹಿಂ): ಮ.1.20ಕ್ಕೆ, ಥಂಡೆಲ್ (ತೆ): ಸಂ.4.15ಕ್ಕೆ, ರಾ.7.20ಕ್ಕೆ, ರಾ.10.25ಕ್ಕೆ. |

**ಐನಾಕ್ಸ್ ಮೂವೀಸ್** ದೂ : 2533444 / 2433456

| | |
|---|---|
| ಸ್ಕ್ರೀನ್ 1 | ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ. |
| ಸ್ಕ್ರೀನ್ 2 | ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ. |
| ಸ್ಕ್ರೀನ್ 3 | ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ. |
| ಸ್ಕ್ರೀನ್ 4 | ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ. |

**ಮೈಸೂರು ವಿಷನ್ ಸಿನಿಮಾ** ದೂ : 0821–2973519


| | |
|---|---|
| ಸ್ಕ್ರೀನ್ 1 | ರಾಯಲ್ (ಕ): ಬೆ.10.40ಕ್ಕೆ, ರುದ್ರ ಗರುಡ ಪುರಾಣ (ಕ): ಮ.1.30ಕ್ಕೆ, ಸಂ.6.45ಕ್ಕೆ, ಮ್ಯಾಕ್ಸ್ (ಕ): ಸಂ.4.15ಕ್ಕೆ, ಕುಜಂತೈಗಲ್ ಮುನ್ನೇತ್ರ ಕಳಗಂ (ತ): ರಾ.9.30ಕ್ಕೆ. |
| ಸ್ಕ್ರೀನ್ 2 | ಫಾರೆಸ್ಟ್ (ಕ): ಮ.1.05ಕ್ಕೆ, ಮ.3.50ಕ್ಕೆ, ರಾಯಲ್ (ಕ): ಸಂ.6.35ಕ್ಕೆ, ಸ್ಕೈ ಫೋರ್ಸ್ (ಹಿಂ): ರಾ.9.30ಕ್ಕೆ. |
| ಸ್ಕ್ರೀನ್ 3 | ಸ್ಕೈ ಫೋರ್ಸ್ (ಹಿಂ): ಬೆ.11ಕ್ಕೆ, ರಾ.7.05ಕ್ಕೆ, ರಾಯಲ್ (ಕ): ಮ.1.25ಕ್ಕೆ, ಡೊಮಿನಿಕ್ ಅಂಡ್ ದಿ ಲೇಡಿಸ್ ಪರ್ಸ್ (ಮ): ಸಂ.4.15ಕ್ಕೆ, ರಾ.9.30ಕ್ಕೆ |
| ಸ್ಕ್ರೀನ್ 4 | ಫಾರೆಸ್ಟ್ (ಕ): ಬೆ.10.40ಕ್ಕೆ, ರಾ.9.20ಕ್ಕೆ, ಛೂ ಮಂತರ್ (ಕ): ಮ.1.30ಕ್ಕೆ, ಸಂ.6.40ಕ್ಕೆ, ಸ್ಕೈ ಫೋರ್ಸ್ (ಹಿಂ): ಸಂ.4.15ಕ್ಕೆ. |

**ಪಿವಿಆರ್ ಸಿನಿಮಾಸ್** ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಏಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

# ಕರ್ನಾಟಕದಲ್ಲಿ ಈ ಬಾರಿ ಬೇಸಿಗೆಯಲ್ಲಿ ಲೋಡ್ ಶೆಡ್ಡಿಂಗ್ ಇಲ್ಲ



ನೆಲಮಂಗಲ, ಫೆ.19– ಬೇಸಿಗೆ ಸಮಯಕ್ಕೆ ರಾಜ್ಯದಲ್ಲಿ 19500 ಮೆಗಾವ್ಯಾಟ್ ವಿದ್ಯುತ್ ಬೇಡಿಕೆ ಇದೆ. ಇನ್ನೂ ಹೆಚ್ಚಿನ ಬೇಡಿಕೆ ಬಂದರೆ, ವ್ಯವಸ್ಥೆಗೆ ಸಿದ್ಧತೆ ಮಾಡಿಕೊಳ್ಳಲಾಗಿದೆ. ಲೋಡ್ ಶೆಡ್ಡಿಂಗ್ ಸಮಸ್ಯೆ ಎದುರಾಗುವುದಿಲ್ಲ ಎಂದು ಇಂಧನ ಸಚಿವ ಕೆಜೆ ಜಾರ್ಜ್ ತಿಳಿಸಿದರು.



ಕೆ.ಜೆ.ಜಾರ್ಜ್

ನಗರದ ಬಸವನಹಳ್ಳಿಯ ವಿದ್ಯುತ್ ಉಪಕೇಂದ್ರದಲ್ಲಿ ಶಾಸಕ ಎನ್.ಶ್ರೀನಿವಾಸ್ ನೇತೃತ್ವದಲ್ಲಿ ಆಯೋಜಿಸಿದ್ದ 220ಕೆವಿ ವಿದ್ಯುತ್ ಉಪಕೇಂದ್ರ ನಿರ್ಮಾಣಕ್ಕೆ ಭೂಮಿ ಪೂಜೆ ಸಮಾರಂಭದಲ್ಲಿ ಅವರು ಮಾತನಾಡಿದರು. ರಾಜ್ಯದಲ್ಲಿ 10 ಲಕ್ಷ ಕಿ.ಮೀ. ವಿದ್ಯುತ್ ಲೈನ್ ವ್ಯವಸ್ಥೆ ಇದೆ. 6ಲಕ್ಷ ಟ್ರಾನ್ಸ್‌ಫಾರ್ಮರ್‌ಗಳು ಇವೆ. ಒಮ್ಮೆಲೆ ಲೈನ್ ರಿಪೇರಿ ಬಂದಾಗ ಕರೆಂಟ್ ಇಲ್ಲ ಎಂದು ಜನ ಹೇಳುವರು. ಆದರೆ ನಮಗೆ ಬೇಕಾದ ವಿದ್ಯುತ್ ಲಭ್ಯ ಇದೆ. ಲೋಡ್ ಶೆಡ್ಡಿಂಗ್ ಸಮಸ್ಯೆ ಇಲ್ಲ ಎಂದರು.

ಈಗಗಾಲೇ 50 ರಿಂದ 60 ವಿದ್ಯುತ್ ಉಪಕೇಂದ್ರಗಳನ್ನು ರಾಜ್ಯದಲ್ಲಿ ಮಾಡಲಾಗುತ್ತಿದೆ. ಮುಂದಿನ ವರ್ಷದಲ್ಲಿ 100 ಉಪಕೇಂದ್ರಗಳ ಸ್ಥಾಪನೆಗೆ ಈಗಗಾಲೇ ಯೋಜನೆ ರೂಪಿಸಲಾಗಿದೆ. ಶರಾವತಿಯಲ್ಲಿ 2 ಸಾವಿರ ಮೆಗಾವ್ಯಾಟ್ ವಿದ್ಯುತ್ ಸಂಗ್ರಹಣೆ ಮಾಡಲು ಸಿದ್ಧತೆ ಆರಂಭವಾಗಿದೆ. ಸೋಲಾರ್ ವಿದ್ಯುತ್‌ನಲ್ಲಿ ನೀರು ಸಂಗ್ರಹಿಸಿ, ನೀರಿನಿಂದ ವಿದ್ಯುತ್ ಉತ್ಪಾದನೆ ಮಾಡಲಾಗುವುದು. ಪಾವಗಡದಲ್ಲಿ ಈಗಿರುವ ಸೋಲಾರ್ ಪಾರ್ಕ್ ಜತೆ 10ಸಾವಿರ ಎಕರೆಯಲ್ಲಿ ಮತ್ತೊಂದು ಪಾರ್ಕ್ ಮಾಡಲು ರೈತರು ಭೂಮಿ ನೀಡಲು ತಯಾರಿದ್ದಾರೆ. ಅದನ್ನು ಅನುಷ್ಠಾನ ಮಾಡುವ ಮೂಲಕ ಶಾಶ್ವತವಾಗಿ ವಿದ್ಯುತ್ ಸಮಸ್ಯೆ ಇಲ್ಲದಂತೆ ಮಾಡಲಾಗುತ್ತದೆ ಎಂದರು.

# ಮುಖ್ಯ ಚುನಾವಣಾ ಆಯುಕ್ತರಾಗಿ ಜ್ಞಾನೇಶ್ ಕುಮಾರ್ ಅಧಿಕಾರ ಸ್ವೀಕಾರ



ನವದೆಹಲಿ, ಫೆ.19– ಕೇಂದ್ರ ಚುನಾವಣಾ ಆಯೋಗದ 26ನೇ ಮುಖ್ಯ ಚುನಾವಣಾ ಆಯುಕ್ತರಾಗಿ ನೇಮಕಗೊಂಡ ಜ್ಞಾನೇಶ್ ಕುಮಾರ್ ಇಂದು (ಬುಧವಾರ) ದೆಹಲಿಯಲ್ಲಿ ಅಧಿಕಾರ ವಹಿಸಿಕೊಂಡರು.

ಸೋಮವಾರ ಉನ್ನತ ಚುನಾವಣಾ ಆಯೋಗದ ನೇತೃತ್ವ ವಹಿಸಲು ಅವರ ಹೆಸರನ್ನು ಘೋಷಿಸಿದ ನಂತರ ರಾಷ್ಟ್ರಪತಿ ಶ್ರೀಮತಿ ದ್ರೌಪದಿ ಮುರ್ಮು ಅವರು ಜ್ಞಾನೇಶ್ ಕುಮಾರ್ ಅವರನ್ನು ಮುಖ್ಯ ಚುನಾವಣಾ ಆಯುಕ್ತರನ್ನಾಗಿ ನೇಮಿಸಿದರು.

ಹಿಂದಿನ ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಅವರ ಅಧಿಕಾರಾವಧಿ ಮುಗಿದ ನಂತರ ಪ್ರಧಾನಿ ನರೇಂದ್ರ ಮೋದಿ ಅವರು ಹೊಸ ಸಿಇಸಿ ನೇಮಕ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಕೂಡ ಸಭೆಯಲ್ಲಿ ಭಾಗವಹಿಸಿದ್ದರು. ರಾಹುಲ್ ಗಾಂಧಿ ನೇಮಕಾತಿಯ ವಿರುದ್ಧ ಮತ ಚಲಾಯಿಸಿದರು, ಸಭೆಯನ್ನು ಅರ್ಥಹೀನ ಎಂದು ಕರೆದರು.

ಜ್ಞಾನೇಶ್ ಕುಮಾರ್ ಇಂದು ಬೆಳಗ್ಗೆ ಚುನಾವಣಾ ಆಯೋಗದ ಕಚೇರಿಗೆ ಆಗಮಿಸಿದಾಗ, ಅಲ್ಲಿ ಅವರನ್ನು ಚುನಾವಣಾ ಆಯುಕ್ತ ಡಾ. ಸುಖ್‌ಬೀರ್ ಸಿಂಗ್ ಸಂಧು ಸ್ವಾಗತಿಸಿದರು.

ಜನವರಿ 26, 2029 ರವರೆಗೆ ತಮ್ಮ ಅಧಿಕಾರಾವಧಿಯಲ್ಲಿ ತಮ್ಮ ಆದ್ಯತೆಗಳನ್ನು ಪಟ್ಟಿ ಮಾಡಿದ ಜ್ಞಾನೇಶ್ ಕುಮಾರ್, ಭಾರತದಲ್ಲಿ 18 ವರ್ಷ ತುಂಬಿದ ಪ್ರತಿಯೊಬ್ಬ ವ್ಯಕ್ತಿಯು ಮತದಾರರಾಗಬೇಕು ಎಂದು ಹೇಳಿದರು. ಚುನಾವಣಾ ಆಯೋಗವು ಯಾವಾಗಲೂ ಮತದಾರರ ಪರವಾಗಿ ಕೆಲಸ ಮಾಡುತ್ತದೆ ಎಂದರು.

ರಾಷ್ಟ್ರ ನಿರ್ಮಾಣದ ಮೊದಲ ಹೆಜ್ಜೆ ಮತದಾನ. ಆದ್ದರಿಂದ, 18 ವರ್ಷಗಳನ್ನು ಪೂರ್ಣಗೊಳಿಸಿದ ಭಾರತದ ಪ್ರತಿಯೊಬ್ಬ ನಾಗರಿಕನು ಮತದಾರರಾಗಬೇಕು ಮತ್ತು ಯಾವಾಗಲೂ ಮತ ಚಲಾಯಿಸಬೇಕು. ಭಾರತದ ಸಂವಿಧಾನ, ಚುನಾವಣಾ ಕಾನೂನುಗಳು, ನಿಯಮಗಳು ಮತ್ತು ಅದರಲ್ಲಿ ನೀಡಲಾದ ಸೂಚನೆಗಳ ಪ್ರಕಾರ, ಭಾರತದ ಚುನಾವಣಾ ಆಯೋಗವು ಮತದಾರರೊಂದಿಗೆ ಹಿಂದೆಯೂ ಇತ್ತು, ಇಂದು ಇರುತ್ತದೆ ಮತ್ತು ಮುಂದೆಯೂ ಯಾವಾಗಲೂ ಇರುತ್ತದೆ ಎಂದರು.

ಜ್ಞಾನೇಶ್ ಕುಮಾರ್ ಅವರು ಈ ಹಿಂದೆ ಚುನಾವಣಾ ಆಯುಕ್ತರಾಗಿ ಸೇವೆ ಸಲ್ಲಿಸಿದ್ದರು. ಈ ಹಿಂದೆ ಅಮಿತ್ ಶಾ ಅವರೊಂದಿಗೆ ಗೃಹ ಸಚಿವಾಲಯದಲ್ಲಿ ಕೆಲಸ ಮಾಡಿದ್ದರು. ಅವರು ಕೇರಳ ಕೇಡರ್‌ನ 1988ರ ಬ್ಯಾಚ್ ಅಧಿಕಾರಿಯಾಗಿದ್ದು, ರಕ್ಷಣಾ, ಸಂಸದೀಯ ವ್ಯವಹಾರಗಳು ಮತ್ತು ಸಹಕಾರ ಸೇರಿದಂತೆ ಹಲವಾರು ಸಚಿವಾಲಯಗಳಲ್ಲಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ.

# ತಿಂಗಳು ತಿಂಗಳು ಗ್ಯಾರಂಟಿ ಕೊಡ್ಲಿಕ್ಕೆ ಅದೇನು ಸಂಬಳ ಅಲ್ವಲ್ಲಾ!

## ಸಚಿವ ಕೆ.ಜೆ.ಜಾರ್ಜ್ ಉಡಾಫೆ ಉತ್ತರ

ಬೆಂಗಳೂರು, ಫೆ.19– ಗೃಹಲಕ್ಷ್ಮಿ ಯೋಜನೆ ಸೇರಿದಂತೆ ಅನ್ನಭಾಗ್ಯದ ಹಣವೂ ಎರಡ್ಮೂರು ತಿಂಗಳಿಂದ ಫಲಾನುಭವಿಗಳಿಗೆ ಪಾವತಿ ಆಗಿಲ್ಲ. ಜನ ಚಾತಕ ಪಕ್ಷಿಯಂತೆ ಕಾಯುತ್ತಿದ್ದಾರೆ. ಆದರೆ ಗ್ಯಾರಂಟಿ ಯೋಜನೆಗಳ ಬಗ್ಗೆ ಸಚಿವ ಕೆ.ಜೆ.ಜಾರ್ಜ್ ಉಡಾಫೆ ಉತ್ತರ ನೀಡಿದ್ದಾರೆ.

ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡುವಾಗ ಅವರು, ಅದೇನು ತಿಂಗಳ ಸಂಬಳ ಅಲ್ವಲ್ಲಾ, ತಿಂಗಳು ತಿಂಗಳು ಕೊಡೋದಕ್ಕೆ ಎಂದಿದ್ದಾರೆ. ಗ್ಯಾರಂಟಿ ಯೋಜನೆಗಳು ತಡ ಆಗಿರುವುದಕ್ಕೆ ಮಾಜಿ ಸಚಿವ ಈಶ್ವರಪ್ಪ ಟೀಕಿಸಿದ್ದರು. ಸಿಎಂಗೆ ಗ್ಯಾರಂಟಿ ಹೋಗದಿರುವ ಬಗ್ಗೆ ಮಾಹಿತಿ ಇಲ್ಲ. ಹಾಗಿದ್ದರೆ ಅವರು ಹಣಕಾಸು ಸಚಿವರು ಯಾಕಾಗಿದ್ದಾರೆಂದು ಈಶ್ವರಪ್ಪ ಮಾಡಿರುವ ಟೀಕೆಗೆ ಪ್ರತಿಕ್ರಿಯಿಸಿರುವ ಇಂಧನ ಸಚಿವ ಕೆ.ಜೆ ಜಾರ್ಜ್, ನಮ್ಮ ಸರ್ಕಾರದ ಗ್ಯಾರಂಟಿ ಯೋಜನೆಗಳು ಜಾರಿಯಲ್ಲಿವೆ. ಈಗ ನಮ್ಮ ಇಲಾಖೆಗೆ ಸಂಬಂಧಿಸಿದಂತೆ 2,60,000 ಗ್ರಾಹಕರಿದ್ದಾರೆ, ತಿಂಗಳು ತಿಂಗಳು ಅವರಿಗೆ ಬಿಲ್‌ನಲ್ಲಿ ಈ ಅನುಕೂಲ ಆಗುತ್ತಿದೆ. ಕೆಲವರಿಗೆ ಗ್ಯಾರಂಟಿ ತಲುಪುವುದು ತಡ ಆಗಿರಬಹುದು, ಆದರೆ ಅದು ಸಚಿವರಿಗೆ ಗೊತ್ತಾಗ ಬೇಕು ಅಂತ ಏನಾದರೂ ಇದೆಯಾ, ಗೊತ್ತಾದ ಕೂಡಲೇ ಸಮಸ್ಯೆ ಬಗೆಹರಿಸಲಾಗುವುದು ಎಂದಿದ್ದಾರೆ.

ಇದು ತಿಂಗಳು ತಿಂಗಳು ಸಂಬಳದ ಟೈಪ್ ಅಲ್ವಲ್ಲ. ಮಾರ್ಚ್ ಒಳಗಡೆ ಎಲ್ಲಾ ಗ್ಯಾರಂಟಿ ಕೊಡುತ್ತಾರೆ ಎಂದು ಸ್ವತಃ ಸಿಎಂ ಹೇಳಿದ್ದಾರೆ. ಗ್ಯಾರಂಟಿ ಕೊಡದೇ ಇರುವುದಿಲ್ಲ. ಕೆಲವರಿಗೆ 10–15 ದಿನ ತಡ ಆಗಬಹುದು ಅಷ್ಟೆ, ಇದಕ್ಕೆ ಬೇರೆ ಬೇರೆ ಕಾರಣ ಇರಬಹುದು ಎಂದು ಸ್ಪಷ್ಟನೆ ನೀಡಿದ್ದಾರೆ.

ಇನ್ನು ಹಾಸಿಗೆ ಇದ್ದಷ್ಟೇ ಸರ್ಕಾರ ಕಾಲು ಚಾಚಬೇಕು, ಪುಕ್ಸಟ್ಟೆ ಗ್ಯಾರಂಟಿ ಯಾಕೆ ಕೊಟ್ರಿ ಎಂದು ಈಶ್ವರಪ್ಪ ಗ್ಯಾರಂಟಿ ಕುರಿತ ಟೀಕೆಗೆ ಪ್ರತಿಕ್ರಿಯಿಸಿದ ಸಚಿವ ಕೆ.ಜೆ ಜಾರ್ಜ್, ಈಶ್ವರಪ್ಪ ಅವರಿಗೆ ಗ್ಯಾರಂಟಿ ಕೊಡಲು ಪವರ್ ಇದೆಯಾ. ಅವರು ಅಧಿಕಾರದಲ್ಲಿದ್ದಾರಾ ಅವರು ಗ್ಯಾರಂಟಿ ಕೊಡ್ತಾರಾ ಎಂದು ಟೀಕಿಸಿದ್ದಾರೆ. ಇದೇ ಸಂದರ್ಭದಲ್ಲಿ, ಮಾತು ಮುಂದುವರಿಸಿ, ಮೋದಿಯವರನ್ನು ಎಲೆಕ್ಷನ್‌ಗೋಸ್ಕರ ಘೋಷಿಸಿದ ಗ್ಯಾರಂಟಿ ಎಷ್ಟು ಕೊಟ್ಟಿದ್ದಾರೆಂದು ಹೋಗಿ ಕೇಳಲಿ ಎಂದು ಹೇಳಿದ್ದಾರೆ.

## ಇದೇನಾ ಮತದಾರರಿಗೆ ಕೊಡುವ ಗೌರವ?

ಬೆಂಗಳೂರು, ಫೆ.19– ಕಾಂಗ್ರೆಸ್ ಸರ್ಕಾರದ ಮಹತ್ವಾಕಾಂಕ್ಷಿಯ ಗ್ಯಾರಂಟಿ ಯೋಜನೆಗಳಾದ ಗೃಹಲಕ್ಷ್ಮಿ, ಅನ್ನಭಾಗ್ಯ ಹಣವೇನು ತಿಂಗಳ ಸಂಬಳ ಅಲ್ವಲ್ಲಾ ಎಂಬ ಇಂಧನ ಸಚಿವ ಕೆ.ಜೆ.ಜಾರ್ಜ್ ಅವರ ಉಡಾಫೆಯ ಉತ್ತರ ಇದೀಗ ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ.



ಆರ್.ಅಶೋಕ್

ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಸಚಿವ ಜಾರ್ಜ್ ವಿರುದ್ಧ ವಾಗ್ದಾಳಿ ನಡೆಸಿರುವ ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ್, ಗೃಹಲಕ್ಷ್ಮಿ, ಅನ್ನಭಾಗ್ಯ ಹಣ ತಿಂಗಳ ಸಂಬಳ ಅಲ್ವಲ್ಲ ಅಂತ ಹೇಳಿದ್ದೀರಲ್ಲಾ, ಇದೇನಾ ಮತದಾರರಿಗೆ ನೀವು ಕೊಡುವ ಗೌರವ? ಎಂದು ಪ್ರಶ್ನಿಸಿದ್ದಾರೆ.

ಗೃಹಲಕ್ಷ್ಮಿ ಹಣ ಕೊಡಿ, ಅನ್ನಭಾಗ್ಯದ ಹಣ ಕೊಡಿ ಅಂತ ಮತದಾರರೇನು ನಿಮ್ಮ ಬಳಿ ಭಿಕ್ಷೆ ಬೇಡುತ್ತಿಲ್ಲ. ಈ ಗ್ಯಾರಂಟಿ ಯೋಜನೆಗಳನ್ನು ಪ್ರಾರಂಭಿಸಿ ಅಂತ ಜನತೆ ಕೇಳಿಯೂ ಇರಲಿಲ್ಲ. ನಿಮ್ಮ ಕಾಂಗ್ರೆಸ್ ಪಕ್ಷದ ಅಧಿಕಾರದ ತೆವಲಿಗೆ ಬೇಕಾಬಿಟ್ಟಿ ಗ್ಯಾರಂಟಿ ಯೋಜನೆಗಳನ್ನು ಘೋಷಣೆ ಮಾಡಿ ಈಗ ಮತದಾರರ ಬಗ್ಗೆ ಕೀಳಾಗಿ ಯಾಕೆ ಮಾಡುತ್ತೀರಿ? ನಿಮ್ಮ ಕೈಲಾದರೆ ಕೊಟ್ಟ ಮಾತಿನಂತೆ ಗ್ಯಾರಂಟಿ ಯೋಜನೆಗಳನ್ನು ಗೌರವದಿಂದ ಜಾರಿ ಮಾಡಿ. ನಿಮ್ಮ ಕೈಲಾಗದಿದ್ದರೆ ಬಿಟ್ಟುಬಿಡಿ ಎಂದು ಆಗ್ರಹಿಸಿದ್ದಾರೆ.

ಗ್ಯಾರಂಟಿ ಯೋಜನೆಗಳು ಜಾರಿ ಆಗುವ ಮುನ್ನವೂ ಜನರು ತಮ್ಮ ಬದುಕು ಕಟ್ಟಿಕೊಂಡಿದ್ದರು. ಅವು ಇಲ್ಲದೆಯೂ ತಮ್ಮ ಬದುಕು ಕಟ್ಟಿಕೊಳ್ಳುತ್ತಾರೆ. ಕಾಂಗ್ರೆಸ್ ಕೋಳಿ ಕೂಗಿದರೆ ಕರ್ನಾಟಕದಲ್ಲಿ ಬೆಳಕು ಹರಿಯುತ್ತದೆ ಎನ್ನುವ ದುಸ್ಥಿತಿ ಕನ್ನಡಿಗರಿಗೆ ಬಂದಿಲ್ಲ. ಕನ್ನಡಿಗರ ಸ್ವಾಭಿಮಾನ ಕೆಣಕಬೇಡಿ. ಈಗಾಗಲೇ ದೇಶದಾದ್ಯಂತ ಕಾಂಗ್ರೆಸ್ ಪಕ್ಷ ಅಡ್ರೆಸ್ ಇಲ್ಲದಂತಾಗಿದೆ. ಕನ್ನಡಿಗರ ಸ್ವಾಭಿಮಾನಕ್ಕೆ ಪೆಟ್ಟು ಬಿದ್ದರೆ ಕರ್ನಾಟಕದಲ್ಲೂ ಕಾಂಗ್ರೆಸ್ ಪಕ್ಷ ನಿರ್ನಾಮ ಆಗುವುದು ಗ್ಯಾರಂಟಿ ಎಂದು ಎಚ್ಚರಿಸಿದ್ದಾರೆ.

ಚಾಂಪಿಯನ್ಸ್ ಟ್ರೋಫಿ –2025

# ತವರಿನಲ್ಲೇ ಕಿವೀಸ್ ವಿರುದ್ಧ ಹೀನಾಯವಾಗಿ ಸೋತ ಪಾಕ್



ಕರಾಚಿ, ಫೆ.19– ಚಾಂಪಿಯನ್ಸ್ ಟ್ರೋಫಿಯ ಮೊದಲ ಪಂದ್ಯದಲ್ಲಿ ಸಾಂಘಿಕ ಪ್ರದರ್ಶನ ನೀಡಿದ ನ್ಯೂಜಿಲೆಂಡ್ ತಂಡ, ತನ್ನ ಮೊದಲ ಪಂದ್ಯದಲ್ಲೇ ಆತಿಥೇಯ ಪಾಕಿಸ್ತಾನವನ್ನು 60 ರನ್‌ಗಳಿಂದ ಸೋಲಿಸುವ ಮೂಲಕ ಗೆಲುವಿನ ಶುಭಾರಂಭ ಮಾಡಿದೆ. ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ನ್ಯೂಜಿಲೆಂಡ್, ಟಾಮ್ ಲ್ಯಾಥಮ್ ಮತ್ತು ವಿಲ್ ಯಂಗ್ ಅವರ ಶತಕಗಳ ನೆರವಿನಿಂದ 50 ಓವರ್‌ಗಳಲ್ಲಿ ಐದು ವಿಕೆಟ್‌ಗಳಿಗೆ 320 ರನ್ ಗಳಿಸಿತು.

ಇದಕ್ಕೆ ಉತ್ತರವಾಗಿ, ಹಾಲಿ ಚಾಂಪಿಯನ್ ಪಾಕಿಸ್ತಾನ ಪೂರ್ಣ 50 ಓವರ್‌ಗಳನ್ನು ಆಡಲು ಸಾಧ್ಯವಾಗದೆ 47.2 ಓವರ್‌ಗಳಲ್ಲಿ 260 ರನ್‌ಗಳಿಗೆ ಆಲೌಟ್ ಆಯಿತು. ಪಾಕಿಸ್ತಾನ ಪರ ಖುಸ್ದಿಲ್ ಶಾ ಮತ್ತು ಬಾಬರ್ ಆಝಂ ಅರ್ಧ ಶತಕ ಬಾರಿಸಿದರಾದರೂ ತಂಡಕ್ಕೆ ಗೆಲುವು ತಂದುಕೊಡಲು ಸಾಧ್ಯವಾಗಲಿಲ್ಲ. ಇದೀಗ ಕಿವೀಸ್ ವಿರುದ್ಧ ಸೋತಿರುವ ಪಾಕಿಸ್ತಾನಕ್ಕೆ ಭಾರತದ ವಿರುದ್ಧದ ಪಂದ್ಯವೇ ನಿರ್ಣಾಯಕವಾಗಿದೆ. ಟೀಂ ಇಂಡಿಯಾ ವಿರುದ್ಧ ಪಾಕಿಸ್ತಾನ ಸೋತರೆ ಲೀಗ್ ಹಂತದಲ್ಲೇ ಟೂರ್ನಿಯಿಂದ ಹೊರಬೀಳಲಿದೆ.

**ಕಿವೀಸ್ ತಂಡದಿಂದ ಇಬ್ಬರ ಶತಕ:** ಟಾಸ್ ಗೆದ್ದು ಬೌಲಿಂಗ್ ಆಯ್ಕೆ ಮಾಡಿಕೊಂಡ ಪಾಕಿಸ್ತಾನ ತಂಡ 9ನೇ ಓವರ್ ವೇಳೆಗೆ ಡೆವೊನ್ ಕಾನ್ವೇ ಮತ್ತು ಕೇನ್ ವಿಲಿಯಮ್ಸನ್ ಅವರನ್ನು ಪೆವಿಲಿಯನ್‌ಗೆ ಕಳುಹಿಸಿತು. ಇದಾದ ಸ್ವಲ್ಪ ಸಮಯದ ನಂತರ ಡ್ಯಾರಿಲ್ ಮಿಚೆಲ್ ಕೂಡ ವಿಕೆಟ್ ಒಪ್ಪಿಸಿದರು. ಹೀಗಾಗಿ ಸ್ಕೋರ್ 3 ವಿಕೆಟ್‌ಗಳಿಗೆ ಕೇವಲ 73 ರನ್‌ಗಳಾಗಿತ್ತು. ಇಲ್ಲಿಂದ ವಿಲ್ ಯಂಗ್ ಮತ್ತು ಟಾಮ್ ಲ್ಯಾಥಮ್ ಇನ್ನಿಂಗ್ಸ್ ಮೇಲೆ ಹಿಡಿತ ಸಾಧಿಸಿ ಪಾಕಿಸ್ತಾನಿ ಬೌಲರ್‌ಗಳನ್ನು ತರಾಟೆಗೆ ತೆಗೆದುಕೊಳ್ಳಲು ಪ್ರಾರಂಭಿಸಿದರು.

ವಿಲ್ ಯಂಗ್ ತಮ್ಮ ಏಕದಿನ ವೃತ್ತಿ ಜೀವನದ ಮೊದಲ ಶತಕವನ್ನು ದಾಖಲಿಸುವುದರೊಂದಿಗೆ ಲ್ಯಾಥಮ್ ಅವರೊಂದಿಗೆ 118 ರನ್‌ಗಳ ಪಾಲುದಾರಿಕೆಯನ್ನು ಮಾಡಿದರು. ಯಂಗ್ ಔಟಾದ ನಂತರ ಲ್ಯಾಥಮ್, ಗ್ಲೆನ್ ಫಿಲಿಪ್ಸ್ ಜೊತೆಗೂಡಿ 125 ರನ್‌ಗಳ ತ್ವರಿತ ಜೊತೆಯಾಟ ನಡೆಸಿ ತಂಡವನ್ನು 300 ರನ್‌ಗಳ ಗಡಿ ದಾಟಿಸಿದರು. ಈ ಸಮಯದಲ್ಲಿ, ಲ್ಯಾಥಮ್ ಕೇವಲ 95 ಎಸೆತಗಳಲ್ಲಿ ತಮ್ಮ ವೃತ್ತಿಜೀವನದ 8 ನೇ ಶತಕವನ್ನು ಪೂರೈಸಿದರೆ, ಫಿಲಿಪ್ಸ್ ಕೇವಲ 39 ಎಸೆತಗಳಲ್ಲಿ 61 ರನ್‌ಗಳ ಸ್ಫೋಟಕ ಇನ್ನಿಂಗ್ಸ್ ಆಡಿದರು. ಲ್ಯಾಥಮ್ 104 ಎಸೆತಗಳಲ್ಲಿ 118 ರನ್ ಗಳಿಸಿ ಅಜೇಯರಾಗಿ ಮರಳಿದರು.

**ಪಾಕ್ ತಂಡದ ಆಮೆಗತಿಯ ಬ್ಯಾಟಿಂಗ್:** 321 ರನ್‌ಗಳ ಬೃಹತ್ ಗುರಿ ಬೆನ್ನಟ್ಟಿದ ಪಾಕಿಸ್ತಾನಕ್ಕೆ ಫಖರ್ ಜಮಾನ್ ಅವರ ಇಂಜುರಿ ದೊಡ್ಡ ಆಘಾತ ನೀಡಿತು. ಆರಂಭದಲ್ಲಿ ಆಮೆಗತಿಯ ಬ್ಯಾಟಿಂಗ್ ಮಾಡಿದ ಪಾಕಿಸ್ತಾನ ಮೊದಲ 10 ಓವರ್‌ಗಳಲ್ಲಿ ಕೇವಲ 22 ರನ್‌ಗಳನ್ನು ಗಳಿಸುವ ಮೂಲಕ ಆರಂಭದಲ್ಲೇ ಪಂದ್ಯವನ್ನು ಕೈಚೆಲ್ಲಿತು. ಈ ವೇಳೆಗೆ ತಾತ್ಕಾಲಿಕ ಆರಂಭಿಕ ಆಟಗಾರ ಸೌದ್ ಶಕೀಲ್ ಮತ್ತು ನಾಯಕ ಮೊಹಮ್ಮದ್ ರಿಜ್ವಾನ್ ಪೆವಿಲಿಯನ್‌ಗೆ ಮರಳಿದರು. ಆ ಬಳಿಕ ಪಾಕಿಸ್ತಾನ ಅಚ್ಚರಿಯ ನಿರ್ಧಾರ ತೆಗೆದುಕೊಂಡು ಗಾಯಗೊಂಡ ಫಖರ್ ಅವರನ್ನು ಬ್ಯಾಟಿಂಗ್‌ಗೆ ಕಳುಹಿಸಿತು. ಆದರೆ ನಡೆಯಲು ಕಷ್ಟಪಡುತ್ತಿದ್ದ ಫಖರ್ ಕೆಲವು ಬೌಂಡರಿಗಳನ್ನು ಹೊಡೆದ ಬಳಿಕ ವಿಕೆಟ್ ಒಪ್ಪಿಸಿದರು. ಅವರ ನಂತರ ಬಂದ ಸಲ್ಮಾನ್ ಅಲಿ ಆಘಾ ಪರಿಸ್ಥಿತಿಯ ಗಂಭೀರತೆಯನ್ನು ಅರಿತು, ಕೆಲವು ದೊಡ್ಡ ಹೊಡೆತಗಳನ್ನು ಹೊಡೆಯುವ ಮೂಲಕ ಪರಿಸ್ಥಿತಿಯನ್ನು ನಿಯಂತ್ರಿಸಲು ಪ್ರಯತ್ನಿಸಿದರು. ಆದರೆ ಅವರೂ ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ನಿಲ್ಲಲು ಸಾಧ್ಯವಾಗಲಿಲ್ಲ.

**ಬಾಬರ್ ನಿಧಾನಗತಿಯ ಬ್ಯಾಟಿಂಗ್:** ಇದೆಲ್ಲದರ ನಡುವೆ, ಪಾಕಿಸ್ತಾನಕ್ಕೆ ದೊಡ್ಡ ಸಮಸ್ಯೆ ಎಂದರೆ ಸ್ಟಾರ್ ಬ್ಯಾಟ್ಸ್‌ಮನ್ ಬಾಬರ್ ಆಝಂ. ಮಾಜಿ ನಾಯಕ ಆರಂಭಿಕರಾಗಿ ಬಂದರೂ ಆರಂಭದಿಂದ ಕೊನೆಯವರೆಗೂ ವೇಗವಾಗಿ ಬ್ಯಾಟಿಂಗ್ ಮಾಡಲು ಹೆಣಗಾಡುತ್ತಿರುವುದು ಕಂಡುಬಂದಿತು. ಇಡೀ ಇನ್ನಿಂಗ್ಸ್‌ನಲ್ಲಿ ಆಮೆಗತಿಯ ಬ್ಯಾಟಿಂಗ್ ಮಾಡಿದ ಬಾಬರ್, ಇತರ ಬ್ಯಾಟರ್‌ಗಳು ಕೂಡ ಒತ್ತಡಕ್ಕೊಳಗಾಗುವಂತೆ ಮಾಡಿದರು. ಅಂತಿಮವಾಗಿ ಬಾಬರ್ ಅರ್ಧಶತಕ ಬಾರಿಸಿದರಾದರೂ ಬರೋಬ್ಬರಿ 90 ಎಸೆತಗಳಲ್ಲಿ 64 ರನ್ ಗಳಿಸಿ ಪೆವಿಲಿಯನ್ ಸೇರಿಕೊಂಡರು. ಕೊನೆಯಲ್ಲಿ ಖುಷ್ದಿಲ್ ಷಾ ಕೇವಲ 49 ಎಸೆತಗಳಲ್ಲಿ 69 ರನ್ ಗಳಿಸುವ ಮೂಲಕ ಸೋಲಿನ ಅಂತರವನ್ನು ಕಡಿಮೆ ಮಾಡಿದರೂ, ಅವರಿಗೂ ಫಲಿತಾಂಶವನ್ನು ಬದಲಾಯಿಸಲು ಸಾಧ್ಯವಾಗಲಿಲ್ಲ. ನ್ಯೂಜಿಲೆಂಡ್ ಪರ ಯುವ ವೇಗಿ ವಿಲ್ ಒ'ರೂರ್ಕ್ ಮತ್ತು ನಾಯಕ ಮಿಚೆಲ್ ಸ್ಯಾಂಟ್ನರ್ ತಲಾ 3 ವಿಕೆಟ್ ಪಡೆದರು.

# ಪುನೀತ್ ರಾಜ್‌ಕುಮಾರ್ ಹೃದಯ ಜ್ಯೋತಿ ಯೋಜನೆ ಎಲ್ಲಾ ತಾಲೂಕಿಗೂ ವಿಸ್ತರಣೆ ಸರ್ಕಾರ ಚಿಂತನೆ

ಬೆಳಗಾವಿ, ಫೆ.19– ಪುನೀತ್ ರಾಜ್ ಕುಮಾರ್ ಹೃದಯ ಜ್ಯೋತಿ ಯೋಜನೆಯನ್ನು ರಾಜ್ಯದ ಎಲ್ಲಾ ತಾಲೂಕುಗಳಿಗೂ ವಿಸ್ತರಣೆ ಮಾಡಲು ರಾಜ್ಯ ಸರ್ಕಾರ ಚಿಂತನೆ ನಡೆಸುತ್ತಿದೆ.



ದಿನೇಶ್ ಗುಂಡೂರಾವ್

ಬೆಳಗಾವಿಯಲ್ಲಿ ಮಾತನಾಡಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ರಾಜ್ಯದ ಎಲ್ಲಾ ತಾಲೂಕುಗಳಿಗೂ ಪುನೀತ್ ರಾಜ್ ಕುಮಾರ್ ಹೃದಯ ಜ್ಯೋತಿ ಯೋಜನೆ ವಿಸ್ತರಣೆ ಮಾಡಲು ಚಿಂತನೆ ನಡೆಸಲಾಗುತ್ತಿದೆ. ಅದರಂತೆ ಡಯಾಲಿಸಿಸ್ ಕೇಂದ್ರಗಳನ್ನು ಬದಲಾವಣೆ ಮಾಡಲಾಗಿದ್ದು, ಇದಕ್ಕೆ ಶೀಘ್ರದಲ್ಲೇ ಮುಖ್ಯಮಂತ್ರಿಗಳು ಚಾಲನೆ ನೀಡಲಿದ್ದಾರೆ ಎಂದು ಹೇಳಿದರು.

ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಡೇಕ್ ಕೇರ್ ಕೀಮೋಥೆರಪಿ ಆರಂಭಿಸಲಾಗುತ್ತಿದೆ. ಪುನೀತ್ ರಾಜ್‌ಕುಮಾರ್ ಹೃದಯಜ್ಯೋತಿ ಯೋಜನೆಯಡಿ ಹೃದಯಾಘಾತದ ಸಂದರ್ಭದಲ್ಲಿ 25,000 ರೂ. ಮೌಲ್ಯದ ಜೀವರಕ್ಷಕ ಇಂಜೆಕ್ಷನ್ ಉಚಿತವಾಗಿ ನೀಡಲಾಗುತ್ತಿದೆ. 1 ಮತ್ತು 2ನೇ ಹಂತದಲ್ಲಿ 15 ಜಿಲ್ಲೆಗಳ 70 ತಾಲೂಕು ಆಸ್ಪತ್ರೆಗಳಲ್ಲಿ ಈ ಯೋಜನೆ ಜಾರಿಯಾಗಿದ್ದು, 3 ಮತ್ತು 4ನೇ ಹಂತದಲ್ಲಿ ಉಳಿದ 16 ಜಿಲ್ಲೆಗಳ ಎಲ್ಲಾ ತಾಲೂಕುಗಳಲ್ಲಿ ಪುನೀತ್ ರಾಜ್‌ಕುಮಾರ್ ಹೃದಯಜ್ಯೋತಿ ಯೋಜನೆ ವಿಸ್ತರಣೆ ಮಾಡಲಾಗುವುದು ಎಂದು ತಿಳಿಸಿದರು.

ರಾಜ್ಯದ ಕೆಲವು ಭಾಗಗಳಲ್ಲಿ ಹರಡುತ್ತಿದ್ದ ಕ್ಯಾಸನೂರು ಫಾರೆಸ್ಟ್ ಡಿಸೀಸ್ (ಕೆಎಫ್‌ಡಿ)ನ್ನು ಸಾಮಾನ್ಯವಾಗಿ ಮಂಗನ ಜ್ವರ ಎಂದು ಕರೆಯಲಾಗುತ್ತದೆ, ಇದನ್ನು ನಿಯಂತ್ರಿಸಲು ಸರ್ಕಾರ ಸಾಧ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಂಡಿದೆ. ಕಾಯಿಲೆಗೆ ಉಚಿತವಾಗಿ ಚಿಕಿತ್ಸೆ ನೀಡಲಾಗುತ್ತಿದೆ. ಎಪಿಎಲ್ ಕಾರ್ಡ್ ಹೊಂದಿರುವವರಿಗೂ ಉಚಿತ ಚಿಕಿತ್ಸೆ ನೀಡಲಾಗುತ್ತಿದೆ. ರಾಜ್ಯದಲ್ಲಿ ಕೆಎಫ್‌ಡಿ ಬಾಧಿತ ಎಪಿಎಲ್ ಕುಟುಂಬದ ಸದಸ್ಯರಿಗೆ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಅಡಿ ನೋಂದಾಯಿಸಿಕೊಂಡಿರುವವರಿಗೆ ಉಚಿತ ಚಿಕಿತ್ಸೆ ದೊರೆಯಲಿದೆ ಎಂದು ಮಾಹಿತಿ ನೀಡಿದರು.

## ಅಹಿಂದ ಜನ ಜಾಗೃತಿ ವೇದಿಕೆ ವಾರ್ಷಿಕೋತ್ಸವ; ಏ.25ರಂದು 101 ಜೋಡಿಗೆ ಕಂಕಣ ಭಾಗ್ಯ



ಮೈಸೂರು, ಫೆ19(ಎಂಟಿವೈ)– ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಏ.25ರಂದು ರಾಜ್ಯ ಅಹಿಂದ ಜನ ಜಾಗೃತಿ ವೇದಿಕೆಯ ಎರಡನೇ ವಾರ್ಷಿಕೋತ್ಸವ ಹಿನ್ನೆಲೆಯಲ್ಲಿ 101 ಜೋಡಿಗೆ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮ ಆಯೋಜಿಸಲು ಉದ್ದೇಶಿಸಲಾಗಿದೆ ಎಂದು ರಾಜ್ಯ ಅಹಿಂದ ಜನ ಜಾಗೃತಿ ವೇದಿಕೆಯ ರಾಜ್ಯಾಧ್ಯಕ್ಷ ಪಿ.ಕೆ. ಸುರೇಶ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಎರಡು ವರ್ಷದ ಹಿಂದೆ ಸ್ಥಾಪಿತವಾದ ರಾಜ್ಯ ಅಹಿಂದ ಜನ ಜಾಗೃತಿ ವೇದಿಕೆಯ ಹಲವು ಸಮಾಜಮುಖಿ ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿದೆ. ಎರಡನೇ ವಾರ್ಷಿಕೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಲಾಗಿದ್ದು, ಏಪ್ರಿಲ್ 25ರಂದು ಮಹಾರಾಜ ಕಾಲೇಜು ಮೈದಾನದಲ್ಲಿ 101 ಜೋಡಿಗೆ ಉಚಿತ ಸಾಮೂಹಿಕ ವಿವಾಹ ನಡೆಸಲಾಗುತ್ತಿದೆ. ವಧುವಿಗೆ ತಾಳಿ, ವಧು–ವರರಿಗೆ ವಸ್ತ್ರವನ್ನು ಉಚಿತವಾಗಿ ನೀಡಲಾಗುವುದು. ಈ ಕುರಿತ ಹೆಚ್ಚಿನ ಮಾಹಿತಿಯನ್ನು ಶೀಘ್ರದಲ್ಲೇ ತಿಳಿಸಲಾಗುವುದು. ಅಂದು ನಡೆಯುವ ಕಾರ್ಯಕ್ರಮದಲ್ಲಿ ರಾಜ್ಯ ಸರ್ಕಾರದ ಸಚಿವರು, ಗಣ್ಯರು, ಚಿಂತಕರು, ಪ್ರಗತಿಪರರು ಸೇರಿದಂತೆ ಸಾಮಾಜಿಕ ಕಳಕಳಿಯುಳ್ಳವರು ಪಾಲ್ಗೊಳ್ಳಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ರಾಜ್ಯ ಅಹಿಂದ ಜನ ಜಾಗೃತಿ ವೇದಿಕೆಯ ಪದಾಧಿಕಾರಿಗಳಾದ ವಿಜಯಕುಮಾರ್, ಮಹದೇವ್, ಸುರೇಶ್, ಎಸ್.ಮಂಜುನಾಥ್ ಹಾಗೂ ಶ್ರೀಧರ್ ಇದ್ದರು.

## ಸ್ಮಶಾನಕ್ಕೆ ರಸ್ತೆ ನಿರ್ಮಾಣಕ್ಕೆ ಆಗ್ರಹಿಸಿ ಇಂದು ಪ್ರತಿಭಟನೆ

ಮೈಸೂರು, ಫೆ.19(ಎಂಟಿವೈ)– ಮೈಸೂರು ಜಿಲ್ಲೆಯ ತಿ.ನರಸೀಪುರ ತಾಲೂಕಿನ ಬನ್ನೂರು ಪಟ್ಟಣದ ಸುಭಾಷ್ ನಗರದ ಆದಿಜಾಂಬವ ಸಮುದಾಯದ ಜನರಿಗಾಗಿ ಕಾವೇರಿ ನದಿ ತೀರದಲ್ಲಿ ನಿರ್ಮಿಸಿರುವ ಸ್ಮಶಾನಕ್ಕೆ ರಸ್ತೆ ನಿರ್ಮಾಣ ಸೇರಿದಂತೆ ಶಾಶ್ವತ ಮೂಲ ಸೌಲಭ್ಯ ಕಲ್ಪಿಸುವಂತೆ ಒತ್ತಾಯಿಸಿ ನಾಳೆ(ಫೆ.20) ಬನ್ನೂರು ಪುರಸಭೆಯ ಮುಂಭಾಗ ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಸಲಾಗುತ್ತಿದೆ ಎಂದು ಡಾ. ಬಾಬು ಜಗಜೀವನ ರಾಮ್ ಜನಕಲ್ಯಾಣ ಸಂಘದ ಅಧ್ಯಕ್ಷ ಮಲೆಯೂರು ಶಂಕರ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆದಿಜಾಂಬವ ಸಮುದಾಯದ ಜನರಿಗೆ ಸೀಮಿತಗೊಳ್ಳುವಂತೆ ಸ್ಮಶಾನ ನಿರ್ಮಾಣಕ್ಕಾಗಿ ಒತ್ತಾಯಿಸಿ, ಕಳೆದ 20 ವರ್ಷದಿಂದ ಹೋರಾಟ ಮಾಡಿಕೊಂಡು ಬರಲಾಗುತ್ತಿತ್ತು. ಈ ಹೋರಾಟದ ಪ್ರತಿಫಲವಾಗಿ ಕಾವೇರಿ ನದಿ ದಡದಲ್ಲಿ ಸ್ಮಶಾನಕ್ಕಾಗಿ ಜಾಗ ಮಂಜೂರಾಗಿದೆ. ಅಲ್ಲದೆ, ಸ್ಮಶಾನ ಅಭಿವೃದ್ಧಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ 20 ಲಕ್ಷ ರೂ ಅನುದಾನ ಬಿಡುಗಡೆ ಮಾಡಿಸಿದ್ದಾರೆ. ಸ್ಮಶಾನಕ್ಕೆ ರಸ್ತೆ ನಿರ್ಮಿಸಲು ಭೂಮಿ ಸ್ವಾಧೀನಕ್ಕಾಗಿ 26 ಲಕ್ಷ ರೂ. ಪ್ರತ್ಯೇಕವಾಗಿ ಮೀಸಲಿಡಲಾಗಿದೆ. ಆದರೆ, ಅಧಿಕಾರಿಗಳು ಸ್ಮಶಾನ ಅಭಿವೃದ್ಧಿಗೆ ಯಾವುದೇ ಇಚ್ಛಾಶಕ್ತಿ ಪ್ರದರ್ಶಿಸುತ್ತಿಲ್ಲ. ಶವಸಂಸ್ಕಾರಕ್ಕಾಗಿ ಹೊಲ–ಗದ್ದೆಯ ಬದು(ತೆವರಿ) ಮೇಲೆ ನಡೆದುಕೊಂಡು ಸಾಗಿಸಬೇಕಾದ ಅನಿವಾರ್ಯತೆ ಇದ್ದು, ಶವ ಕೊಂಡೊಯ್ಯುವ ವೇಳೆ ಅನೇಕರು ಬೀಳುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಶಾಶ್ವತ ಪರಿಹಾರಕ್ಕಾಗಿ ಒತ್ತಾಯಿಸಿ ನಾಳೆಯಿಂದ ಅನಿರ್ದಿಷ್ಟಾವಧಿ ಪ್ರತಿಭಟನೆ ಆರಂಭಿಸುತ್ತಿರುವುದಾಗಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಬನ್ನೂರು ಪುರಸಭಾ ಸದಸ್ಯ ಶಿವಣ್ಣ, ಮುಖಂಡರಾದ ಕೇತಹಳ್ಳಿ ಲಿಂಗರಾಜು, ಹಲಗಯ್ಯ ನಹುಂಡಿ ಶಂಕರ್, ಬನ್ನೂರು ರವಿ ಇದ್ದರು.

## ಪರಮಹಂಸ ಯೋಗ ಮಹಾವಿದ್ಯಾಲಯದಲ್ಲಿ ಐವೈಟಿ ಕೋರ್ಸ್‌ಗೆ ಅರ್ಜಿ ಆಹ್ವಾನ

ಮೈಸೂರು, ಫೆ.19(ಎಂಟಿವೈ)– ಮೈಸೂರಿನ ಪರಮಹಂಸ ಯೋಗ ಮಹಾವಿದ್ಯಾಲಯದಲ್ಲಿ ಅಂತಾರಾಷ್ಟ್ರೀಯ ಯೋಗ ಶಿಕ್ಷಕ (ಐವೈಟಿ) ತರಬೇತಿ ಕೋರ್ಸ್‌ಗೆ ಅರ್ಜಿ ಆಹ್ವಾನಿಸಲಾಗಿದೆ ಎಂದು ವಿದ್ಯಾಲಯದ ಮುಖ್ಯಸ್ಥ ಶಿವಪ್ರಕಾಶ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಶ್ವಮಟ್ಟದಲ್ಲಿ ಯೋಗ ಶಿಕ್ಷಕರ ಕೊರತೆ ಎದ್ದು ಕಾಣುತ್ತಿದೆ. ಯೋಗ ಶಿಕ್ಷಕರಿಗೆ ಬಹುಬೇಡಿಕೆ ಇದೆ. ಈ ಹಿನ್ನೆಲೆಯಲ್ಲಿ ಪರಮಹಂಸ ಯೋಗ ಮಹಾವಿದ್ಯಾಲಯದಲ್ಲಿ ಅಂತಾರಾಷ್ಟ್ರೀಯ ಯೋಗ ಶಿಕ್ಷಕ (ಐವೈಟಿ) ತರಬೇತಿ ಕೋರ್ಸ್ ಆರಂಭಿಸಲಾಗುತ್ತಿದ್ದು, ಅದಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಈ ಕೋರ್ಸ್‌ನಲ್ಲಿ 100, 200 ಹಾಗೂ 300 ಗಂಟೆಗಳ ತರಬೇತಿಯನ್ನು ಆಫ್‌ಲೈನ್ ಅಥವಾ ಆನ್‌ಲೈನ್‌ನಲ್ಲಿ ಪ್ರತಿ ಶನಿವಾರ ಮತ್ತು ಭಾನುವಾರದಂದು ವಾರಾಂತ್ಯ ತರಗತಿಗಳಲ್ಲಿ ನುರಿತ ಯೋಗ ತಜ್ಞರು ಹಾಗೂ ಪರಿಣತ ವೈದ್ಯರ ಮಾರ್ಗದರ್ಶನದಲ್ಲಿ ಯೋಗಾಸನ, ಯೋಗ ಥೆರಪಿ, ಪ್ರಾಣಾಯಾಮ, ಧ್ಯಾನ, ಮುದ್ರಾ ಥೆರಪಿ, ಯೋಗಶಾಸ್ತ್ರ, ಪತಂಜಲಿ ಯೋಗ ಸೂತ್ರಗಳು, ಶರೀರ ಶಾಸ್ತ್ರ, ಫಿಸಿಯಾಲಜಿ, ಕಲಿಯುವ ವಿಧಾನ, ಕಲಿಸುವಂತಹ ಕಲೆ, ಆಹಾರ ಕ್ರಮ, ಮನೆ ಮದ್ದು, ಜೀವನ ಕೌಶಲ ಇತ್ಯಾದಿ ವಿದ್ಯೆಗಳ ತರಬೇತಿ ನೀಡಲಾಗುವುದು ಎಂದರು.

ಮಾ.1ರಿಂದ ತರಬೇತಿ ಆರಂಭವಾಗಲಿದ್ದು, ತರಬೇತಿ ಪಡೆದವರಿಗೆ ಪ್ರಮಾಣಪತ್ರ ಹಾಗೂ ಯೋಗಾಚಾರ್ಯ ಪ್ರಶಸ್ತಿ ನೀಡಲಾಗುವುದು. ಆಸಕ್ತರು ಹೆಚ್ಚಿನ ಮಾಹಿತಿ ಹಾಗೂ ಹೆಸರು ನೋಂದಾಯಿಸಲು ಮೊ.7090157993, 9008727172 ಸಂಪರ್ಕಿಸುವಂತೆ ಕೋರಿದರು.

ಸುದ್ದಿಗೋಷ್ಠಿಯಲ್ಲಿ ಮೈಸೂರು ಯೋಗ ಒಕ್ಕೂಟದ ಅಧ್ಯಕ್ಷ ದೇವರಾಜ್, ಗೌರವಾಧ್ಯಕ್ಷ ಪ್ರಕಾಶ್, ಮುಕುಂದನ್, ಪಶುಪತಿ, ವಿಜೇಂದ್ರ ಕುಮಾರ್ ಇದ್ದರು.

## ಮುಂಬೈ ರಣಜಿ ಕ್ರಿಕೆಟ್ ತಂಡದ ಮಾಜಿ ನಾಯಕ ಮಿಲಿಂದ ರೇಗೆ ನಿಧನ

ಮುಂಬೈ, ಫೆ.19– ಮುಂಬೈ ರಣಜಿ ಕ್ರಿಕೆಟ್ ತಂಡದ ಮಾಜಿ ನಾಯಕ ಮಿಲಿಂದ್ ರೇಗೆ ಹೃದಯಾಘಾತದಿಂದ ನಿಧನರಾಗಿದ್ದಾರೆ.



ಇತ್ತೀಚೆಗಷ್ಟೇ ತಮ್ಮ 76ನೇ ಹುಟ್ಟುಹಬ್ಬವನ್ನು ಆಚರಿಸಿಕೊಂಡಿದ್ದ ಅವರು ಬುಧವಾರ ನಿಧನರಾಗಿರುವುದಾಗಿ BCCI ಅಧಿಕೃತ ಮಾಹಿತಿ ನೀಡಿದೆ. 1966–67 ಮತ್ತು 1977–78ರ ನಡುವೆ 52 ಪ್ರಥಮ ದರ್ಜೆ ಪಂದ್ಯಗಳಲ್ಲಿ ತನ್ನ ಆಫ್–ಸ್ಪಿನ್‌ನೊಂದಿಗೆ 126 ವಿಕೆಟ್‌ಗಳನ್ನು ಗಳಿಸಿದ ರೇಗೆ, 23.56ರ ಸರಾಸರಿಯಲ್ಲಿ 1,532 ರನ್ ಗಳಿಸಿದ್ದರು. ನಿವೃತ್ತಿಯ ನಂತರ ಮುಂಬೈ ಕ್ರಿಕೆಟ್ ಅಸೋಸಿಯೇಷನ್‌ನಲ್ಲಿ ಸಕ್ರಿಯರಾಗಿ ತೊಡಗಿಸಿಕೊಂಡಿದ್ದ ಅವರು, ಆಯ್ಕೆಗಾರರಾಗಿ ಮತ್ತು ಮುಖ್ಯ ಆಯ್ಕೆಗಾರರಾಗಿ ಸೇರಿದಂತೆ ವಿವಿಧ ಹುದ್ದೆಗಳನ್ನು ನಿಭಾಯಿಸಿದ್ದರು. ಸಚಿನ್ ತೆಂಡೂಲ್ಕರ್‌ನಿಂದ ಹಿಡಿದು ಯಶಸ್ವಿ ಜೈಸ್ವಾಲ್‌ವರೆಗೆ ಪ್ರತಿಭೆಯನ್ನು ಗುರುತಿಸಿ ಅವರನ್ನು ಉನ್ನತ ಮಟ್ಟದಲ್ಲಿ ಉತ್ತೇಜಿಸಿದ ಮೊದಲ ಮಾಜಿ ಕ್ರಿಕೆಟಿಗರಲ್ಲಿ ಅವರು ಒಬ್ಬರು. ಕಳೆದ ನಾಲ್ಕು ವರ್ಷಗಳಿಂದ, ಅವರನ್ನು ಮುಂಬೈ ಕ್ರಿಕೆಟ್ ಅಸೋಸಿಯೇಷನ್ ಸಲಹೆಗಾರರಾಗಿ ನೇಮಿಸಿತ್ತು.

ರೇಗೆ ಸುನಿಲ್ ಗವಾಸ್ಕರ್ ಅವರೊಂದಿಗೆ ದೀರ್ಘಕಾಲದ ಗೆಳೆತನ ಹೊಂದಿದ್ದರು. ಇಬ್ಬರೂ ಒಂದೇ ಶಾಲೆ ಮತ್ತು ಕಾಲೇಜಿನಲ್ಲಿ ವ್ಯಾಸಂಗ ಮಾಡಿದ್ದರು.ದಾದರ್ ಯೂನಿಯನ್ ಸ್ಪೋರ್ಟಿಂಗ್ ಕ್ಲಬ್‌ನಲ್ಲಿ ಒಟ್ಟಿಗೆ ಆಡಿದ್ದರು. ರೇಗೆ ಅವರು ಪತ್ನಿ ರಾಜ್, ಪುತ್ರರಾದ ಸಿದ್ಧಾರ್ಥ ಮತ್ತು ಆದಿತ್ಯ ಮತ್ತು ಅವರ ಕುಟುಂಬ ಸದಸ್ಯರನ್ನು ಅಗಲಿದ್ದಾರೆ. ಗುರುವಾರ ಮುಂಬೈನಲ್ಲಿ ಅಂತ್ಯಕ್ರಿಯೆ ನಡೆಯಲಿದೆ.



**ಮೈಸೂರು ಮಿತ್ರ 45**

**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು